ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

ಜೂನ್

2013

## ರಾಜ್ಯ

**ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ-2013 ಕ್ಕೆ ಒಪ್ಪಿಗೆ**

ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆ ಮತ್ತು "ಪೊಲೀಸ್ ಎಸ್ಟಬ್ಲಿಶ್ ಮೆಂಟ್ ಬೋರ್ಡ್ (ಪಿಇಬಿ)" ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ಮಾಡಿದ ಬೆನ್ನಲ್ಲೇ "ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ-2013' ಕ್ಕೆ ವಿಧಾನಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಹೀಗಾಗಿ ಪ್ರಸ್ತುತ ಜಾರಿಯಲ್ಲಿದ್ದ "ಕರ್ನಾಟಕ ಪೊಲೀಸ್" ನಿಯಮದಲ್ಲಿ ಸ್ವಲ್ಪ ಬದಲಾವಣೆ ತರಲಾಗಿದೆ. ಆದರೆ ಈ ತಿದ್ದುಪಡಿಗೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿತಾದರೂ ಮಸೂದೆ ಅಂಗೀಕಾರಗೊಂಡಿದೆ.

ತಿದ್ದುಪಡಿಯಲ್ಲಿ ಏನಿದೆ?

- ಡೈರೆಕ್ಟರ್ ಜನರಲ್ ಮತ್ತು ಇನ್ಸ್ ಪೆಕ್ಟರ್ ಜನರಲ್ ನೇತೃತ್ವದ "'ಪಿಇಬಿ" ಬೋರ್ಡ್ನಲ್ಲಿ ಹೆಚ್ಚುವರಿ ಡೈರೆಕ್ಟರ್ ಜನರಲ್ ಪೊಲೀಸ್ ಶ್ರೇಣಿ ಕೆಳಗಿನ ಮೂವರು "ಅತ್ಯಂತ" ಹಿರಿಯ ಪೊಲೀಸ್ ಅಧಿಕಾರಿಗಳನ್ನು ಸದಸ್ಯರನ್ನಾಗಿ ನೇಮಿಸಲು ಅವಕಾಶ ಕಲ್ಪಿಸಲಾಗಿತ್ತು. ತಿದ್ದುಪಡಿಯ ಅನ್ವಯ ''ಅತ್ಯಂತ ಹಿರಿಯ''ವನ್ನು ಕೈಬಿಡಲಾಗಿದ್ದು, ಹಿರಿಯ ಪೊಲೀಸ್ ಅಧಿಕಾರಿಗಳು ಎಂದು ಸೇರಿಸಲಾಗಿದೆ.
- ಕಾಯಿದೆ ಉಪ ವಿಭಾಗ (2) (ಸಿ)ಯಡಿ ''ಹೆಚ್ಚುವರಿ ಸುಪರಿಡೆಂಟ್ ಆಫ್ ಪೊಲೀಸ್'' ನೇಮಕಾತಿ ಮತ್ತು ವರ್ಗಾವಣೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಅಧಿಕಾರವನ್ನು ಇದುವರೆಗೂ ಬೋರ್ಡ್ ಹೊಂದಿತ್ತು. ತಿದ್ದುಪಡಿಯ ಮೂಲಕ ಈ ಅಧಿಕಾರವನ್ನು ತೆಗೆದುಹಾಕಲಾಗಿದ್ದು, ಸರ್ಕಾರಕ್ಕೆ ನೀಡಲಾಗಿದೆ.
- ಈ ತಿದ್ದುಪಡಿ ಪ್ರಕಾರ ಪೊಲೀಸ್ ನೇಮಕಾತಿ ಮತ್ತು ವರ್ಗಾವಣೆ ಮೇಲೆ ಸರ್ಕಾರ ಸಂಪೂರ್ಣ ನಿಯಂತ್ರಣವನ್ನು ಸಾಧಿಸಲು ಅನುಕೂಲವಾಗಲಿದೆ.

**ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆಗೆ ಒಪ್ಪಿಗೆ**

ವರ್ಷಕ್ಕೆ ಕನಿಷ್ಠ ಎರಡು ಬಾರಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸಲು ವಿಫಲರಾಗುವವ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಆಯಾ ವಾರ್ಡ್ ಸದಸ್ಯರನ್ನು ಅನರ್ಹಗೊಳಿಸಲು ಅವಕಾಶ ಕಲ್ಪಿಸುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆಗೆ ವಿರೋಧ ಪಕ್ಷಗಳ ವಿರೋಧ ನಡುವೆಯು ವಿಧಾನಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

- ತಿದ್ದುಪಡಿಯ ಅನ್ವಯ ವರ್ಷಕ್ಕೆ ಎರಡು ಬಾರಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಯನ್ನು ನಡೆಸಲು ಅಶಕ್ತರಾಗುವ ಅಧ್ಯಕ್ಷರನ್ನು ಮತ್ತು ಆ ವಾರ್ಡಿನ ಸದಸ್ಯರನ್ನು ಅನರ್ಹಗೊಳಿಸಲಾಗುವುದು. ಅಲ್ಲದೇ ಗ್ರಾಮ ಸಭೆ ಮತ್ತು ವಾರ್ಡ್ ಸಭೆಯನ್ನು ನಡೆಸಲು ನೆರವು ನೀಡದ ಪಂಚಾಯತ್ ನೌಕರರು (ಪಿ.ಡಿ.ಓ/ಕಾರ್ಯದರ್ಶಿ) ವಿರುದ್ದವೂ ಶಿಸ್ತಿನ ಕ್ರಮ ಜರುಗಿಸಲಾಗುವುದು.
- ಇಂತಹ ಪ್ರಕರಣಗಳನ್ನು ವಿಚಾರಿಸಿ ಕ್ರಮಕೈಗೊಳ್ಳುವ ಅಧಿಕಾರವನ್ನು ಪ್ರಾದೇಶಿಕ ಆಯುಕ್ತರಿಗೆ ನೀಡಲಾಗಿದೆ. ಗ್ರಾಮ ಸಭೆ ಅಥವಾ ವಾರ್ಡ್ ಸಭೆ ನಡೆಸಿಲ್ಲ ಎಂದು ದೂರು ಸ್ವೀಕರಿಸಿದ 45 ದಿನದೊಳಗೆ ಪ್ರಾದೇಶಿಕ ಆಯುಕ್ತರು ವಿಚಾರಣೆ ನಡೆಸಿ ಕ್ರಮಕೈಗೊಳ್ಳಬೇಕು.

**ವಾರ್ಡ್ ಸಭೆ/ಗ್ರಾಮಸಭೆ:**

**ವಾರ್ಡ್ ಸಭೆ:** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993 ರ ಪ್ರಕರಣ 3 ರಲ್ಲಿ ವಾರ್ಡ್ ಸಭೆಯ ಬಗ್ಗೆ ಉಲ್ಲೇಖಿಸಲಾಗಿದೆ. ಇದರ ಅನ್ವಯ ವರ್ಷಕ್ಕೆ ಕನಿಷ್ಠ ಎರಡು ಬಾರಿ, ಅಂದರೆ ಆರು ತಿಂಗಳಿಗೆ ಒಂದು ಸಲ ವಾರ್ಡ್ ಸಭೆಯನ್ನು ಕರೆಯತಕ್ಕದ್ದು.

- ವಾರ್ಡ್ ಸಭೆಯು ಸೇರುವಾಗ, ವಾರ್ಡ್ ಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೆಯ ಒಂದರಷ್ಟು ಅಥವಾ ಇಪ್ಪತ್ತು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ, ಅದು ಆ ಸಭೆಯ ಕೋರಂ ಆಗಿರತಕ್ಕದ್ದು. ಸಾಧ್ಯವಾದಷ್ಟು ಮಟ್ಟಿಗೆ ಹಾಜರಾಗುವ ಮತದಾರರಲ್ಲಿ ಶೇ 30 ಕ್ಕೆ ಕಡಿಮೆ ಇಲ್ಲದ್ದಷ್ಟು ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವಂತೆ ನೋಡಿಕೊಳ್ಳತಕ್ಕದ್ದು, ಹಾಗೂ ಅನುಸೂಚಿತ ಪಂಗಡ ಮತ್ತು ಅನುಸೂಚಿತ ಜಾತಿಗಳು ಸೇರಿದ ವ್ಯಕ್ತಿಗಳು ವಾರ್ಡ್ ಸಭೆಯಲ್ಲಿ ಅವರ ಜನಸಂಖ್ಯೆಯ ಅನುಪಾತಕ್ಕೆ ಅನುಸಾರವಾಗಿ ಪ್ರತಿನಿಧಿಸತಕ್ಕದ್ದು.
- ವಾರ್ಡ್ ಸಭೆಯ ಪ್ರತಿಯೊಂದು ಸಭೆಗೆ ಸಂಬಂಧಪಟ್ಟ ವಾರ್ಡ್ ಸಭೆಯ ಪ್ರದೇಶದಿಂದ ಚುನಾಯಿತನಾದ ಗ್ರಾಮ ಪಂಚಾಯತಿಯ ಸದಸ್ಯನು ಅಥವಾ ಅವನ ಗೈರು ಹಾಜರಿಯಲ್ಲಿ ಗ್ರಾಮ ಪಂಚಾಯತಿ ನಾಮ ನಿರ್ದೇಶನ ಮಾಡಿದ ಯಾವೊಬ್ಬ ಇತರ ಸದಸ್ಯನು ಅಧ್ಯಕ್ಷತೆಯನ್ನು ವಹಿಸಿಕೊಳ್ಳತಕ್ಕದ್ದು.

**ಗ್ರಾಮ ಸಭೆ**: ಪಂಚಾಯತ್ ರಾಜ್ ಅಧಿನಿಯಮ-1993 ರ ಪ್ರಕರಣ 3ಎ ರಲ್ಲಿ ಗ್ರಾಮ ಸಭೆಯ ಬಗ್ಗೆ ಹೇಳಲಾಗಿದೆ.ಅಧಿನಿಯಮದ ಪ್ರಕಾರ ಪ್ರತಿ ಆರು ತಿಂಗಳಿಗೊಮ್ಮೆ ಗ್ರಾಮ ಸಭೆಯನ್ನು ನಡೆಸಬೇಕು.

- ಗ್ರಾಮ ಸಭೆಯು ಸೇರುವಾಗ ಗ್ರಾಮ ಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕೆ ಕಡಿಮೆ ಇಲ್ಲದಷ್ಟು ಅಥವಾ ನೂರು ಸದಸ್ಯರು ಇವುಗಳಲ್ಲಿ ಯಾವುದೂ ಕಡಿಮೆಯೋ ಅದು ಸಭೆಯ ಕೋರಂ ಆಗಿರತಕ್ಕದ್ದು.
- ಗ್ರಾಮ ಸಭೆಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತಿಯ ಅಧ್ಯಕ್ಷನು ಅಥವಾ ಆತನ ಗೈರುಹಾಜರಿಯಲ್ಲಿ ಸಂಬಂಧಪಟ್ಟ ಗ್ರಾಮಪಂಚಾಯತಿಯ ಉಪಾಧ್ಯಕ್ಷರು ವಹಿಸಿಕೊಳ್ಳತಕ್ಕದ್ದು. ಒಂದು ವೇಳೆ ಇವರಿಬ್ಬರೂ ಗೈರು ಹಾಜರಾದ ಹಿನ್ನಲೆಯಲ್ಲಿ ಗ್ರಾಮ ಪಂಚಾಯತಿ ನಾಮನಿರ್ದೇಶಿಸಿದ ಸದಸ್ಯನು ಅಧ್ಯಕ್ಷತೆಯನ್ನು ವಹಿಸಿಕೊಳ್ಳುವುದು.

**ಬೆಳೆ ವಿಮೆ ಯೋಜನೆ: ಪ್ರಕಟಣೆ ಹೊರಡಿಸಿದ ರಾಜ್ಯ ಸರ್ಕಾರ**

ಹವಾಮಾನ ವೈಪರಿತ್ಯದಿಂದ ಹಾನಿಗೊಳಗಾಗುವ ರೈತರಿಗೆ ಪರಿಹಾರ ದೊರಕಿಸುವ ಸಲುವಾಗಿ ಮೂರು ಕೃಷಿ ಬೆಳೆ ವಿಮಾ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಪ್ರಕಟಣೆ ಹೊರಡಿಸಿದೆ. ರಾಷ್ಟ್ರೀಯ ಕೃಷಿ ವಿಮಾ ಯೋಜನೆ (NAIS), ಮಾರ್ಪಡಿಸಲಾದ ಕೃಷಿ ವಿಮಾ ಯೋಜನೆ (MNAIS) ಮತ್ತು ಹವಾಮಾನ ಆಧಾರಿತ ಕೃಷಿ ವಿಮಾ ಯೋಜನೆಗಳನ್ನು ಖಾರೀಫ್ ಋತುವಿನಿಂದ ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೊಳಿಸಲಾಗುವುದೆಂದು ಕೃಷಿ ಇಲಾಖೆ ತಿಳಿಸಿದೆ.

- ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ 26 ಜಿಲ್ಲೆಗಳಲ್ಲಿ 25 ಪ್ರಮುಖ ಕೃಷಿ ಬೆಳೆಗಳಿಗೆ ವಿಮೆ ಕಲ್ಪಿಸಲಾಗುವುದು. ಅದರಲ್ಲೂ ಮುಖ್ಯವಾಗಿ ಆಹಾರ ಬೆಳೆಗಳು (ಭತ್ತ, ಜೋಳ, ರಾಗಿ, ನವಣೆ ಇತ್ಯಾದಿ), ಎಣ್ಣೆ ಕಾಳುಗಳು ಮತ್ತು ತೋಟಗಾರಿಕೆ ಬೆಳೆಗಳಿಗೆ ಈ ಯೋಜನೆಯಡಿ ವಿಮೆ ಕಲ್ಪಿಸಲಾಗುವುದು. ಎಲ್ಲಾ ವರ್ಗದ ರೈತರಿಗೆ ಈ ಯೋಜನೆ ಲಭ್ಯವಿದ್ದು, ಈಗಾಗಲೇ ಸಾಲ ಪಡೆದಿರುವ ಮತ್ತು ಪಡೆಯದಿರುವ ರೈತರು ಸಹ ಇದರ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.
- ಮಾರ್ಪಡಿಸಲಾದ ಕೃಷಿ ವಿಮಾ ಯೋಜನೆಯಡಿ ಗುಲ್ಬರ್ಗ, ಶಿವಮೊಗ್ಗ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ 27 ಬೆಳೆಗಳನ್ನು ತರಲಾಗುವುದು. ಕೃಷಿ ಸಾಲ ಪಡೆದಿರುವ ರೈತರು ಈ ಯೋಜನೆಗೆ ಕಡ್ಡಾಯವಾಗಿ ನೊಂದಾಯಿಸಿಕೊಳ್ಳಬೇಕು.
- ಹವಾಮಾನ ಆಧಾರಿತ ಕೃಷಿ ವಿಮಾ ಯೋಜನೆಯನ್ನು ಮುಖ್ಯವಾಗಿ ತೋಟಗಾರಿಕೆ ಬೆಳೆಗಳಿಗೆ ವಿಸ್ತರಿಸಲಾಗುವುದು. ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಸೇರಿದಂತೆ ಒಟ್ಟು 20 ಜಿಲ್ಲೆಗಳನ್ನು ಈ ಯೋಜನೆಯಡಿ ತರಲಾಗುವುದೆಂದು ಕೃಷಿ ಇಲಾಖೆ ತಿಳಿಸಿದೆ.

- ಈ ಯೋಜನೆಗಳ ಉಪಯೋಗ ಬಯಸುವ ರೈತರು ಆಗಸ್ಟ್ 31, 2013 ರೊಳಗೆ ಅರ್ಜಿಯನ್ನು ಸಲ್ಲಿಸಬೇಕು. ಕಳೆದ ವರ್ಷ 4.2 ಲಕ್ಷ ರೈತರು ರಾಷ್ಟ್ರೀಯ ಕೃಷಿ ವಿಮಾ ಯೋಜನೆಗೆ ನೋಂದಾಯಿತರಾಗಿದ್ದರು.

**ರಾಜ್ಯದ ಶಾಲಾ ಮಕ್ಕಳಿಗೆ ಐರನ್ ಮತ್ತು ಫೊಲಿಕ್ ಆಸಿಡ್ ಮಾತ್ರೆ**

ಮಕ್ಕಳಲ್ಲಿ ರಕ್ತಹೀನತೆ (Anaemia) ಸಮಸ್ಯೆಯನ್ನು ದೂರವಾಗಿಸಲು ಸರ್ಕಾರಿ ಶಾಲೆಯ ಮಕ್ಕಳಿಗೆ ಐರನ್ ಮತ್ತು ಫೋಲಿಕ್ ಆಸಿಡ್ ಮಾತ್ರೆಗಳನ್ನು ವಿತರಿಸಲು ಕರ್ನಾಟಕ ಸರ್ಕಾರ ಚಿಂತನೆ ನಡೆಸಿರುವುದಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಅವರು ತಿಳಿಸಿದ್ದಾರೆ. ಮಕ್ಕಳು ಮತ್ತು ಮಹಿಳೆಯರಲ್ಲಿ ರಕ್ತಹೀನತೆ ಸಮಸ್ಯೆ ಅತಿ ಹೆಚ್ಚಾಗಿ ಕಂಡು ಬರುತ್ತಿದ್ದು ಅದರ ನಿಯಂತ್ರಣ ತರುವುದು ಅತಿ ಅವಶ್ಯವೆನಿಸಿದೆ.

- ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (2005-2006) ರ ಪ್ರಕಾರ ರಾಜ್ಯದಲ್ಲಿ 6-35 ತಿಂಗಳು ವಯಸ್ಸಿನ ಶೇ 82.7 ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಅಲ್ಲದೇ, ಶೇ 50.3 ರಷ್ಟು 49 ವರ್ಷದೊಳಗಿನ ವಿವಾಹಿತ ಮಹಿಳೆಯರು ಸಹ ರಕ್ತಹೀನತೆಯಿಂದ ಬಳಲುತ್ತಿದ್ದಾರೆ.
- ಈ ನಿಟ್ಟಿನಲ್ಲಿ ಮಕ್ಕಳಿಗೆ "ಐರನ್ ಮತ್ತು ಫೊಲಿಕ್ ಆಸಿಡ್" ಮಾತ್ರೆಗಳನ್ನು ವಾರಕ್ಕೊಮ್ಮೆ ವಿತರಿಸಲು (ವರ್ಷಕ್ಕೆ 52) ಸರ್ಕಾರ ಚಿಂತನೆ ನಡೆಸಿದೆ.
- ಈ ಅರ್ಥಪೂರ್ಣ ಕಾರ್ಯಕ್ರಮವನ್ನು ಶೀಘ್ರವೇ ಅನುಷ್ಠಾನಗೊಳಿಸಲು ಸರ್ಕಾರ ಸಜ್ಜಾಗಿದ್ದು, ಎಷ್ಟು ವರ್ಷದ ಮಕ್ಕಳನ್ನು ಈ ಕಾರ್ಯಕ್ರಮದಡಿ ತರಬೇಕು ಎಂಬುದರ ಬಗ್ಗೆ ಚರ್ಚಿಸಲಾಗುತ್ತಿರುವುದಾಗಿ ಅವರು ಹೇಳಿದ್ದಾರೆ.

**ರಾಜ್ಯದ ಆರೋಗ್ಯವಾಣಿ "104" ಕ್ಕೆ ಚಾಲನೆ**

ರಾಜ್ಯದ ಯಾವುದೇ ಭಾಗದಿಂದ "104" ಕ್ಕೆ ಕರೆ ಮಾಡಿ ವೈದ್ಯಕೀಯ ಸಲಹೆ ಅಥವಾ ಮಾಹಿತಿ ಪಡೆಯುವ ವಿನೂತನ ವ್ಯವಸ್ಥೆಗೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಅವರು ಬೆಂಗಳೂರಿನಲ್ಲಿ ಚಾಲನೆ ನೀಡಿದರು. ಈ ಯೋಜನೆಯಿಂದ ಸಮಾಜದ ಪ್ರತಿಯೊಬ್ಬರಿಗೂ ಅನುಕೂಲವಾಗಲಿರುವುದಾಗಿ ಖಾದರ್ ಹೇಳಿದ್ದಾರೆ.

**ಆರೋಗ್ಯವಾಣಿ "104":**

- ಈ ಯೋಜನೆಯನ್ನು ರಾಜ್ಯ ಸರ್ಕಾರ ಹೈದ್ರಾಬಾದಿನ "ಹೆಲ್ತ್ ಮ್ಯಾನೇಜ್ ಮೆಂಟ್ ಅಂಡ್ ರಿಸರ್ಚ್ ಇನ್ ಸ್ಟಿಟ್ಯೂಟ್" ಮೂಲಕ ಅನುಷ್ಠಾನಗೊಳಿಸಿದೆ.
- ವ್ಯಕ್ತಿಯು ರಾಜ್ಯದ ಯಾವುದೇ ಮೂಲೆಯಿಂದ 104 ಕ್ಕೆ ಕರೆ ಮಾಡುವ ಮೂಲಕ ಆರೋಗ್ಯ-ಆಪ್ತ ಸಲಹೆ, ಸೇವಾ-ಸೌಲಭ್ಯ, ಸಾಂಕ್ರಾಮಿಕ ರೋಗಗಳ ಬಗ್ಗೆ ಮತ್ತು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಸೇವೆಗಳ ಬಗ್ಗೆ ಮಾಹಿತಿಯನ್ನು ಉಚಿತವಾಗಿ ಪಡೆಯಬಹುದು.
- ಕಾಯಿಲೆಗಳ ಅನುಸಾರದ ಮೇಲೆ ವೈದ್ಯರು ಸಲಹೆ ನೀಡುವರು. ಕರೆ ಮಾಡಿದ ವ್ಯಕ್ತಿ ಸಣ್ಣ ಕಾಯಿಲೆಯಿಂದ ಬಳಲುತ್ತಿರುವುದಾಗಿ ಕಂಡು ಬಂದರೆ ಕರೆ ಮೂಲಕವೇ ವೈದ್ಯರು ಪರಿಹಾರ ಸೂಚಿಸುವರು. ಒಂದು ವೇಳೆ ಪರಿಸ್ಥಿತಿ ಗಂಭೀರವೆನಿಸಿದರೆ ಸೂಕ್ತ ಚಿಕಿತ್ಸೆ ಎಲ್ಲಿ ಪಡೆಯಬೇಕು ಎಂಬುದರ ಬಗ್ಗೆ ಮಾಹಿತಿ ನೀಡಲಿದ್ದಾರೆ.
- ಆರೋಗ್ಯ ಸೇವೆ ಹೊರತಾಗಿ, ಆಸ್ಪತ್ರೆಗಳ ನ್ಯೂನತೆ ಬಗ್ಗೆ ದೂರು ಸಲ್ಲಿಸಲು ಇದನ್ನು ಬಳಕೆ ಮಾಡಿಕೊಳ್ಳಬಹುದಾಗಿದೆ.

## ರಾಷ್ಟ್ರೀಯ

**ಪ್ರಧಾನಿ ಮನಮೋಹನ್ ಸಿಂಗ್ ಜಪಾನ್ ಭೇಟಿ: ಸಮಗ್ರ ನೋಟ**

ಭಾರತದ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್ ರವರು ಮೇ 27 ರಿಂದ 30 ರವರೆಗೆ ನಾಲ್ಕು ದಿನಗಳ ಕಾಲ ಜಪಾನ್ ಗೆ ಅಧಿಕೃತ ಪ್ರವಾಸ ಕೈಗೊಂಡಿದ್ದರು. ಜಪಾನ್ ಪ್ರಧಾನ ಮಂತ್ರಿ "ಶಿಂಝೊ ಅಬೆ" ಅವರನ್ನು ಟೋಕಿಯೋದಲ್ಲಿ ಭೇಟಿ ಮಾಡಿದ ಸಿಂಗ್ ವಿವಿಧ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ ಕುರಿತಾಗಿ ಚರ್ಚಿಸಿದರು. ಉನ್ನತ ತಂತ್ರಜ್ಞಾನ, ಬಾಹ್ಯಕಾಶ, ಇಂಧನ ಭದ್ರತೆ ಮತ್ತು ಅಪರೂಪದ ಖನಿಜಗಳ ಗಣಿಗಾರಿಕೆ ಕ್ಷೇತ್ರಗಳಲ್ಲಿ ಭಾರತ-ಜಪಾನ್ ಪರಸ್ಪರ ಸಹಯೋಗದೊಂದಿಗೆ ಮುಂದುವರೆಯುವ ಬಗ್ಗೆ ಚರ್ಚಿಸಲಾಯಿತು. ಉಭಯ ದೇಶಗಳ ನಡುವೆ ತೆಗೆದುಕೊಳ್ಳಲಾದ ಹಾಗೂ ಚರ್ಚಿಸಲಾದ ಪ್ರಮುಖ ನಿರ್ಣಯಗಳ ವಿವರ ಇಲ್ಲಿದೆ.

- ಎರಡೂ ದೇಶದ ಪ್ರಧಾನಿಗಳು ದೆಹಲಿಯಲ್ಲಿ ಜನವರಿ 29, 2013 ರಂದು ನಡೆದ ಭಾರತ-ಜಪಾನ್ ನಡುವಿನ ಮೊದಲ "ದ್ವಿಪಕ್ಷೀಯ ಕಡಲ ವ್ಯವಹಾರಗಳ ಸಭೆ"ಯನ್ನು ಸ್ವಾಗತಿಸಿದರು. ಇದೇ ವೇಳೆ ಭಾರತೀಯ ನೌಕಪಡೆ ಮತ್ತು ಜಪಾನ್ ಕಡಲತೀರ ಸ್ವರಕ್ಷಣಾ ಪಡೆಯ ನಡುವೆ ಜಪಾನ್ ನ ಕರಾವಳಿ ತೀರದಲ್ಲಿ ಜೂನ್ 2012 ರಲ್ಲಿ ನಡೆದ ದ್ವಿಪಕ್ಷೀಯ ನೌಕಾಭ್ಯಾಸಕ್ಕೆ ತೃಪ್ತಿ ವ್ಯಕ್ತಪಡಿಸಿದರು. ಇದೇ ವೇಳೆ ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿರುವ "Shinmaywa ಅಥವಾ US-2 "ಕಡಲ ವಿಮಾನ (Sea Plane)" ವನ್ನು ಭಾರತಕ್ಕೆ ಹಸ್ತಾಂತರಿಸಲು ಜಪಾನ್ ಮುಂದಾಗಿದೆ.
- **ಭಾರತದಲ್ಲಿ ಬುಲೆಟ್ ರೈಲ್**:ಮುಂಬಯಿ-ಅಹಮದಾಬಾದ್ ನಡುವಣ ಹೈಸ್ಪೀಡ್ ರೈಲಿಗೆ ಜಪಾನಿನ ಬುಲೆಟ್ ರೈಲ್ ತಂತ್ರಜ್ಞಾನ ಬಳಕೆಗೆ ಉಭಯ ದೇಶಗಳು ಸಮ್ಮತಿ ಸೂಚಿಸಿದವು. ಈ ಬುಲೆಟ್ ರೈಲು ಯೋಜನೆಗೆ ಜಪಾನ್ 101.7 ಶತಕೋಟಿ "ಯೆನ್ (ಜಪಾನ್ ಕರೆನ್ಸಿ)" ಸಾಲ ನೀಡಲಿದೆ. ಮುಂಬಯಿ-ಅಹಮದಾಬಾದ್ ನಡುವೆ ನಿರ್ಮಾಣವಾಗಲಿರುವ 500 ಕಿ.ಮೀ ಉದ್ದದ ಹೈಸ್ಪೀಡ್ ರೈಲು ಮಾರ್ಗಕ್ಕೆ 1 ಲಕ್ಷ ಕೋಟಿ ಯೆನ್ ಖರ್ಚು ಆಗಲಿದೆ ಎಂದು ಅಂದಾಜಿಸಲಾಗಿದೆ. ಉಭಯ ದೇಶಗಳು ಮುಂದಿನ ಮಾರ್ಚ್ ಒಳಗೆ ಈ ಮಹತ್ವಾಕಾಂಕ್ಷಿ ಯೋಜನೆಯ ತಾಂತ್ರಿಕ ಪರಾಮರ್ಶೆಯನ್ನು ಪೂರ್ತಿಗೊಳಿಸಲು ತೀರ್ಮಾನಿಸಿವೆ. ದಕ್ಷಿಣ ಭಾರತದಲ್ಲಿ ಜಪಾನ್ ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿದ್ದು ಚೆನ್ನೈ-ಬೆಂಗಳೂರು ಕಾರಿಡಾರ್ ಅಭಿವೃದ್ದಿ, ವಿದ್ಯುತ್ ಗ್ರಿಡ್, ರಸ್ತೆಗಳು, ರೈಲು ಮಾರ್ಗಗಳು ಮತ್ತು ಬಂದರು ನಿರ್ಮಾಣಕ್ಕೆ ಮುಂದಾಗಿದೆ.
- **ಹೈದ್ರಾಬಾದ್ ಐಐಟಿ ಗೆ ನೆರವು**: ಹೈದ್ರಾಬಾದ್ ಐಐಟಿ ಅಭಿವೃದ್ದಿಗೆ 870 ಕೋಟಿ ನೆರವು ನೀಡುವುದಾಗಿ ಜಪಾನ್ ತಿಳಿಸಿದೆ. ಈ ನೆರವಿನಿಂದ ಐಐಟಿ ಯಲ್ಲಿ ತಂತ್ರಜ್ಞಾನ ಕೇಂದ್ರ ಸ್ಥಾಪನೆ ಸೇರಿದಂತೆ ಉನ್ನತ ದರ್ಜೆಯ ಕಟ್ಟಡಗಳನ್ನು ನಿರ್ಮಿಸಲಾಗುವುದು ಹಾಗೂ ವಿಶ್ವ ದರ್ಜೆಯ ಲ್ಯಾಬೋರೆಟರಿ ಉಪಕರಣಗಳನ್ನು ಖರೀದಿ ಮಾಡಲಾಗುವುದು. ಈ ಮೂಲಕ ಭಾರತದಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಗೆ ಜಪಾನ್ ಸಹಾಯಹಸ್ತ ಚಾಚಿದೆ.
- **ನಾಗರಿಕ ಪರಮಾಣು ಒಪ್ಪಂದ ಬಗ್ಗೆ**:ಎರಡೂ ದೇಶಗಳ ನಡುವೆ ನಾಗರಿಕ ಪರಮಾಣು ಕುರಿತಾದ ಮಾತುಕತೆಗಳಿಗೆ ಇನ್ನಷ್ಟು ವೇಗ ನೀಡಲು ಭಾರತ ಮತ್ತು ಜಪಾನ್ ಅಭಿಮತ ವ್ಯಕ್ತಪಡಿಸಿದವು. ಭಾರತವನ್ನು "ಪರಮಾಣು ಪೂರೈಕೆದಾರ ಗುಂಪು (Nuclear Supply Group)", ಆಸ್ಟ್ರೇಲಿಯಾ ನೇತೃತ್ವದ "ಕ್ಷಿಪಣಿ ನಿಯಂತ್ರಣ ತಂತ್ರಜ್ಞಾನ (Missile Control Technology)" ಮತ್ತು "ವಾಸೆನ್ನರ್ ಒಪ್ಪಂದ (Wasenner Treaty)" ಯಡಿ ಭಾರತವನ್ನು ತರುವ ಮೂಲಕ ಉಭಯ ದೇಶಗಳು ಪರಸ್ಪರ ಸಹಕಾರದೊಂದಿಗೆ ಮುಂದುವರೆಯಲು ತೀರ್ಮಾನಿಸಿವೆ.
- **ಭಾರತಕ್ಕೆ 424 ಶತಕೋಟಿ ಸಾಲ**: ಭಾರತಕ್ಕೆ 424 ಶತಕೋಟಿ ಡಾಲರ್ ಗಳಷ್ಟು ಜಪಾನ್ ನೀಡಲು ಒಪ್ಪಿದೆ. ಮುಂಬಯಿ ಮೆಟ್ರೋ-3ನೇ ಯೋಜನೆಗಾಗಿ 71 ಶತಕೋಟಿ ಡಾಲರ್ ಸಹಾಯ ಮತ್ತು 2012 ರಲ್ಲಿ ಅನುಷ್ಠಾನಗೊಳಿಸಲಾದ ಎಂಟು ಯೋಜನೆಗಳಿಗೆ

ವ್ಯಯಿಸಲಾದ 353.106 ಶತಕೋಟಿ ಡಾಲರ್ ಗಳಿಗೆ ಸಮನಾದ ಯೆನ್ ಕರೆನ್ಸಿಯನ್ನು ವಿನಿಮಯ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.

- 2020 ರಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡಾಕೂಟವನ್ನು ಜಪಾನ್ ತನ್ನ ರಾಜಧಾನಿ ಟೋಕಿಯೋ ದಲ್ಲಿ ಆಯೋಜಿಸಲು ಚಿಂತಿಸಿದ್ದು, ಇದಕ್ಕೆ ಭಾರತ ಸಂಪೂರ್ಣವಾಗಿ ಬೆಂಬಲಿಸುವುದಾಗಿ ಪ್ರಧಾನಿ ಸಿಂಗ್ ಹೇಳಿದ್ದಾರೆ

**ನಕ್ಸಲ್ ಪೀಡಿತ ರಾಜ್ಯಗಳಲ್ಲಿ ಮೊಬೈಲ್ ಗೋಪುರ ನಿರ್ಮಾಣಕ್ಕೆ ಕೇಂದ್ರ ಒಪ್ಪಿಗೆ**

ಛತ್ತೀಸಗಡದಲ್ಲಿ ಇತ್ತೀಚೆಗೆ ನಕ್ಸಲರು ನಡೆಸಿದ ಭೀಕರ ದಾಳಿಯಿಂದ ಎಚ್ಚೆತ್ತಿಕೊಂಡಿರುವ ಕೇಂದ್ರ ಸರ್ಕಾರವು ನಕ್ಸಲ್ ಪೀಡಿತ ಒಂಭತ್ತು ರಾಜ್ಯಗಳಲ್ಲಿ 2,199 ಮೊಬೈಲ್ ಗೋಪುರಗಳ ನಿರ್ಮಾಣಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆ ಕಡತಕ್ಕೆ ಕೇಂದ್ರ ದೂರ ಸಂಪರ್ಕ ಖಾತೆ ಸಚಿವ ಕಪಿಲ್ ಸಿಬಲ್ ಸಹಿ ಹಾಕಿದ್ದಾರೆ. ಜಪಾನ್ ಮತ್ತು ಥಾಯ್ಲೆಂಡ್ ಪ್ರವಾಸದಿಂದ ಪ್ರಧಾನಿ ಮನಮೋಹನ್ ಸಿಂಗ್ ರವರು ಹಿಂತಿರುಗಿದ ಬಳಿಕ ನಡೆಯು ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವನೆಗೆ ಅಂಗೀಕಾರ ಪಡೆಯುವ ವಿಶ್ವಾಸವನ್ನು ಸಿಬಲ್ ವ್ಯಕ್ತಪಡಿಸಿದ್ದಾರೆ.

- ನಕ್ಸಲ್ ರ ವಿರುದ್ದ ಸಮಗ್ರ ಹೋರಾಟ ನಡೆಸಲು ಮೊಬೈಲ್ ಗೋಪುರಗಳ ಅವಶ್ಯಕತೆಯಿದ್ದು ಶೀಘ್ರವೇ ಗೋಪುರಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳುವಂತೆ "ಕೇಂದ್ರ ಮೀಸಲು ಪೊಲೀಸ್ ಪಡೆ" ಹಾಗೂ ರಾಜ್ಯ ಪೊಲೀಸ್ ಅಧಿಕಾರಿಗಳು ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದರು.
- ನಕ್ಸಲ್ ಪೀಡಿತ ರಾಜ್ಯಗಳಲ್ಲಿ ಮೊಬೈಲ್ ಗೋಪುರಗಳನ್ನು ಸ್ಥಾಪಿಸುವ ಸಲುವಾಗಿ ಗೃಹ ಸಚಿವಾಲಯ ಕಳೆದ ಮೂರು ವರ್ಷಗಳ ಹಿಂದಯೇ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಆದರೆ ಅಂದಿನ ವಿತ್ತ ಸಚಿವರಾಗಿದ್ದ ಪ್ರಣಭ್ ಮುಖರ್ಜಿ ರವರು ಇದೊಂದು ದುಬಾರಿ ಕಾರ್ಯಕ್ರಮವೆಂದು ತಿರಸ್ಕರಿಸಿದ್ದರು.
- 2,199 ಗೋಪುರಗಳಲ್ಲಿ ಜಾರ್ಖಂಡ್ ನಲ್ಲಿ 782, ಛತ್ತೀಸಗರ್ ನಲ್ಲಿ 497, ಒಡಿಶಾ 227, ಆಂಧ್ರಪ್ರದೇಶದಲ್ಲಿ 227, ಬಿಹಾರ 184, ಪಶ್ಚಿಮ ಬಂಗಾಳ ದಲ್ಲಿ 96, ಉತ್ತರಪ್ರದೇಶದಲ್ಲಿ 78, ಮಹಾರಾಷ್ಟ್ರದಲ್ಲಿ 60 ಮತ್ತು ಮಧ್ಯಪ್ರದೇಶದಲ್ಲಿ 22 ನ್ನು ಒಳಗೊಂಡಿರಲಿದೆ.
- ಈ ಯೋಜನೆಗೆ ಸುಮಾರು ರೂ 1,469 ಕೋಟಿ ಬೇಕಾಗಲಿದ್ದು, ಸರ್ಕಾರಿ ಸ್ವಾಮ್ಯದ ಬಿಎಸ್ಎನ್ಎಲ್ ಸಂಸ್ಥೆ ಗೋಪುರ ನಿರ್ಮಾಣ ಹಾಗೂ ಸೇವೆಯನ್ನು ಒದಗಿಸಲಿದೆ.

**ತುಮಕೂರಿನಲ್ಲಿ LPG ಸಬ್ಸಿಡಿ ನೇರ ಖಾತೆ ವರ್ಗಾವಣೆ ಯೋಜನೆಗೆ ಚಾಲನೆ**

ಗ್ರಾಹಕರಿಗೆ LPG ಸಬ್ಸಿಡಿಯನ್ನು ನೇರವಾಗಿ ಅವರ ಖಾತೆಗೆ ವರ್ಗಾಯಿಸುವ ಯೋಜನೆಗೆ ರಾಜ್ಯದಲ್ಲೇ ಮೊದಲ ಬಾರಿಗೆ ತುಮಕೂರು ಜಿಲ್ಲೆಯಲ್ಲಿ ಜಾರಿಗೊಳಿಸಲಾಯಿತು. ಕೇಂದ್ರ ಪೆಟ್ರೋಲಿಯಂ ಖಾತೆ ಸಚಿವ ವೀರಪ್ಪಮೊಯ್ಲಿ ಮತ್ತು ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರು ಈ ಮಹತ್ವಕಾಂಕ್ಷಿ ಯೋಜನೆಗೆ ಜೂನ್ 1 ರಂದು ಚಾಲನೆ ನೀಡಿದರು.

- ರಾಜ್ಯದ ತುಮಕೂರು ಸೇರಿದಂತೆ ದೇಶದಾದ್ಯಂತ ಒಟ್ಟು 18 ಜಿಲ್ಲೆಗಳಲ್ಲಿ ಈ ಯೋಜನೆಗೆ ಚಾಲನೆ ನೀಡಲಾಗಿದೆ. ಯೋಜನೆಯ ಅನುಕೂಲ ಪಡೆಯಲು ಗ್ರಾಹಕರು ಆಧಾರ್ ಕಾರ್ಡ್ ನ್ನು ಕಡ್ಡಾಯವಾಗಿ ಹೊಂದಿದ್ದು, LPG ವಿತರಕರು ಮತ್ತು ಬ್ಯಾಂಕ್ ಗೆ ಗುರುತಿನ ಸಂಖ್ಯೆಯನ್ನು ಸಲ್ಲಿಸಬೇಕು.
- ಯೋಜನೆಯ ಅನುಕೂಲ ಪಡೆಯುವ ಪ್ರತಿ ಕುಟುಂಬಕ್ಕೆ ಒಂದು ಸಿಲಿಂಡರ್ ಗೆ ರೂ 446 ಸಬ್ಸಿಡಿಯಂತೆ ವಾರ್ಷಿಕ ಒಂಬತ್ತು ಸಿಲಿಂಡರ್ ಗಳಿಗೆ ರೂ 4,014 ನ್ನು ನೇರವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುವುದು.
- ನೇರವಾಗಿ ಸಬ್ಸಿಡಿಯನ್ನು ಖಾತೆಗೆ ವರ್ಗಾವಣೆ ಮಾಡುವುದರಿಂದ 10 ರಿಂದ 12 ಸಾವಿರ ಕೋಟಿ ಉಳಿತಾಯವಾಗಲಿದೆ.
- ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ಮೈಸೂರು ಸೇರಿದಂತೆ ಇತರೆ ಜಿಲ್ಲೆಗಳಿಗೆ ಹಂತ ಹಂತವಾಗಿ ವಿಸ್ತರಿಸಲಾಗುವುದು.

**ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ ವಿಸ್ತರಣೆಗೆ ಕೇಂದ್ರ ಸಮ್ಮತಿ**

ಗಣಿ ಹಾಗೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಕಾರ್ಮಿಕರು ಸೇರಿದಂತೆ ಟ್ಯಾಕ್ಸಿ ಚಾಲಕರು, ಚಿಂದಿ ಆಯುವವರು ಸೇರಿದಂತೆ ರಿಕ್ಷಾ ತಳ್ಳುವವರಿಗೂ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ (RSBY)ಯನ್ನು ವಿಸ್ತರಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ಸಂಬಂಧ 2013-14 ನೇ ಸಾಲಿನಲ್ಲಿ ರೂ 210 ಕೋಟಿಯನ್ನು ಹಾಗೂ 2014-15 ನೇ ಸಾಲಿನ ನಂತರ ರೂ 419.89 ಕೋಟಿಯನ್ನು ವ್ಯಯಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

**ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ**:

- ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು 1.4.2008 ರಿಂದ ಜಾರಿಗೊಳಿಸಿದೆ.
- ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳಿಗೆ ಸ್ಮಾರ್ಟ್ ಕಾರ್ಡ್ ಆಧಾರಿತ ವಿಮೆ ಸೌಲಭ್ಯವನ್ನು ಒದಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ.
- ಈ ಯೋಜನೆಯಡಿ ಬಿಪಿಎಲ್ ಕುಟುಂಬಕ್ಕೆ ವಾರ್ಷಿಕ ರೂ 30,000 ನಗದು ರಹಿತ ವಿಮೆ ಸೌಲಭ್ಯವನ್ನು ಕಲ್ಪಿಸಲಾಗುವುದು. ಕುಟುಂಬದ ಐದು ಜನ ಸದಸ್ಯರು ಮಾತ್ರ ಈ ಯೋಜನೆಯಡಿ ಸೌಲಭ್ಯವನ್ನು ಪಡೆಯಲು ಅರ್ಹರು.
- ಈಗಾಗಲೇ ಬೀಡಿ ಕಾರ್ಮಿಕರು, ಬೀದಿ ವ್ಯಾಪಾರಿಗಳು, ಕಟ್ಟಡ ಕೆಲಸಗಾರರು, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ 15 ದಿನ ಕೆಲಸ ನಿರ್ವಹಿಸಿದ ಕೂಲಿ ಕಾರ್ಮಿಕರು ಸೇರಿದಂತೆ ಮತ್ತಿತರ ಅಸಂಘಟಿತ ವಲಯದ ಕಾರ್ಮಿಕರಿಗೆ ಈ ಯೋಜನೆಯನ್ನು ವಿಸ್ತರಿಸಲಾಗಿದೆ.
- ಮಾರ್ಚ್ 1, 2013 ರ ಅಂತ್ಯಕ್ಕೆ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು 28 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು, 3.36 ಕೋಟಿ ಸ್ಮಾರ್ಟ್ ಕಾರ್ಡ್ ಗಳನ್ನು ವಿತರಿಸಲಾಗುವುದು.

**ರಿಯಲ್ ಎಸ್ಟೇಟ್ "ನಿಯಂತ್ರಣ ಮತ್ತು ಅಭಿವೃದ್ಧಿ" ಮಸೂದೆಗೆ ಸಚಿವ ಸಂಪುಟ ಸಮ್ಮತಿ**

ರಿಯಲ್ ಎಸ್ಟೇಟ್ ಉದ್ಯಮದ ಮೇಲೆ ನಿಯಂತ್ರಣ ಸಾಧಿಸಲು ಅವಕಾಶ ಕಲ್ಪಿಸುವ ರಿಯಲ್ ಎಸ್ಟೇಟ್ "ನಿಯಂತ್ರಣ ಮತ್ತು ಅಭಿವೃದ್ಧಿ" ಮಸೂದೆಗೆ ಸಚಿವ ಸಂಪುಟ ಸಮ್ಮತಿ ಸೂಚಿಸಿತು. ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಖಾತೆ ಸಚಿವ ಅಜಯ್ ಮೆಕನ್ ರವರ ಕನಸಿನ ಕೂಸು ಎನಿಸಿದ್ದ ರಿಯಲ್ ಎಸ್ಟೇಟ್ ಮಸೂದೆಯು ಕೆಲ ತಿಂಗಳ ಕಾಲ ಚರ್ಚೆಗೆ ಒಳಗಾಗಿತ್ತು. ನಕಲಿ ಜಾಹೀರಾತುಗಳ ಮೂಲಕ ವಸತಿ ನಿರ್ಮಾಣಗಳ ಬಗ್ಗೆ ಜನರಲ್ಲಿ ಗೊಂದಲ ಮೂಡಿಸುವವರನ್ನು ಶಿಕ್ಷೆಗೆ ಒಳಪಡಿಸುವುದು ಸೇರಿದಂತೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಗ್ರಾಹಕರ ಹಿತಾಸಕ್ತಿಯನ್ನು ಕಾಯಲು ಈ ಮಸೂದೆ ಅವಕಾಶ ನೀಡಿದೆ.

**ಮಸೂದೆಯ ಮುಖ್ಯಾಂಶಗಳು**:

- ಈ ಮಸೂದೆಯನ್ವಯ ರಿಯಲ್ ಎಸ್ಟೇಟ್ ಉದ್ಯಮಿಗಳು ಕಟ್ಟಡ ನಿರ್ಮಾಣ ಅಥವಾ ನಿವೇಶನಗಳ ಬಡಾವಣೆ ಅಭಿವೃದ್ಧಿ ಪಡಿಸುವ ಯೋಜನೆಯನ್ನು ಕೈಗೊಳ್ಳುವ ಮುಂಚೆ ಅಗತ್ಯವಿರುವ ಅನುಮತಿ ಪತ್ರಗಳನ್ನು ಪಡೆದ ನಂತರವಷ್ಟೇ ಕಾಮಗಾರಿಗೆ ಚಾಲನೆ ನೀಡಬೇಕು. ಹಾಗೂ ತಾವು ಕೈಗೊಳ್ಳಲಿರುವ ಯೋಜನೆಗಳ ಮಾಹಿತಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಬೇಕು.
- ಯೋಜನೆಯ ಸಂಬಂಧಿಸಿದ ವಿವರ, ಮಾಹಿತಿಯನ್ನು ಪ್ರಕಟಗೊಳಿಸುವುದನ್ನು ಕಡ್ಡಾಯಗೊಳಿಸುವ ಮೂಲಕ ರಿಯಲ್ ಎಸ್ಟೇಟ್ ವಲಯದಲ್ಲಿ ಪಾರದರ್ಶಕತೆಯನ್ನು ಸಾಧಿಸಲು ಅನುವು ಮಾಡಿಕೊಟ್ಟಿದೆ.

- ರಿಯಲ್ ಎಸ್ಟೇಟ್ ವಲಯದ ಮೇಲೆ ನಿಗಾವಹಿಸುವ ಸಲುವಾಗಿ ಪ್ರತಿ ರಾಜ್ಯಗಳಲ್ಲಿ "ರಿಯಲ್ ಎಸ್ಟೇಟ್ ಪ್ರಾಧಿಕಾರ ಮತ್ತು ಮೇಲ್ಮನವಿ ಪ್ರಾಧಿಕಾರವನ್ನು ಸ್ಥಾಪಿಸಲಾಗುವುದು. ಗ್ರಾಹಕರು ತಮ್ಮ ಕುಂದು ಕೊರತೆಗಳನ್ನು ಈ ಮೂಲಕ ತ್ವರಿತವಾಗಿ ಬಗೆಹರಿಸಿಕೊಳ್ಳಬಹುದು.
- ರಿಯಲ್ ಎಸ್ಟೇಟ್ ಡೆವಲಪರ್ ಗಳು ಉದ್ದೇಶಿತ ಯೋಜನೆಯ ಶೇ 70 ರಷ್ಟು ಅಥವಾ ಸರ್ಕಾರ ನಿಗದಿ ಪಡಿಸಿದ ಮೊತ್ತವನ್ನು ಮುಂಗಡವಾಗಿ ಬ್ಯಾಂಕ್ ಖಾತೆಯಲ್ಲಿ ಇಡಬೇಕೆಂದು ಕಡ್ಡಾಯಗೊಳಿಸಲಾಗಿದೆ. ಇದರಿಂದ ನಿಗದಿತ ಸಮಯದಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಸಹಾಯವಾಗಲಿದೆ.
- ರಿಯಲ್ ಎಸ್ಟೇಟ್ ಉದ್ಯಮವನ್ನು ವರ್ಧಿಸುವ ಸಲುವಾಗಿ ವಿದೇಶಿ ನೇರ ಬಂಡವಾಳ ಹೂಡಿಕೆಗೂ ಅವಕಾಶ ಕಲ್ಪಿಸಲಾಗಿದೆ.
- ರಿಯಲ್ ಎಸ್ಟೇಟ್ ಸಂಬಂಧಿಸಿದ ಕಾಯಿದೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರಕ್ಕೆ ನೆರವಾಗಲು "ಕೇಂದ್ರ ಸಲಹಾ ಮಂಡಳಿ"ಯನ್ನು ನಿರ್ಮಿಸಲು ಮಸೂದೆಯಲ್ಲಿ ಅವಕಾಶ ನೀಡಲಾಗಿದೆ.

**ಪಶ್ಚಿಮ ಬಂಗಾಳದಲ್ಲಿ "ಗುಪ್ತ" ರ ಸಂತತಿಗೆ ಸೇರಿದ ಚಿನ್ನದ ನಾಣ್ಯಗಳು ಪತ್ತೆ**

ಪಶ್ಚಿಮ ಬಂಗಾಳದ ಮುರ್ಶಿದಬಾದ್ ಜಿಲ್ಲೆಯಲ್ಲಿ ಗುಪ್ತರ ರಾಜಮನೆತನಕ್ಕೆ ಸೇರಿದ್ದು ಎನ್ನಲಾದ ಚಿನ್ನದ ನಾಣ್ಯಗಳು ಪತ್ತೆಯಾಗಿವೆ. ರಾಷ್ಟ್ರೀಯ ಹೆದ್ದಾರಿ-34 ರ ಕಾಮಗಾರಿ ವೇಳೆ ಈ ನಾಣ್ಯಗಳು ಪತ್ತೆಯಾಗಿದ್ದು, ನಾಲ್ಕನೇ ಶತಮಾನಕ್ಕೆ ಸಂಬಂಧಿಸಿರುವುದಾಗಿ ತಿಳಿದುಬಂದಿದೆ.

- ಗುಪ್ತರ ಮನೆತನಕ್ಕೆ ಸಂಬಂಧಿಸಿದ್ದು ಎನ್ನಲಾದ ಚಿನ್ನದ ನಾಣ್ಯಗಳು ಪಶ್ಚಿಮ ಬಂಗಾಳದಲ್ಲಿ ದೊರೆತಿರುವುದು ಇದು ಎರಡನೇ ಬಾರಿ. ಈ ಹಿಂದೆ "ಕಲಿಗಾಟ್" ಎನ್ನುವಲ್ಲಿ ದೊರೆತ್ತಿದ್ದವು. ಈ ನಾಣ್ಯಗಳು ಪಶ್ಚಿಮ ಬಂಗಾಳದಲ್ಲಿ ಗುಪ್ತರ ನೆಲೆ ಬಗ್ಗೆ ಬೆಳಕು ಚೆಲ್ಲುವಲ್ಲಿ ಪ್ರಮುಖ ಪಾತ್ರವಹಿಸಲಿ ಹಾಗೂ ಗುಪ್ತರ ಕಾಲದ ನಾಣ್ಯ ವ್ಯವಸ್ಥೆಯನ್ನು ಮತ್ತಷ್ಟೂ ಅರಿತುಕೊಳ್ಳಲು ಸಹಾಯವಾಗಲಿವೆ ಎಂದು ಇತಿಹಾಸಕಾರರು ಹೇಳಿದ್ದಾರೆ.
- ಗುಪ್ತ ಚಕ್ರವರ್ತಿಗಳಾದ ಚಂದ್ರಗುಪ್ತ ಮತ್ತು ಸಮುದ್ರಗುಪ್ತನ ಆಳ್ವಿಕೆಯಲ್ಲಿ ಹೊರತರಲಾಗಿದೆ ಎನ್ನಲಾದ ಈ ನಾಣ್ಯಗಳ ಒಂದು ಮುಖ ಗರುಡ ಸ್ತಂಭ ಹಿಡಿದಿರುವ ರಾಜನ ಚಿತ್ರವನ್ನು ಹೊಂದಿದೆ. ಮತ್ತೊಂದು ಮುಖಭಾಗದಲ್ಲಿ ಲಕ್ಷೀ ದೇವತೆಯ ಚಿತ್ರವನ್ನು ಒಳಗೊಂಡಿದೆ.

**ನಕ್ಸಲ್ ಪೀಡಿತ ರಾಜ್ಯಗಳಲ್ಲಿ "ರೋಶನಿ (ROSHNI)" ಯೋಜನೆ ಜಾರಿ**

ನಕ್ಸಲ್ ಬಾಧೆಗೆ ಒಳಗಾಗಿರುವ ದೇಶದ 9 ರಾಜ್ಯಗಳ ಸುಮಾರು 50,000 ಗ್ರಾಮೀಣ ಯುವ ಜನತೆಗೆ "ರೋಶನಿ" ಎಂಬ ಹೊಸ ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಜೈರಾಂ ರಮೇಶ್ ರವರು ಚಾಲನೆ ನೀಡಿದರು. ಈ ಮಹತ್ವಾಕಾಂಕ್ಷಿ ಯೋಜನೆಯು ಗ್ರಾಮೀಣ ಯುವ ಜನತೆಯ ಕೌಶಲ್ಯ ಅಭಿವೃದ್ಧಿಗೆ ಒತ್ತು ನೀಡುವ ಮೂಲಕ ಉದ್ಯೋಗವನ್ನು ದೊರಕಿಸುವ ಗುರಿಯನ್ನು ಹೊಂದಿದೆ.

**"ರೋಶನಿ ಯೋಜನೆ":**

- ರಾಷ್ಟ್ರದಲ್ಲಿ ತೀವ್ರವಾಗಿ ನಕ್ಸಲ್ ದಾಳಿಗೆ ಸಿಲುಕಿರುವ ಆಂಧ್ರಪ್ರದೇಶ, ಉತ್ತರ ಪ್ರದೇಶ, ಜಾರ್ಖಂಡ್, ಒಡಿಶಾ, ಛತ್ತೀಸ್ ಗಡ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಮತ್ತು ಬಿಹಾರ ರಾಜ್ಯಗಳ 24 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಮುಂದಿನ ಮೂರು ವರ್ಷಗಳ ತನಕ 100 ಕೋಟಿ ವೆಚ್ಚದಲ್ಲಿ ಜಾರಿಗೊಳಿಸಲಾಗುವುದು.
- ಈ ಯೋಜನೆಯ ಅನುಷ್ಠಾನಕ್ಕೆ ತಗುಲುವ ವೆಚ್ಚವನ್ನು 75:25 ಅನುಪಾತದಲ್ಲಿ ಕ್ರಮವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸಲಿವೆ.

- ಗ್ರಾಮೀಣ ಭಾಗದ ಯುವ ಜನತೆ ಅದರಲ್ಲೂ ವಿಶೇಷವಾಗಿ ಶೇ 50 ರಷ್ಟು ಮಹಿಳೆಯರು, ಸಮಾಜದ ಕೆಳ ಮಟ್ಟದಲ್ಲಿರುವ ಬುಡಕಟ್ಟು ಜನಾಂಗದವರಿಗೆ ಈ ಯೋಜನೆಯಡಿ ಪ್ರಾಶಸ್ತ್ಯ ನೀಡಲಾಗುವುದು.
- 18 ರಿಂದ 35 ವರ್ಷದ ಒಳಗಿನವರು ಈ ಯೋಜನೆಯ ಉಪಯೋಗ ಪಡೆಯಲು ಅರ್ಹರಾಗಿದ್ದು, ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕೌಶಲ್ಯ ತರಬೇತಿಯನ್ನು ನೀಡಿ, ಯೋಗ್ಯತೆ ಅನುಸಾರ ಉದ್ಯೋಗವನ್ನು ನೀಡಲಾಗುವುದು.

**ರಾಷ್ಟ್ರೀಯ ಸಲಹಾ ಮಂಡಳಿ ಪುನರ್ ರಚನೆ: "ವರ್ಜಿನಿಯಸ್ ಕ್ಷಕ್ಸ" (Virginius XaXa) ನೂತನ ಸದಸ್ಯ**

ಕೇಂದ್ರ ಸರ್ಕಾರ "ರಾಷ್ಟ್ರೀಯ ಸಲಹಾ ಮಂಡಳಿ (National Advisory Council)" ನ್ನು ಪುನರ್ ರಚಿಸಿದ್ದು, ಸಮಾಜಶಾಸ್ತ್ರಜ್ಞ "ವರ್ಜಿನಿಯಸ್ ಕ್ಷಕ್ಸ" ರವರನ್ನು ಮಂಡಳಿಯ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಇತ್ತೀಚೆಗೆ ಸಾಮಾಜಿಕ ಕಾರ್ಯಕರ್ತೆ ಅರುಣಾ ರಾಯ್ ರವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ ಕಾರಣ ಈ ಸ್ಥಾನ ತೆರವಾಗಿತ್ತು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿ ಕಾರ್ಮಿಕರಿಗೆ ಕನಿಷ್ಟ ಕೂಲಿದರ ಕಾಯಿದೆ-1948 ರಡಿ ಕನಿಷ್ಠ ವೇತನವನ್ನು ಜಾರಿಗೆ ತರುವಲ್ಲಿ ಸರ್ಕಾರ ವಿಫಲವಾಗಿದೆ ಎಂಬ ಕಾರಣದಿಂದ ಅರುಣಾ ರಾಯ್ ರವರು ರಾಜೀನಾಮೆ ನೀಡಿದ್ದರು. ಅಲ್ಲದೇ ಮಂಡಳಿಯ ಮುಂದಿನ ಅವಧಿಗೂ ಸಹ ತಮ್ಮನ್ನು ಆಯ್ಕೆ ಮಾಡದಂತೆ ಸೋನಿಯಾ ಗಾಂಧಿಯವರಿಗೆ ಮನವಿ ಸಲ್ಲಿಸಿದ್ದರು.

- ಕ್ಷಕ್ಸ ರವರು "ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್", ಗುವಾಹಟಿ ನಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿದ್ದು, ಬುಡಕಟ್ಟು ಜನಾಂಗ ಬಗ್ಗೆ ಆಳವಾಗಿ ಅಧ್ಯಯನ ನಡೆಸಿದ್ದಾರೆ.

**ರಾಷ್ಟ್ರೀಯ ಸಲಹಾ ಮಂಡಳಿ**:

- ಪ್ರಧಾನ ಮಂತ್ರಿಗಳಿಗೆ ಆಡಳಿತದಲ್ಲಿ ಸಲಹೆ ನೀಡುವುದಕ್ಕಾಗಿ ಜೂನ್ 4, 2004 ರಲ್ಲಿ ರಾಷ್ಟ್ರೀಯ ಸಲಹಾ ಮಂಡಳಿಯನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಯವರು ಈ ಮಂಡಳಿಯ ಅಧ್ಯಕ್ಷರಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿರುವ ಒಟ್ಟು 12 ಮಂದಿ ಈ ಮಂಡಳಿಯ ಸದಸ್ಯರಾಗಿರುತ್ತಾರೆ.
- ಯೋಜನೆಗಳ ಅನುಷ್ಟಾನ, ಹೊಸ ಕಾನೂನು ಜಾರಿ ಮುಂತಾದವುಗಳ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನು ಈ ಮಂಡಳಿ ನೀಡುತ್ತದೆ.

**ಹರಿಯಾಣ: ಪ್ರಿಯದರ್ಶಿನಿ ಆವಾಸ್ ಯೋಜನೆಗೆ ಚಾಲನೆ**

ಹರಿಯಾಣ ರಾಜ್ಯದ ಗ್ರಾಮೀಣ ಬಡ ಜನತೆಗೆ ವಸತಿ ಸೌಲಭ್ಯ ಕಲ್ಪಿಸುವ ಮಹತ್ವಾಕಾಂಕ್ಷಿ ಯೋಜನೆಯಾದ "ಪ್ರಿಯದರ್ಶಿನಿ ಆವಾಸ್ ಯೋಜನೆ"ಗೆ ಹರಿಯಾಣ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರು ಚಾಲನೆ ನೀಡಿದರು. ಕಳೆದ ಬಜೆಟ್ ನಲ್ಲಿ ಈ ವಸತಿ ಯೋಜನೆಗೆ ಅನುಮತಿ ನೀಡಲಾಗಿತ್ತು. 30 ಫಲಾನುಭವಿಗಳಿಗೆ ಮೊದಲ ಕಂತಿನ ಚೆಕ್ ನ್ನು ವಿತರಿಸುವ ಮೂಲಕ ಈ ಯೋಜನೆಗೆ ಚಾಲನೆ ನೀಡಲಾಯಿತು.

- ಈ ಯೋಜನೆಯಡಿ ಸುಮಾರು 2 ಲಕ್ಷ ಮನೆಗಳನ್ನು ನಿರ್ಮಿಸುವ ಆಕಾಂಕ್ಷೆಯನ್ನು ಹೊಂದಲಾಗಿದೆ. ಇದಕ್ಕಾಗಿ ರೂ 1,350 ಕೋಟಿಯನ್ನು ಸರ್ಕಾರ ಭರಿಸಲಿದೆ.
- ಪ್ರತಿ ಫಲಾನುಭವಿಗೆ ಮನೆ ನಿರ್ಮಿಸಲು 90,100 ರೂಪಾಯಿಗಳ ಸಹಾಯ ಧನವನ್ನು ಮೂರು ಕಂತುಗಳಲ್ಲಿ ನೀಡಲಾಗುವುದು. ಮೊದಲ ಕಂತು 25,000, ಎರಡನೇ ಕಂತು 35,000 ಹಾಗೂ ಮೂರನೇ ಕಂತು 21,000 ರೂಪಾಯಿಗಳನ್ನು ಒಳಗೊಂಡಿರುತ್ತದೆ. ಉಳಿದ 9,100 ರೂಗಳನ್ನು ಶೌಚಾಲಯ ನಿರ್ಮಾಣಕ್ಕೆ ನೀಡಲಾಗುತ್ತದೆ.
- ಇದೇ ಮಾದರಿಯ ವಸತಿ ಸೌಲಭ್ಯವನ್ನು ನಗರ ಬಡವರಿಗೂ ಶೀಘ್ರದಲ್ಲೇ ಜಾರಿಗೆ ತರುವುದಾಗಿ ಹೂಡ ಹೇಳಿದ್ದಾರೆ.

**ಮ್ಯಾನ್ಮಾರ್(Myanmar)ನಲ್ಲಿ "ವಿಶೇಷ ಆರ್ಥಿಕ ವಲಯ" ಸ್ಥಾಪನೆಗೆ ಭಾರತ 150 ಮಿಲಿಯನ್ ಡಾಲರ್ ಸಾಲ**

ಮ್ಯಾನ್ಮಾರ್ ನ ಸಿಟ್ವೆ (Sittwe) ನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ "ವಿಶೇಷ ಆರ್ಥಿಕ ವಲಯ (SEZ)"ಕ್ಕೆ ಭಾರತ 150 ಮಿಲಿಯನ್ ಡಾಲರ್ ಸಾಲವನ್ನು ನೀಡಲು ಮುಂದಾಗಿದೆ. ಮ್ಯಾನ್ಮಾರ್ ಗೆ ಮೂರು ದಿನಗಳ ಪ್ರವಾಸ ಕೈಗೊಂಡಿರುವ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕ ಸಚಿವ "ಆನಂದ್ ಶರ್ಮಾ" ಮತ್ತು ಮ್ಯಾನ್ಮಾರ್ ಅಧ್ಯಕ್ಷ "ಯು ಥೇನ್ ಸೇನ್" ನಡುವೆ ನಡೆದ ಮಾತುಕತೆ ವೇಳೆ ಶರ್ಮಾ ರವರು ಈ ನಿರ್ಣಯವನ್ನು ಕೈಗೊಂಡಿದ್ದಾರೆ. ಇದೇ ವೇಳೆ ಮ್ಯಾನ್ಮಾರ್ ನಲ್ಲಿ ಭಾರತದ ಬ್ಯಾಂಕ್ ಗಳ ಸ್ಥಾಪಸಿಲು ಮ್ಯಾನ್ಮಾರ್ ಸರ್ಕಾರ ತೋರಿರುವ ಒಲವನ್ನು ಅವರು ಸ್ವಾಗತಿಸಿದರು.

- ಮ್ಯಾನ್ಮಾರ್ ನಲ್ಲಿ "ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ"ದ ಶಾಖೆಯನ್ನು ತೆರೆಯಲು ಅಲ್ಲಿನ ಸರ್ಕಾರ ಈಗಾಗಲೇ ಅನುಮತಿ ನೀಡಿದೆ. "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ" ಮತ್ತು "ಬ್ಯಾಂಕ್ ಆಫ್ ಇಂಡಿಯಾ" ಸಹ ಮ್ಯಾನ್ಮಾರ್ ನಲ್ಲಿ ಶಾಖೆಯನ್ನು ತೆರೆಯಲು ಆಸಕ್ತಿವಹಿಸಿವೆ.
- ಇಂಧನ ವಲಯಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಮ್ಯಾನ್ಮರ್ ನಡುವಿನ ಪರಸ್ಪರ ಸಂಬಂಧವನ್ನು ಸಹ ಚರ್ಚಿಸಲಾಯಿತು. ಮ್ಯಾನ್ಮರ್ ನ "ಥಾನ್ಲಿನ್ ತೈಲ ಶುದ್ದೀಕರಣ ಘಟಕ"ದ ಉನ್ನತೀಕರಣಕ್ಕೆ ಭಾರತ ನೀಡಿರುವ ಆರ್ಥಿಕ ಸಹಾಯವನ್ನು ಮೆಲುಕು ಹಾಕಲಾಯಿತು. ಉಭಯ ದೇಶಗಳ ನಡುವೆ ಕೊಳವೆ ಅನಿಲ ಯೋಜನೆ ಬಗ್ಗೆಯೂ ಸಮಲೋಚಿಸಲಾಯಿತು.
- ಇದೇ ವೇಳೆ ಮ್ಯಾನ್ಮರ್ ನ ಸುಮಾರು 300 ಜವಳಿ ಕಾರ್ಖಾನೆಗಳ ಮರು ನಿರ್ಮಾಣಕ್ಕೆ ಭಾರತ ಸಹಾಯವನ್ನು ಮಾಡಲಿರುವುದಾಗಿ ಶರ್ಮಾ ಹೇಳಿದರು. ಈ ಸಂಬಂಧ "ಸೌತ್ ಇಂಡಿಯಾ ಟೆಕ್ಸ್ ಟೈಲ್ ರಿಸರ್ಚ್ ಅಸೋಸಿಯೇಷನ್ (SITRA)" ತಾಂತ್ರಿಕ ಸಹಾಯವನ್ನು ಒದಗಿಸಲಿದೆ.
- ಇಷ್ಟೇ ಅಲ್ಲದೇ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಕೃಷಿ ಮತ್ತು ರಸ್ತೆ ನಿರ್ಮಾಣ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**ಜಾಗತಿಕ ಶಾಂತಿ ಸೂಚ್ಯಂಕ: ಭಾರತಕ್ಕೆ 141 ನೇ ಸ್ಥಾನ**

ಜಾಗತಿಕ ಶಾಂತಿ ಸೂಚ್ಯಂಕ (Global Peace Index)-2012 ರಲ್ಲಿ ಭಾರತ 141 ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಆಂತರಿಕ ಗಲಭೆ, ಗಡಿ ಸಂಘರ್ಷ, ನಕ್ಸಲ್ , ಮಾವೋವಾದಿಗಳ ಅಟ್ಟಹಾಸ ಹಾಗೂ ಭ್ರಷ್ಟಚಾರದಂತಹ ಪ್ರಕರಣಗಳು ಭಾರತದ ಕಳಪೆ ಸಾಧನೆಗೆ ಪ್ರಮುಖ ಕಾರಣ ಎಂದು ಹೇಳಲಾಗಿದೆ. 7ನೇ ವಾರ್ಷಿಕ ಜಾಗತಿಕ ಶಾಂತಿ ಸೂಚ್ಯಂಕ ಇದಾಗಿದ್ದು, ಒಟ್ಟು 162 ದೇಶಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

- ದಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಭೂತಾನ್ ಅಗ್ರಸ್ಥಾನದಲ್ಲಿದೆ. ಈ ಮೂಲಕ ಭೂತಾನ್ ಅತ್ಯಂತ ಶಾಂತಿಯುತ ರಾಷ್ಟ್ರವೆನಿಸಿಕೊಂಡಿದೆ. ನಂತರದ ಸ್ಥಾನದಲ್ಲಿದೆ ನೇಪಾಳ, ಬಾಂಗ್ಲಾದೇಶ, ಶ್ರೀಲಂಕಾ, ಭಾರತ, ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನ ಕಾಣಿಸಿಕೊಂಡಿವೆ.
- ವರದಿಯ ಪ್ರಕಾರ 59 ರಾಷ್ಟ್ರಗಳು ಮಿಲಿಟರಿ ಕ್ಷೇತ್ರಕ್ಕಾಗಿ ಮೀಸಲಿಡಲಾಗುತ್ತಿರುವ ಹಣವನ್ನು ಕ್ರಮೇಣ ಹೆಚ್ಚಿಸಿವೆ. ಇದರಲ್ಲಿ ಭಾರತ ಸಹ ಒಂದಾಗಿದೆ. ಹೆಚ್ಚುತ್ತಿರುವ ರಕ್ಷಣಾ ವೆಚ್ಚ ವಿಶ್ವದಲ್ಲಿ ಅಶಾಂತಿ ತಲೆದೋರಲು ಪ್ರಮುಖ ಕಾರಣ ಎನ್ನಲಾಗಿದೆ.
- ಈ ವರ್ಷದ ವರದಿಯ ಪ್ರಕಾರ 110 ರಾಷ್ಟ್ರಗಳು ಕಳಪೆ ಸಾಧನೆ ಮಾಡುವ ಮೂಲಕ ಸ್ಥಾನಗಳಲ್ಲಿ ಇಳಿಕೆ ಕಂಡಿವೆ. 48 ರಾಷ್ಟ್ರಗಳು ಮಾತ್ರ ಅತ್ಯಂತ ಶಾಂತಿಯುತ ರಾಷ್ಟ್ರಗಳು ಎನಿಸಿಕೊಂಡಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ನರಹತ್ಯೆ ಪ್ರಕರಣಗಳಲ್ಲಿ ಶೇ 8 ರಷ್ಟು ಹೆಚ್ಚಳ ಕಂಡು ಬಂದಿದೆ. ಲ್ಯಾಟಿನ್ ಅಮೆರಿಕಾ. ಸಬ್ ಸಹರಾ ವಲಯಗಳಲ್ಲಿ ನರಹತ್ಯೆ ಪ್ರಕರಣಗಳು ಅತಿ ಹೆಚ್ಚು.

- "ದಿ ಇನ್ ಸ್ಟಿಟ್ಯೂಟ್ ಆಫ್ ಎಕನಾಮಿಕ್ಸ್ ಅಂಡ್ ಪೀಸ್" ಹೊರತಂದಿರುವ ಈ ಪಟ್ಟಿಯಲ್ಲಿ ವಿಶ್ವದ ಅತ್ಯಂತ ಶಾಂತಿಯುತ ದೇಶವೆಂಬ ಪಟ್ಟವನ್ನು "ಐಸ್ ಲ್ಯಾಂಡ್" ತನ್ನ ಬಳಿ ಉಳಿಸಿಕೊಂಡಿದೆ. ಐಸ್ ಲ್ಯಾಂಡ್, ಡೆನ್ಮಾರ್ಕ್, ನ್ಯೂಜಿಲ್ಯಾಂಡ್ ಮತ್ತು ಕೆನಡಾ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಮೊದಲ ನಾಲ್ಕು ರಾಷ್ಟ್ರಗಳು.
- "ಸೊಮಾಲಿಯಾ" ಈ ಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದುಕೊಂಡ ನತದೃಷ್ಟ ರಾಷ್ಟ್ರ. ಇರಾಕ್, ಸೂಡನ್, ಆಪ್ಘಾನಿಸ್ತಾನ ಮತ್ತು ಸೊಮಾಲಿಯಾ ಪಟ್ಟಿಯಲ್ಲಿರುವ ಕೊನೆಯ ನಾಲ್ಕು ದೇಶಗಳು.

**ರಾಜಸ್ತಾನ ಸರ್ಕಾರ ಮತ್ತು IRCTC ನಡುವೆ ಒಡಂಬಡಿಕೆಗೆ ಸಹಿ**

ರಾಜಸ್ತಾನದ ಹಿರಿಯ ನಾಗರಿಕರಿಗೆ ಆಯ್ದ ಸ್ಥಳಗಳಿಗೆ ತೀರ್ಥಯಾತ್ರೆ ಕೈಗೊಳ್ಳಲು ತಗಲುವ ವೆಚ್ಚವನ್ನು ಭರಿಸುವ ಯೋಜನೆಯ ಸಲುವಾದ ಒಡಂಬಡಿಕೆಯೊಂದಕ್ಕೆ (MoU) ರಾಜಸ್ತಾನ ಸರ್ಕಾರ ಮತ್ತು ಭಾರತೀಯ ರೈಲ್ವೆ ಕೆಟರಿಂಗ್ ಮತ್ತು ಪ್ರವಾಸೋದ್ಯಮ ಕಾರ್ಪೋರೇಶನ್ ಲಿಮಿಟೆಡ್ (IRCTC) ಸಹಿ ಹಾಕಿವೆ.

- ಈ ಯೋಜನೆಯ ಪ್ರಥಮ ಹಂತದಲ್ಲಿ 11 ಧಾರ್ಮಿಕ ಸ್ಥಳಗಳನ್ನು ಗುರುತಿಸಲಾಗಿದ್ದು, ಒಟ್ಟು 25,000 ಅರ್ಜಿಗಳಿಗೆ ಅವಕಾಶ ನೀಡಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅರ್ಜಿಗಳು ಲಭ್ಯವಿರಲಿದ್ದು ಜುಲೈ 1 ರಿಂದ ಅರ್ಜಿ ಸಲ್ಲಿಸಬಹುದು.
- ಒಂದು ವೇಳೆ 25,000 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾದಲ್ಲಿ ಲಾಟರಿ ಮೂಲಕ ಆಯ್ಕೆಯನ್ನು ಅಂತಿಮಗೊಳಿಸಲಾಗುವುದು.
- ಆಯ್ಕೆಗೊಂಡ ವ್ಯಕ್ತಿಯೂ ನಿರ್ದಿಷ್ಟ ಪಡಿಸಿದ 11 ಸ್ಥಳಗಳಲ್ಲಿ ಯಾವುದಾದರೂ ಒಂದು ಸ್ಥಳಕ್ಕೆ ಉಚಿತ ಪ್ರವಾಸ ಮಾಡಬಹುದು. ಪ್ರವಾಸ 5 ರಿಂದ 8 ದಿನಗಳ ಕಾಲ ಇರಲಿದ್ದು, ರೈಲಿನಲ್ಲಿ ಉಚಿತ ಊಟ ಮತ್ತು ವೈದ್ಯಕೀಯ ವ್ಯವಸ್ಥೆಯೂ ದೊರೆಯಲಿದೆ. ಇದಕ್ಕಾಗಿಯೇ ವಿಶೇಷ ರೈಲುಗಳನ್ನು ನೇಮಿಸಲಾಗಿದ್ದು, 1000 ಜನ ಒಂದೇ ಬಾರಿ ಪ್ರವಾಸ ಕೈಗೊಳ್ಳಬಹುದಾಗಿದೆ. ವಸತಿ, ಊಟ ಮತ್ತಿತ್ತರ ಪ್ರಯಾಣ ಭತ್ಯೆಯನ್ನು IRCTC ಭರಿಸಲಿದೆ.
- 65 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಯೂ ತನ್ನ ಉಪಚಾರಕ್ಕಾಗಿ ಒಬ್ಬರನ್ನು ಕರೆದುಕೊಂಡು ಹೋಗಬಹುದಾಗಿದೆ. ಇದಲ್ಲದೇ ಪ್ರತಿ 25 ಜನಕ್ಕೆ ಒಬ್ಬ ಅಟೆಂಡಂಟ್ ಅನ್ನು ಸರ್ಕಾರ ನಿಯೋಜಿಸಲಿದೆ.
- ಈ ವಿನೂತನ ಯೋಜನೆಯನ್ನು ರಾಜಸ್ತಾನ ಮುಖ್ಯಮಂತ್ರಿಗಳಾದ ಅಶೋಕ್ ಗೆಹ್ಲಾಟ್ 2013-14 ನೇ ಸಾಲಿನ ಬಜೆಟ್ ನಲ್ಲಿ ಮಂಡಿಸಿದ್ದರು. ಪುರಿ, ಗಯಾ, ರಾಮೇಶ್ವರಂ, ವೈಷ್ಣೋ ದೇವಿ, ತಿರುಪತಿ, ವಾರಾಣಾಸಿ, ಅಮೃತಸರ್, ದ್ವಾರಕಪುರಿ, ಬಿಹಾರ್ ಶರಿಫ್ ಮತ್ತು ಶಿರಡಿ ಪ್ರಥಮ ಹಂತದಲ್ಲಿ ಆಯ್ಕೆಮಾಡಲಾಗಿರುವ 11 ಧಾರ್ಮಿಕ ಸ್ಥಳಗಳು.

**ದೆಹಲಿಯಲ್ಲಿ ದೇಶದ ಮೊದಲ ಮಹಿಳಾ ತಾಂತ್ರಿಕ ವಿಶ್ವವಿದ್ಯಾಲಯ**

ದೆಹಲಿಯಲ್ಲಿ ಸ್ಥಾಪಿಸಲಾಗಿರುವ ದೇಶದ ಮೊದಲ ಮಹಿಳಾ ತಾಂತ್ರಿಕ ವಿಶ್ವವಿದ್ಯಾಲಯವನ್ನು ದೆಹಲಿ ಮುಖ್ಯಮಂತ್ರಿ ಶೀಲಾ ದಿಕ್ಷೀತ್ ಅವರು ಇತ್ತೀಚೆಗೆ ಉದ್ಘಾಟಿಸಿದರು. ಈ ಮುಂಚೆ ಇದ್ದ "ಇಂದಿರಾ ಗಾಂಧಿ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ಯನ್ನು ವಿಶ್ವವಿದ್ಯಾಲಯದ ದರ್ಜೆಗೆ ಏರಿಸಿ "ಇಂದಿರಾಗಾಂಧಿ ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ" ಎಂದು ಮಾರ್ಪಾಟು ಮಾಡಲಾಗಿದ್ದು, ದೇಶದ ಮೊದಲ ಮಹಿಳಾ ತಾಂತ್ರಿಕ ವಿಶ್ವವಿದ್ಯಾಲಯವೆನಿಸಿದೆ. .

- 1998 ರಲ್ಲಿ ಆರಂಭಗೊಂಡ "ಇಂದಿರಾ ಗಾಂಧಿ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ದೆಹಲಿಯಲ್ಲಿ ಮಹಿಳೆಯರಿಗಾಗಿಯೇ ಆರಂಭಗೊಂಡ ಮೊದಲ ತಾಂತ್ರಿಕ ಕಾಲೇಜು.

- ಮೇ 2013 ರಲ್ಲಿ ಈ ಕಾಲೇಜಿಗೆ ವಿಶ್ವವಿದ್ಯಾಲಯದ ಸ್ಥಾನಮಾನ ನೀಡಿದ ಕಾರಣ ಇದನ್ನು "ಇಂದಿರಾ ಗಾಂಧಿ ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ"ವನ್ನಾಗಿ ಮಾರ್ಪಾಟು ಮಾಡಲಾಯಿತು. ಪ್ರಸ್ತುತ ಈ ವಿವಿ ಮಹಿಳೆಯರಿಗಾಗಿ ರೂಪುಗೊಂಡ ದೇಶದ ಮೊದಲ ತಾಂತ್ರಿಕ ವಿಶ್ವವಿದ್ಯಾಲಯವೆಂಬ ಕೀರ್ತಿಗೆ ಪಾತ್ರವಾಗಿದೆ.
- ತಾಂತ್ರಿಕ ವಿಭಾಗದಲ್ಲಿ ಕಲಿಕೆಗೆ ಮಹಿಳೆಯರಿಗೆ ವಿಫುಲ ಅವಕಾಶ ನೀಡಲಿರುವ ಈ ವಿವಿಯಲ್ಲಿ ಪ್ರಸ್ತಕ ಸಾಲಿನಿಂದ ನಾಲ್ಕು ಸ್ನಾತ್ತಕೋತ್ತರ ವಿಷಯಗಳನ್ನು ಆರಂಭಿಸಲಾಗಿದೆ

**"ನವದೆಹಲಿ" ಯಲ್ಲಿ ಪ್ರಥಮ ಚೀನಾ ಚಲನಚಿತ್ರೋತ್ಸವಕ್ಕೆ ಚಾಲನೆ**

ಭಾರತ ಮತ್ತು ಚೀನಾ ಸರ್ಕಾರಗಳ ಸಹಭಾಗಿತ್ವದಲ್ಲಿ ಜೂನ್ 18 ರಿಂದ 23 ರವರೆಗೆ ಇದೇ ಮೊದಲ ಬಾರಿಗೆ ಭಾರತದಲ್ಲಿ ನಡೆಯಲಿರುವ ಚೀನಾ ಚಲನಚಿತ್ರೋತ್ಸವಕ್ಕೆ ನವದೆಹಲಿಯ "ಸಿರಿ ಫೋರ್ಟ್" ಸಭಾಂಗಣದಲ್ಲಿ ಚಾಲನೆ ನೀಡಲಾಯಿತು. ಇಂಡೋ-ಚೀನಾ ಆರ್ಥಿಕ ಮತ್ತು ಸಾಂಸ್ಕೃತಿಕ ಮಂಡಳಿ ಹಾಗೂ ಚೀನಾದ ಪ್ರೆಸ್, ಪಬ್ಲಿಕೇಷನ್, ರೇಡಿಯೋ ಮತ್ತು ದೂರದರ್ಶನ ಇಲಾಖೆಯು ಜಂಟಿಯಾಗಿ ಈ ಚಲನಚಿತ್ರೋತ್ಸವವನ್ನು ಆಯೋಜಿಸಿವೆ.

- ಚೀನಾದ ಪ್ರಸಿದ್ದ ನಟ ಜಾಕಿ ಚಾನ್ ಸೇರಿದಂತೆ 20 ಜನರನ್ನು ಒಳಗೊಂಡ ಚೀನಾದ ಪ್ರತಿನಿಧಿಗಳ ತಂಡ ಚಲನಚಿತ್ರೋತ್ಸವದ ಉದ್ಘಾಟನೆಯಲ್ಲಿ ಭಾಗವಹಿಸಿದ್ದರು. ಆರು ದಿನಗಳ ಕಾಲ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಚೀನಾ ಐತಿಹಾಸಿಕ ಮತ್ತು ಆಕ್ಷನ್ ಭರಿತ ಸಿನಿಮಾಗಳನ್ನು ಪ್ರದರ್ಶಿಲಾಗುವುದು. "ಕೇಬಲ್ ವೇ ಡಾಕ್ಟರ್", "ಬ್ಯಾಕ್ ಟು 1942" ಮತ್ತು "ಲಾಸ್ಟ್ ಇನ್ ಥಾಯ್ಲೆಂಡ್" ಪ್ರದರ್ಶನದಲ್ಲಿ ತೆರೆಕಾಣಲಿರುವ ಪ್ರಮುಖ ಚಿತ್ರಗಳು.
- ಜಾಕಿಚಾನ್ ಅಭಿನಯದ "ಚೇನೀಸ್ ಝೋಡಿಯಕ್ (Chinese Zodiac)" ಚಿತ್ರವನ್ನು ಪ್ರದರ್ಶಿಸುವ ಮೂಲಕ ಚಲನಚಿತ್ರೋತ್ಸವವಕ್ಕೆ ಚಾಲನೆ ನೀಡಲಾಯಿತು.
- 2014 ರಲ್ಲಿ ಗೋವಾದಲ್ಲಿ ನಡೆಯಲಿರುವ "ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ" ಪಾಲ್ಗೊಳ್ಳುವಂತೆ ಚೀನಾಕ್ಕೆ ಭಾರತ ಆಹ್ವಾನ ನೀಡಿದೆ. ಇದೇ ವೇಳೆ ಉಭಯ ದೇಶಗಳ ನಡುವೆ ಬಾಂಧವ್ಯವನ್ನು ಗಟ್ಟಿಗೊಳಿಸುವ ಸಲುವಾಗಿ "ಸಿಮಾ ಮತ್ತು ಪ್ರಸರಣ" ಕುರಿತಾದ ಜಂಟಿ ಕಾರ್ಯಪಡೆಯನ್ನು ಸ್ಥಾಪಿಸಲು ನಿರ್ಣಯ ಕೈಗೊಳ್ಳಲಾಗಿದೆ.

**ಉತ್ತರ ಭಾರತದಲ್ಲಿ ಪ್ರವಾಹ ದುರಂತ: ರಕ್ಷಣೆಗಾಗಿ IAF ನಿಂದ "ಆಪರೇಶನ್ ರಾಹತ್"**

ಉತ್ತರಾಖಂಡ, ಹಿಮಾಚಲ ಪ್ರದೇಶ ಸೇರಿದಂತೆ ಉತ್ತರ ಭಾರತದ ಅನೇಕ ಕಡೆ ಎಡೆಬಿಡದೇ ಸುರಿಯುತ್ತಿರುವ ಮಹಾಮಳೆಯಿಂದ ಸೃಷ್ಟಿಯಾಗಿರುವ ಪ್ರವಾಹದಲ್ಲಿ ಸಿಲುಕಿರುವ ಸಾವಿರಾರು ಜನರನ್ನು ರಕ್ಷಿಸಲು ಭಾರತೀಯ ವಾಯು ದಳ (IAF) "ಆಪರೇಶನ್ ರಾಹತ್ (Operationa Rahat)" ಹೆಸರಿನಡಿ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದೆ.

- ಕಾರ್ಯಾಚರಣೆ ಸಲುವಾಗಿ ಆರೋಗ್ಯಾಧಿಕಾರಿಗಳು ಮತ್ತು ಎಂಜನಿಯರ್ ಒಳಗೊಂಡ 8,100 ಕ್ಕೂ ಹೆಚ್ಚು ಸಿಬ್ಬಂದಿಯನ್ನು ನೇಮಿಸಲಾಗಿದೆ. ನಾಲ್ಕು ALH, ಎರಡು MI-17 ಹೆಲಿಕಾಪ್ಟರ್ ಗಳನ್ನು ರಕ್ಷಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ.
- ವಾಯುದಳ ಸಿಬ್ಬಂದಿಗೆ ನೆರವಾಗುವ ನಿಟ್ಟಿನಲ್ಲಿ "ರಾಷ್ಟ್ರೀಯ ವಿಕೋಪ ನಿರ್ವಹಣೆ ಪಡೆ"ಯ 540 ಸಿಬ್ಬಂದಿಯನ್ನು ಒಳಗೊಂಡ 14 ತಂಡಗಳು ಕೈಜೋಡಿಸಿವೆ.
- ಇಡೀ ಉತ್ತರ ಭಾರತವನ್ನು ತಲ್ಲಣಗೊಳಿಸಿರುವ ಈ ಭೀಕರ ಪ್ರವಾಹದಿಂದ ಸುಮಾರು 150 ಕ್ಕೂ ಹೆಚ್ಚು ಜನರು ಸಾವನ್ನಪ್ಪಿರುವುದಾಗಿ ಹೇಳಲಾಗಿದೆ. ಆದರೆ ಸಾವಿನ ಸಂಖ್ಯೆ ಸಾವಿರದ ಗಡಿ ದಾಟಬಹುದು ಎಂದು ಅಂದಾಜಿಸಲಾಗಿದೆ.

ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಪ್ರವಾಹದ ಛಾಯೆ ಅತ್ಯಂತ ಭೀಕರವಾಗಿದ್ದು ಸಾವಿರಾರು ಯಾತ್ರಿಕರು, ಪ್ರವಾಸಿಗರು ಮತ್ತು ಸ್ಥಳೀಯರು ರಕ್ಷಣೆಗಾಗಿ ಹಾತೊರೆಯುತ್ತಿದ್ದಾರೆ.

**ಜೂನ್ 18: "ಗೋವಾ ಕ್ರಾಂತಿಕಾರಿ ದಿನ (Goa Revolution Day)"**

ಗೋವಾ ರಾಜ್ಯ ಜೂನ್ 18 ರಂದು "ಗೋವಾ ಕ್ರಾಂತಿಕಾರಿ ದಿನ"ವನ್ನು ಸಂಭ್ರಮದಿಂದ ಆಚರಿಸಿಕೊಂಡಿತು. ಪೋರ್ಚಗೀಸರ ಹಿಡಿತದಿಂದ ಗೋವಾವನ್ನು ಸ್ವಾತಂತ್ರ್ಯಗೊಳಿಸಲು ಹೋರಾಡಿ ಮಡಿದ ವೀರರಿಗೆ ಈ ದಿನದಂದು ಸ್ಮರಿಸಲಾಗುತ್ತದೆ. ಗೋವಾ ರಾಜ್ಯಪಾಲರಾದ ಬಿ.ವಿ.ವಾಂಚೂ ಅವರು ಪಣಜಿಯಲ್ಲಿ ಆಯೋಜಿಸಲಾಗಿದ್ದ "ಕ್ರಾಂತಿಕಾರಿ ದಿನ" ಕಾರ್ಯಕ್ರಮದ ಅಂಗವಾಗಿ ಗೋವಾ ವಿಮೋಚನಾ ಚಳುವಳಿಯಲ್ಲಿ ಹುತಾತ್ಮರಾದವರಿಗೆ ಗೌರವ ಸಲ್ಲಿಸಿದರು.

**"ಗೋವಾ ಕ್ರಾಂತಿಕಾರಿ ದಿನ":**

- ಜೂನ್ 18, 1946 ರಂದು ಡಾ. ರಾಮ್ ಮನೋಹರ್ ಲೋಹಿಯಾ ಮತ್ತು ಡಾ. ಜುಲಿಯೋ ಮೆನೆಝ್ ಅವರು ಪೋರ್ಚಗೀಸರ ವಿರುದ್ದ ತಿರುಗಿ ಬೀಳುವಂತೆ ಗೋವಾ ಜನತೆಗೆ ಕರೆ ನೀಡಿದರು. ಈ ಮೂಲಕ ಗೋವಾ ವಿಮೋಚನೆಗೆ ಕಿಚ್ಚನ್ನು ಹಚ್ಚಿಸುವ ಮೊದಲ ಪ್ರಯತ್ನಕ್ಕೆ ಸಾಕಷ್ಟು ಬೆಂಬಲ ದೊರೆತಿತು.
- ಪೋರ್ಚಗೀಸರ ವಿರುದ್ದ ಹೋರಾಟ ನಡೆಸಲು ಗೋವನ್ನರ ಏಕೀಕರಣಕ್ಕೆ ಕರೆ ನೀಡಿದ ಈ ದಿನವನ್ನು "ಗೋವಾ ಕ್ರಾಂತಿಕಾರಿ ದಿನ"ವೆಂದು ಆಚರಿಸಲಾಗುತ್ತದೆ.

**ಆಂಧ್ರಪ್ರದೇಶ: "ಬಂಗಾರು ತಲ್ಲಿ" ಯೋಜನೆ ಅಂಗೀಕಾರ**

ಹೆಣ್ಣು ಮಕ್ಕಳ ಭವಿಷ್ಯ ರೂಪಿಸುವ ಉದ್ದೇಶ ಹೊಂದಿರುವ "ಬಂಗಾರು ತಲ್ಲಿ" ಯೋಜನೆ ಕೊನೆಗೂ ಆಂಧ್ರ ಪ್ರದೇಶ ವಿಧಾನ ಸಭೆಯಲ್ಲಿ ಅಂಗೀಕಾರಗೊಂಡಿತು. ಈ ಯೋಜನೆಯ ಅಂಗೀಕಾರಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದ ತೆಲುಗು ದೇಶಂ ಪಕ್ಷದ ಸದಸ್ಯರು ಸಭೆಯನ್ನು ಬಹಿಷ್ಕರಿಸುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು. ಆದರೆ ಇದಕ್ಕೆ ಕಿವಿಗೊಡದ ಆಂಧ್ರ ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿಯವರು ಈ ಯೋಜನೆ ರಾಜ್ಯದ ಬಡ ಹೆಣ್ಣು ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಲಿರುವುದಾಗಿ ಹೇಳಿದ್ದಾರೆ.

**"ಬಂಗಾರು ತಲ್ಲಿ (Bangaru Thalli)" ಯೋಜನೆ ಬಗ್ಗೆ:**

- "ಬಂಗಾರು ತಲ್ಲಿ" ಯೋಜನೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿಯವರ ಕನಸಿನ ಕೂಸು. ಈ ಯೋಜನೆಯಡಿ ಪ.ಜಾತಿ/ಪರಿಶಿಷ್ಟ ಪಂಗಡ ಮತ್ತು ಬಿಪಿಎಲ್ ವರ್ಗಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಮತ್ತು ವಿವಾಹ ವೆಚ್ಚವನ್ನು ಭರಿಸಲಾಗುವುದು.
- ಈ ಯೋಜನೆಯಡಿ ಮಹಿಳೆ ಗರ್ಭದರಿಸಿದ ದಿನದಿಂದ ಪ್ರತಿ ತಿಂಗಳಿಗೆ ರೂ 1,000/- ನಗದನ್ನು ಮಗು ಜನಿಸುವ ಸಮಯದವರೆಗೆ ನೀಡಲಾಗುವುದು. ಒಂದು ವೇಳೆ ಜನಿಸಿದ ಮಗು ಹೆಣ್ಣಾದರೆ ಹೆರಿಗೆಯ ಸಮಯದಲ್ಲಿ ರೂ 2,500/- ನ್ನು ತಾಯಿಗೆ ನೀಡಲಾಗುವುದು. ಆನಂತರ ಪ್ರತಿ ವರ್ಷ ರೂ 1,500/- ರಂತೆ ಮಗು ಐದು ವರ್ಷ ತುಂಬವವರೆಗೂ ಕುಟುಂಬಕ್ಕೆ ನೀಡಲಾಗುವುದು.
- ಶಾಲಾ ದಾಖಲಾತಿ ಸಮಯದಲ್ಲಿ ಹೆಣ್ಣು ಮಕ್ಕಳಿಗೆ ರೂ 1000/- ವನ್ನು ಕೊಡಲಾಗುವುದು. ನಂತರ 1 ರಿಂದ 5 ನೇ ತರಗತಿಯವರೆಗೆ ಪ್ರತಿ ವರ್ಷ ರೂ 2000/- ಹಾಗೂ 6 ರಿಂದ 8 ನೇ ತರಗತಿ ವರೆಗೆ ಪ್ರತಿ ವರ್ಷ ರೂ 2500/- ಮತ್ತು 9 ರಿಂದ 10 ನೇ ತರಗತಿವರೆಗೆ ವಾರ್ಷಿಕ ರೂ 3,000/- ಮತ್ತು ಪದವಿ ಪೂರ್ವ ಅವಧಿಯಲ್ಲಿ ಪ್ರತಿ ವರ್ಷ ರೂ 3,500/- ನ್ನು ವಿದ್ಯಾಭ್ಯಾಸಕ್ಕೆ ನೀಡಲಾಗುವುದು. ಪದವಿ ಓದುವ ವೇಳೆ ಪ್ರತಿ ವರ್ಷ ರೂ 4,000/- ವನ್ನು ನೀಡಲಾಗುವುದು.

- ಒಂದು ವೇಳೆ ಫಲಾನುಭವಿಯೂ ಹತ್ತನೇ ತರಗತಿಗೆ ವಿದ್ಯಾಭ್ಯಾಸವನ್ನು ನಿಲ್ಲಿಸಿದರೆ ಆಕೆಯ ವಿವಾಹ ವೆಚ್ಚದ ಸಲುವಾಗಿ ರೂ 50,000/- ವನ್ನು ಕೊಡಲು ಈ ಯೋಜನೆಯಡಿ ಉದ್ದೇಶಿಸಲಾಗಿದೆ. ಅಥವಾ ಪದವಿ ನಂತರ ವಿವಾಹ ಮಾಡಿಕೊಳ್ಳಲು ಇಚ್ಛಿಸಿದರೆ ರೂ 1 ಲಕ್ಷವನ್ನು ನೀಡಲಾಗುವುದು. ಒಟ್ಟಾರೆಯಾಗಿ ಪ್ರತಿ ಹೆಣ್ಣು ಮಗುವಿನ ಮೇಲೆ ರೂ 2.1 ಲಕ್ಷವನ್ನು ಭರಿಸಲು ಆಂಧ್ರ ಸರ್ಕಾರ ನಿಶ್ಚಯ ತಳೆದಿದೆ.

**ಫಲಾನುಭವಿಯಾಗಲು ಅರ್ಹತೆ:**

- ಬಿಳಿ ರೇಶನ್ ಕಾರ್ಡ್ ಹೊಂದಿರುವ ಎಲ್ಲಾ ಕುಟುಂಗಳ ಹೆಣ್ಣು ಮಕ್ಕಳು ಈ ಯೋಜನೆಯ ಉಪಯೋಗ ಪಡೆಯಲು ಅರ್ಹತೆಯನ್ನು ಹೊಂದಿದ್ದಾರೆ. ಆದರೆ ಈ ಯೋಜನೆಯು ಒಂದೇ ಕುಟುಂಬದ ಎರಡು ಹೆಣ್ಣು ಮಕ್ಕಳಿಗೆ ಮಾತ್ರ ಸೀಮಿತವಾಗಿದೆ.

**ದೂರವಾಣಿ ಕರೆ, ಇ-ಮೇಲ್ ಮೇಲೆ ದೇಶವ್ಯಾಪ್ತಿ ಕಣ್ಗಾವಲು ವ್ಯವಸ್ಥೆ ಜಾರಿ**

ಆಂತರಿಕ ಭದ್ರತೆಯ ಮೇಲೆ ಮತ್ತಷ್ಟು ನಿಗಾವಹಿಸುವ ಸಲುವಾಗಿ ಎಲ್ಲಾ ರೀತಿಯ ಸಂಪರ್ಕ ಮಾಧ್ಯಮಗಳ ಮೇಲೆ ನಿಯಂತ್ರಣ ಸಾಧಿಸುವ ವ್ಯವಸ್ಥೆಗೆ ಕೇಂದ್ರ ಸರ್ಕಾರ ಸದ್ದಿಲ್ಲದೇ ಚಾಲನೆ ನೀಡಿದೆ. ಇತ್ತೀಚೆಗಷ್ಟೇ ಅಮೆರಿಕಾ ಸಾಮಾಜಿಕ ತಾಣಗಳ ಸೇವಾ ಪೂರೈಕೆದಾರರಿಂದ ಬಳಕೆದಾರರ ಮಾಹಿತಿಯನ್ನು ಸಂಗ್ರಹಿಸಿ ವಿಶ್ವದಾದ್ಯಂತ ಚರ್ಚೆಗೆ ಗ್ರಾಸವಾಗಿತ್ತು. ಈಗ ಇದೇ ಮಾದರಿಯಲ್ಲಿ ಕೇಂದ್ರ ಸರ್ಕಾರ ದೂರವಾಣಿ ಕರೆ, ಇ-ಮೇಲ್ ಮತ್ತಿತ್ತರ ಸಂಪರ್ಕ ಮಾಧ್ಯಮಗಳ ಮೇಲೆ ಕಣ್ಣಿಡಲು ನಿರ್ಧರಿಸಿದೆ.

**ಈ ವ್ಯವಸ್ಥೆಯ ಬಗ್ಗೆ:**

- "ಕೇಂದ್ರಿಯ ನಿಗಾ ವ್ಯವಸ್ಥೆ (Central Monitoring System)" ಯನ್ನು ಕೇಂದ್ರ ಸರ್ಕಾರ 2011 ರಲ್ಲಿ ಜಾರಿಗೊಳಿಸಿದೆ. ಆದರೆ ಇದರ ಬಗ್ಗೆ ಹೆಚ್ಚಿನ ಚರ್ಚೆ ನಡೆದಿರಲಿಲ್ಲ. ಇದೀಗ ಸರ್ಕಾರ ಏಕಾಏಕಿ ಈ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಈ ವ್ಯವಸ್ಥೆಯ ಅನ್ವಯ ಆದಾಯ ತನಿಖೆ ಇಲಾಖೆ, ಕೇಂದ್ರ ಗುಪ್ತಚರ ಇಲಾಖೆಗಳು ದೇಶದ ಪ್ರತಿಯೊಬ್ಬರ ದೂರವಾಣಿ ಕರೆ, ಇ-ಮೇಲ್, ಸಾಮಾಜಿಕ ತಾಣಗಳ ಮೇಲಿನ ಪೋಸ್ಟರ್ ಗಳ ಮೇಲೆ ನಿಗಾವಹಿಸುವ ಅಧಿಕಾರವನ್ನು ಹೊಂದಿವೆ. ವಿಶೇಷವೆಂದರೆ ಗುಪ್ತಚರ ಇಲಾಖೆಗಳು ಮತ್ತು ಭದ್ರತಾ ಸಂಸ್ಥೆಗಳು ಈ ಕ್ರಮಕ್ಕೆ ನ್ಯಾಯಾಲಗಳ ಮತ್ತು ಸಂಸತ್ತಿನ ಗಮನಕ್ಕೆ ತರದೇ ನಿಗಾವಹಿಸಬಹುದಾಗಿದೆ.
- ಕೇಂದ್ರ ಗುಪ್ತಚರ ಇಲಾಖೆ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆ ಸೇರಿದಂತೆ ಒಟ್ಟು 9 ಸಂಸ್ಥೆಗಳು ಈ ವ್ಯವಸ್ಥೆಯಡಿ ಖಾಸಗಿಯವರ ದೂರವಾಣಿ, ಇ-ಮೇಲ್ ಮೇಲೆ ನಿಗಾವಹಿಸಲು ಅಧಿಕಾರವನ್ನು ಹೊಂದಿವೆ. 1885 ರಲ್ಲಿ ಬ್ರಿಟಿಷ್ ಕಾಲದಲ್ಲಿ ಜಾರಿಗೊಳಿಸಲಾದ ಟೆಲಿಗ್ರಾಫ್ ಕಾಯಿದೆಯಡಿ ಈ ವ್ಯವಸ್ಥೆ ಕಾರ್ಯನಿರ್ವಹಿಸಲಿದೆ.
- ಹೊಸ ವ್ಯವಸ್ಥೆಯಡಿ ದೇಶದಲ್ಲಿರುವ 90 ಕೋಟಿ ಸ್ಥಿರ ಮತ್ತು ಮೊಬೈಲ್ ಬಳಕೆದಾರರ ಕರೆಗಳ ಮೇಲೆ ಹಾಗೂ ದೇಶವ್ಯಾಪ್ತಿ ಇಂಟರ್ ನೆಟ್ ಬಳಸುವವರ ಇ-ಮೇಲ್ ಮತ್ತು ಸಾಮಾಜಿಕ ತಾಣಗಳ ಮೇಲಿನ ಪೋಸ್ಟರ್ ಗಳ ಮೇಲೆ ಸಹ ನಿಗಾವಹಿಸಲಾಗುವುದು.

**ಈ ವ್ಯವಸ್ಥೆಯ ಅಗತ್ಯವೇನು?**

- ಸಂಪರ್ಕ ಮಾಧ್ಯಮಗಳ ಮೇಲೆ ನಿಗಾವಹಿಸುವ ಮೂಲಕ ಭಯೋತ್ಪಾದನೆ, ಶಾಂತಿ ಕದಡುವ ಒಳ ಸಂಚು ಮುಂತಾದ ಹೇಯ ಕೃತ್ಯಗಳನ್ನು ಹತ್ತಿಕ್ಕಬಹುದು ಎಂಬುದು ಕೇಂದ್ರ ಸರ್ಕಾರದ ವಾದ. ಈ ವ್ಯವಸ್ಥೆಯಿಂದ ಬಳಕೆದಾರರ ಖಾಸಗಿತನಕ್ಕೆ ಯಾವುದೇ ದಕ್ಕೆ ಬರುವುದಿಲ್ಲವೆಂದು ಸರ್ಕಾರ ಖಚಿತಪಡಿಸಿದೆ.

**2017 ಕ್ಕೆ ಶೇ 80 ರಷ್ಟು ಸಾಕ್ಷರತ ಪ್ರಮಾಣ ಸಾಧಿಸುವ ಗುರಿ ಹೊಂದಿರುವ ಭಾರತ**

ಕೇಂದ್ರ ಸರ್ಕಾರ 2017 ರ ವೇಳೆಗೆ ಶೇ 80 ರಷ್ಟು ಸಾಕ್ಷರತ ಪ್ರಮಾಣ ಸಾಧಿಸುವ ಮಹತ್ವದ ಗುರಿಯನ್ನು ಹೊಂದಿದೆ. ಪ್ರಸ್ತುತ ದೇಶದ ಸಾಕ್ಷರತ ಪ್ರಮಾಣ ಶೇ 74 ರಷ್ಟಿದ್ದು, ನಿಗದಿಪಡಿಸಿರುವ ಗುರಿಯನ್ನು ಮಟ್ಟಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಚಿಂತನೆ ನಡೆಸಿದೆ.

**ಪೂರಕ ಕಾರ್ಯಕ್ರಮ**:

- ದೇಶದ ಸಾಕ್ಷರತೆಯ ಮಟ್ಟವನ್ನು ಉತ್ತಮಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ "ಸಾಕ್ಷರ್ ಭಾರತ್ ಕಾರ್ಯಕ್ರಮವನ್ನು ಈಗಾಗಲೇ ಜಾರಿಗೊಳಿಸಿದೆ. ಈಗಾಗಲೇ ಈ ಯೋಜನೆ 25 ರಾಜ್ಯಗಳ 372 ಜಿಲ್ಲೆಗಳಲ್ಲಿ ಅನುಷ್ಟಾನಗೊಂಡಿದೆ. ಸುಮಾರು 1.5 ಲಕ್ಷಕ್ಕೂ ಹೆಚ್ಚು ಗ್ರಾಮ ಪಂಚಾಯತ್ ಗಳನ್ನು ಈ ಯೋಜನೆಯಡಿ ತರಲಾಗಿದೆ.

**ಸಾಕ್ಷರ್ ಭಾರತ್ ಕಾರ್ಯಕ್ರಮ**:

- ಸಾಕ್ಷರ್ ಭಾರತ್ ಕಾರ್ಯಕ್ರಮವನ್ನು ಸೆಪ್ಟೆಂಬರ್ 8, 2009, ಅಂತರರಾಷ್ಟ್ರೀಯ ಸಾಕ್ಷರತಾ ದಿನದಂದು ಆರಂಭಿಸಲಾಯಿತು.
- ಇದೊಂದು ಕೇಂದ್ರ ಪ್ರಾಯೋಜಿತ ಯೋಜನೆಯಾಗಿದ್ದು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದಡಿ ಜಾರಿಗೆ ತರಲಾಗಿದೆ.

**ಉದ್ದೇಶ:**

- ವಯಸ್ಕ ಶಿಕ್ಷಣವನ್ನು ಉತ್ತೇಜಿಸುವುದು ಮತ್ತು ಬಲಗೊಳಿಸುವುದು. ಅದರಲ್ಲೂ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡುವುದು. ಈ ಮೂಲಕ ಸಾಕ್ಷರತಾ ಮಟ್ಟವನ್ನು ಉತ್ತಮಪಡಿಸುವುದು ಇದರ ಮುಖ್ಯ ಉದ್ದೇಶ.

**ಸುದ್ದಿ ಸಂಗ್ರಹ: ಪದ್ಮನಾಭಪುರಂ ಅರಮನೆ**

ಸುಮಾರು 400 ವರ್ಷಗಳ ಇತಿಹಾಸವಿರುವ ಪ್ರಸಿದ್ದ ಪದ್ಮನಾಭಪುರಂ ಅರಮನೆ ತಮಿಳುನಾಡಿನ ನಾಗರ್ ಕೊಯಿಲ್ ಸಮೀಪವಿದೆ. ಇತ್ತೀಚೆಗೆ ಕೇಂದ್ರ ಸಾಂಸ್ಕೃತಿಕ ಸಚಿವಾಲಯ ರಚಿಸಿರುವ ಸಲಹಾ ಮಂಡಳಿಯು ಈ ಅರಮನೆಗೆ ಭೇಟಿ ನೀಡುವ ಮೂಲಕ ಈ ಅರಮನೆಯನ್ನು ಯೂನೆಸ್ಕೊ ವಿಶ್ವ ಪಾರಂಪರಿಕ ತಾಣ ಪಟ್ಟಿಗೆ ಸೇರ್ಪಡೆಗೊಳಿಸಲು ಪ್ರಸ್ತಾವನೆ ಸಲ್ಲಿಸುವುದಕ್ಕೆ ಒಪ್ಪಿಗೆ ನೀಡಿದೆ. ಈ ಮೂಲಕ 400 ವರ್ಷಗಳ ಇತಿಹಾಸವಿರುವ ಈ ಅರಮನೆ ವಿಶ್ವಪರಂಪರೆ ತಾಣ ಪಟ್ಟಿಗೆ ಸೇರ್ಪಡೆಗೊಳ್ಳುವ ಕಾಲ ಸನ್ನಿಹಿತವಾಗಿದೆ. ಆದರೆ ಅಂತಿಮ ತೀರ್ಮಾನಕ್ಕೆ ಮುಂದಿನ ವರ್ಷದವರೆಗೂ ಕಾಯಲೇಬೇಕು.

- ಅದ್ಭುತ ವಿನ್ಯಾಸ, ಅವಿಸ್ಮರಣೀಯ ಕರಕುಶಲ ಕೆಲಸಕ್ಕೆ ಹೆಸರುವಾಸಿಯಾಗಿರುವ ಈ ಅರಮನೆಯನ್ನು ತಿರುವನಂತಪುರಂ ನ "ಇರವಿ ಇರವಿ ವರ್ಮಾ ಕುಲಶೇಖರ ಪೆರುಮಾಳ್" 17 ನೇ ಶತಮಾನದಲ್ಲಿ ಕಟ್ಟಿಸಿದ ಎನ್ನಲಾಗಿದೆ. ಕಲ್ಕುಲಂ ಅರಮನೆ ಎಂಬುದು ಇದರ ಮತ್ತೊಂದು ಹೆಸರು.
- 18 ನೇ ಶತಮಾನದ ಮಧ್ಯಭಾಗದಲ್ಲಿ ಪ್ರಸಿದ್ದ ರಾಜ "ತಿರುನಾಳ್ ಮಾರ್ತಾಂಡ ವರ್ಮಾ" ಈ ಅರಮನೆಯ ಹೆಸರನ್ನು ಪದ್ಮನಾಭಪುರಂ ಅರಮನೆ ಎಂದು ನಾಮಕರಣ ಮಾಡಿದ.
- 1938 ರಲ್ಲಿ ಅಂದಿನ ಟ್ರಾವಂಕೊರ್ ಸರ್ಕಾರ ಈ ಅರಮನೆಯನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಿತ್ತು.
- 1950 ನಂತರ ರಾಜ್ಯ ಪುನರ್ ವಿಂಗಡಣೆ ವೇಳೆ ಈ ಅರಮನೆ ತಮಿಳುನಾಡಿಗೆ ಸೇರಿಕೊಂಡಿತಾದರೂ ಇದರ ಆಡಳಿತವನ್ನು ಕೇರಳ ನೋಡಿಕೊಳ್ಳುತ್ತಿದೆ. ಅರಮನೆಯ ನಿರ್ವಹಣಾ ವೆಚ್ಚ ಮತ್ತು ಆದಾಯವನ್ನು ಎರಡೂ ರಾಜ್ಯಗಳ ಸಮವಾಗಿ ಹಂಚಿಕೊಳ್ಳುತ್ತಿವೆ.

- ಈಗಾಗಲೇ ಸರ್ಕಾರ ಸಹ ಸೌಂದರ್ಯ ಭರಿತ ಈ ಅರಮನೆಯ ನಿರ್ವಹಣೆಗಾಗಿ ಅನೇಕ ಯೋಜನೆಗಳನ್ನು ರೂಪಿಸಿದೆ. ಅಂತರರಾಷ್ಟ್ರೀಯ ಮನ್ನಣೆಗೆ ಎದುರು ನೋಡುತ್ತಿರುವ ಈ ಅರಮನೆಯನ್ನು ವಿಶ್ವ ಪಾರಂಪರಿಕ ತಾಣ ಪಟ್ಟಿಗೆ ಸೇರ್ಪಡೆಗೊಳ್ಳಲಿ ಎಂಬುದು ಎಲ್ಲರ ಆಶಾಯವಾಗಿದೆ.

**ದೇಶದ ಗ್ರಾಮೀಣ ಭಾಗದಲ್ಲಿ ದಿನಕ್ಕೆ ರೂ 17 ರಲ್ಲಿ ಕಡುಬಡವರ ಜೀವನ**

ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ (National Sample Survey Organization (NSSO)) 2011-12 ನೇ ಸಾಲಿನ ಕುಟುಂಬ ಗ್ರಾಹಕರ ವೆಚ್ಚ ಕುರಿತಾ ಸಮೀಕ್ಷಾ ವರದಿಯನ್ನು ಬಿಡುಗಡೆಗೊಳಿಸಿದೆ. ಅಂಕಿ-ಅಂಶಗಳ ಪ್ರಕಾರ ದೇಶದ ಜನತೆ ತಮ್ಮ ಮಾಸಿಕ ತಲಾ ಖರ್ಚಿನ ಅರ್ಧದಷ್ಟನ್ನು ಆಹಾರೇತರ ಉಪಯೋಗಕ್ಕಾಗಿ ಖರ್ಚು ಮಾಡುತ್ತಿರುವುದಾಗಿ ಹೇಳಲಾಗಿದೆ. ಸಮೀಕ್ಷೆಯ ಪ್ರಮುಖ ಅಂಶಗಳು ಇಲ್ಲಿವೆ.

- ವರದಿಯ ಪ್ರಕಾರ ದೇಶದಲ್ಲಿ ಕಡುಬಡವರು ಗ್ರಾಮಗಳಲ್ಲಿ ದಿನವೊಂದಕ್ಕೆ ಕೇವಲ ರೂ 17 ಹಾಗೂ ನಗರ ಭಾಗದಲ್ಲಿ ಕೇವಲ 23 ರೂಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ.
- 2011-12 ನೇ ಸಾಲಿನ ದತ್ತಾಂಶಗಳ ಪ್ರಕಾರ, ಕಡುಬಡವರ ಜನಸಂಖ್ಯೆಯ ಪ್ರಮಾಣ ಶೇ 5 ರಷ್ಟಿದೆ. ತಿಂಗಳಿಗೆ ಅವರ ಒಟ್ಟು ವೆಚ್ಚ ಗ್ರಾಮೀಣ ಭಾಗದಲ್ಲಿ ರೂ 521.44 ಇದ್ದರೆ, ನಗರ ಭಾಗದಲ್ಲಿ ರೂ 4,481 ಇದೆ. ಇನ್ನು ಜನಸಂಖ್ಯೆಯ ಶೇ 5 ರಷ್ಟಿರುವ ಉನ್ನತ ಸ್ತರದ ಮಂದಿ ತಿಂಗಳಿಗೆ ಗ್ರಾಮೀಣ ಪ್ರದೇಶದಲ್ಲಿ 4,481 ರೂಗಳನ್ನು ಮತ್ತು ನಗರ ಭಾಗದಲ್ಲಿ 10,282 ರೂಗಳನ್ನು ಖರ್ಚುಮಾಡುತ್ತಿದ್ದಾರೆ.
- ದೇಶದ ಗ್ರಾಮೀಣ ಭಾಗದ ಸರಾಸರಿ ಮಾಸಿಕ ತಲಾ ವೆಚ್ಚ 1430 ರೂಗಳು. ಇದರಲ್ಲಿ ಶೇ 51 ರಷ್ಟನ್ನು ಆಹಾರೇತರ ವಸ್ತುಗಳ ಮೇಲೆ ಖರ್ಚುಮಾಡಲಾಗುತ್ತಿದೆ. ನಗರ ಪ್ರದೇಶದ ತಲಾ ಮಾಸಿಕ ವೆಚ್ಚ 2630 ರೂ ಆಗಿದೆ. ಇದರಲ್ಲಿ ಶೇ 61 ರಷ್ಟನ್ನು ನಗರ ಜನತೆ ಆಹಾರೇತರ ವಸ್ತುಗಳಿಗಾಗಿ ಖರ್ಚು ಮಾಡುತ್ತಿದ್ದಾರೆ.
- ಆಹಾರೇತರ ವಸ್ತುಗಳೆಂದರೆ ಬಟ್ಟೆ-ಬರೆ, ಇಂಧನ, ಸಿಗರೇಟ್ ಬೀಡಿ, ಇತ್ಯಾದಿ.

**ಕರ್ನಾಟಕ:**

- ದೇಶದ ಸರಾಸರಿ ತಿಂಗಳ ತಲಾ ವೆಚ್ಚಕ್ಕೆ ಹೋಲಿಸಿದರೆ, ಕರ್ನಾಟಕದ ನಗರಗಳಲ್ಲಿ ವಾಸಿಸುವ ಜನರ ಜೀವನ ಮಟ್ಟ ಉತ್ತಮವಾಗಿದೆ.
- ರಾಜ್ಯದ ಗ್ರಾಮೀಣ ಭಾಗದಲ್ಲಿ ತಿಂಗಳಿಗೆ 1428 ರೂ ಮತ್ತು ನಗರ ಭಾಗದಲ್ಲಿ 3026 ರೂಗಳಿಗೆ ವ್ಯಕ್ತಿಯೊಬ್ಬರ ಜೀವನ ಸಾಗುತ್ತಿದೆ. ನಗರ ವ್ಯಾಪ್ತಿಯಲ್ಲಿ ಹೆಚ್ಚಿನ ಮಾಸಿಕ ತಲಾ ವೆಚ್ಚ ಹೊಂದಿರುವ ರಾಜ್ಯಗಳ ಪೈಕಿ ಕರ್ನಾಟಕ 4 ನೇ ಸ್ಥಾನದಲ್ಲಿದೆ.

**ಕೇಂದ್ರ ಸರ್ಕಾರದ ಯೋಜನೆಗಳ ವಿಲೀನಕ್ಕೆ ಕೇಂದ್ರ ಸಂಪುಟ ಒಪ್ಪಿಗೆ**

ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳನ್ನು ಸರಳವಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಹಲವು ಯೋಜನೆಗಳನ್ನು ವಿಲೀನಗೊಳಿಸುವ ಮಹತ್ವದ ಒಪ್ಪಂದಕ್ಕೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಈ ಯೋಜನೆಗಳ ಜಾರಿಗೆ ಇರುವ ಮಾರ್ಗಸೂಚಿಗಳು ಬಹಳಷ್ಟು ಕಠಿಣವಾಗಿರುವುದಾಗಿ ರಾಜ್ಯಗಳು ದೂರು ಸಲ್ಲಿಸಿದ ಕಾರಣ ಕೇಂದ್ರ ಸಚಿವ ಸಂಪುಟ ಈ ಪ್ರಮುಖ ನಿರ್ಧಾರ ಕೈಗೊಂಡಿದೆ.

**ಪ್ರಮುಖ ಅಂಶಗಳು:**

- ಯೋಜನೆಗಳ ವಿಲೀನಕ್ಕೆ ಸಂಬಂಧಿಸಿದಂತೆ ಕಳೆದ ತಿಂಗಳು ಕೃಷಿ ಸಚಿವ ಶರದ್ ಪವರ್ ನೇತೃತ್ವದಲ್ಲಿ ರಚಿಸಲಾದ ಸಚಿವರ ಸಮಿತಿಯ ಶಿಫಾರಸ್ಸಿನ ಮೇರೆಗೆ ಯೋಜನೆಗಳನ್ನು ವಿಲೀನಗೊಳಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಸಚಿವರ

ಸಮಿತಿಯು ಪ್ರತಿ ಯೋಜನೆಯಲ್ಲಿ "ಸರಳ ನಿಧಿ ವ್ಯವಸ್ಥೆ (Flexi Fund System)" ಸ್ಥಾಪಿಸಲು ಒಪ್ಪಿದೆ. ಇದರ ಅನ್ವಯ ರಾಜ್ಯ ಸರ್ಕಾರಗಳು ಈ ಯೋಜನೆಗಳ ಬಜೆಟ್ ನ ಶೇ 10 ರಷ್ಟು ಹಂಚಿಕೆಯನ್ನು ಬಳಸಬಹುದಾಗಿದೆ.

- ಯೋಜನೆಗಳ ಹಣ ಸದ್ಬಳಕೆ ದೃಷ್ಟಿಯಿಂದ ಸಮಿತಿಯು, ನೇರವಾಗಿ ಕೇಂದ್ರ ಸರ್ಕಾರದಿಂದ ಜಾರಿ ಸಂಸ್ಥೆಗಳಿಗೆ ಹಣ ವರ್ಗಾಯಿಸುವ ಬದಲಿಗೆ ರಾಜ್ಯ ಸಂಚಯಿತ ನಿಧಿಗೆ ವರ್ಗಾಯಿಸಲು ಒಪ್ಪಿದೆ.
- ವಿಲೀನ ಪ್ರಸ್ತಾವನೆಯನ್ನು ಚತುರ್ವೇದಿ ಸಮಿತಿಯ ಶಿಫಾರಸ್ಸಿನ ಮೇರೆಗೆ ತಯಾರಿಸಲಾಗಿದೆ.
- ಸರ್ಕಾರ ಕೈಗೊಂಡಿರುವ ಈ ಕ್ರಮದಿಂದ ಪ್ರಸ್ತುತ ಜಾರಿಯಲ್ಲಿರುವ **170 ಕೇಂದ್ರ ಯೋಜನೆಗಳನ್ನು 66** ಕ್ಕೆ ಇಳಿಸಿಲಾಗುವುದು. 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ಉಳಿದಿರುವ ವರ್ಷಗಳಿಗೆ ಇದು ಅನ್ವಯವಾಗಲಿದೆ. ಇದರಲ್ಲಿ ಆರೋಗ್ಯ, ಮೂಲ ಸೌಕರ್ಯ ಅಭಿವೃದ್ಧಿ, ಶಿಕ್ಷಣ, ನೀರಾವರಿ, ನಗರ ಅಭಿವೃದ್ಧಿ ಮುಂತಾದ ಕ್ಷೇತ್ರಗಳಿಗೆ ಬಹಳ ಅನುಕೂಲವಾಗಿರುವ 17 ಪ್ರಾಯೋಗಿಕ ಯೋಜನೆಗಳು ಸೇರಿವೆ.
- ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಅಂತರ್ ಸಚಿವಾಲಯದ ಶಿಫಾರಸ್ಸಿನಂತೆ ರಾಜ್ಯಗಳು ತಮ್ಮದೇ ಆದ ಮಾರ್ಗಸೂಚಿಗಳನ್ನು ತಯಾರಿಸಿ ತಮ್ಮ ಯೋಜನೆಗಳನ್ನು ಜಾರಿಗೊಳಿಸಬಹುದಾಗಿದೆ.

**ಮಾಧ್ಯಮಗಳಲ್ಲಿ ಮಹಿಳೆಯರ ಅಶ್ಲೀಲ ಪ್ರದರ್ಶನ: ಸಮಿತಿ ರಚನೆ**

ಸಮೂಹ ಮಾಧ್ಯಮಗಳಲ್ಲಿ ಮಹಿಳೆಯರನ್ನು ಅಸಭ್ಯವಾಗಿ ಬಿಂಬಿಸುವ ವಿರುದ್ಧ ಮಾಧ್ಯಮ ಅಭಿಯಾನ ವಿಧಾನಗಳನ್ನು ಅಂತಿಮಗೊಳಿಸುವ ಸಲುವಾಗಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಮಿತಿಯೊಂದನ್ನು ರಚಿಸಿದೆ. ಮಹಿಳೆಯರ ಮೇಲೆ ಲೈಂಗಿಕ ಅಪರಾಧಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಲಾಗುವ ಟಿವಿ ಕಾರ್ಯಕ್ರಮ, ಸಿನಿಮಾ ಮತ್ತು ಜಾಹೀರಾತುಗಳ ಮೂಲಕ ಮಹಿಳೆಯರನ್ನು ಧನಾತ್ಮಕ ಅಂಶಗಳಿಂದ ತೋರಿಸುವ ಮಾಧ್ಯಮ ಅಭಿಯಾನವನ್ನು ಕೈಗೊಳ್ಳಲು ಇದೇ ವೇಳೆ ನಿರ್ಧರಿಸಲಾಗಿದೆ.

**ಸಮಿತಿ**:

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗಳಾದ ಶ್ರೀಮತಿ ಕೆ. ರತ್ನಪ್ರಭ ಅವರನ್ನು ಈ ಸಮತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.
- ಮಾಹಿತಿ ಮತ್ತು ಪ್ರಸರಣ ಸಚಿವಾಲಯದ ಡೈರೆಕ್ಟರ್ ಜನರಲ್, ರಾಷ್ಟ್ರೀಯ ಮಹಿಳಾ ಸಬಲೀಕರಣ ಆಯೋಗದ ಕಾರ್ಯದರ್ಶಿಗಳು ಮತ್ತು ಮಾಧ್ಯಮ ಸಚಿವಾಲಯದ ಕಾರ್ಯದರ್ಶಿಗಳು ಈ ಸಮಿತಿಯ ಸದಸ್ಯರಾಗಿರಲಿದ್ದಾರೆ.

**ಸಮಿತಿಯ ಕಾರ್ಯವೇನು?**

- ದಿನನಿತ್ಯದ ಜೀವನದಲ್ಲಿ ಮಹಿಳೆಯರ ಬಗ್ಗೆ ಗೌರವ ತುಂಬುವ ಸಲುವಾಗಿ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಪ್ರಚಾರ ಅಭಿಯಾನ ಕೈಗೊಳ್ಳುವ ವಿಧಾನಗಳನ್ನು ಅಂತಿಮಗೊಳಿಸುವುದು.
- ಸಮಾಜದ ಮೇಲೆ ಗರಿಷ್ಟ ಪರಿಣಾಮ ಬೀರಬಹುದಾದ ಮತ್ತು ಮಹಿಳೆಯರ ಕಡೆ ಜನರ ವರ್ತನೆ/ನಡವಳಿಕೆ ಧನಾತ್ಮಕವಾಗಿ ಬದಲಾವಣೆಯಾಗುವಂತೆ ಮಾಡಿ ಮಹಿಳೆಯರ ಅಭಿವ್ಯಕ್ತಿಗೊಳಿಸಲು ತಂತ್ರ ರಚಿಸಲು ಸಲಹೆ ನೀಡುವುದು.
- ಮಹಿಳೆಯರ ಸಾಧನೆಯನ್ನು ಎತ್ತಿ ಹಿಡಿಯುವ ಮೂಲಕ ಕುಟುಂಬ ಮಟ್ಟದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಗೌರವ ಹೆಚ್ಚಾಗುವಂತೆ ಹಾಗೂ ವರದಕ್ಷಿಣಿ, ಭ್ರೂಣ ಹತ್ಯೆ, ಬಾಲ್ಯ ವಿವಾಹವನ್ನು ತಿರಸ್ಕರಿಸುವಂತೆ ರಾಷ್ಟ್ರ ಮಟ್ಟದ ಅಭಿಯಾನವನ್ನು ರೂಪಿಸುವುದು.
- ವಿದ್ಯುನ್ಮಾನ ಪ್ರಸರಣ ಮತ್ತು ಮುದ್ರಣ ಸಲುವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಮಾಹಿತಿ ಮತ್ತು ಪ್ರಸರಣ ಸಚಿವಾಲಯದ ನಡುವೆ ಅಗತ್ಯವಿರುವ ಸಹಕಾರವನ್ನು ಉತ್ತೇಜಿಸುವುದು.

**ವಿಶ್ವದ ಅತ್ಯಂತ ದುಬಾರಿ ಕಚೇರಿ ಮಾರುಕಟ್ಟೆ ತಾಣ: ದೆಹಲಿಯ ಕೊನ್ನಾಟ್ (Connaught) ಗೆ 5 ನೇ ಸ್ಥಾನ**

ರಾಷ್ಟ್ರದ ರಾಜಧಾನಿ ನವದೆಹಲಿಯ ಹೃದಯ ಭಾಗವೆನಿಸಿರುವ ಕೊನ್ನಾಟ್ ಪ್ರದೇಶ ವಿಶ್ವದ ಅತ್ಯಂತ ದುಬಾರಿ ಕಚೇರಿ ಮಾರುಕಟ್ಟೆ (Most Expensive Office Market) ತಾಣಗಳ ಪಟ್ಟಿಯಲ್ಲಿ 5 ನೇ ಸ್ಥಾನ ಪಡೆದುಕೊಂಡಿದೆ. ಹೆಚ್ಚು ಬೇಡಿಕೆ ಮತ್ತು ಸೀಮಿತ ಸ್ಥಳಾವಕಾಶ ಮತ್ತು ಸೂಕ್ತ ಸ್ಥಳದಲ್ಲಿ ನೆಲೆಗೊಂಡಿರುವ ಕಾರಣ ಕೊನ್ನಾಟ್ ಪ್ರದೇಶ ಕಚೇರಿ ನಿರ್ಮಾಣಕ್ಕೆ ದುಬಾರಿ ಎನಿಸಿದೆ ಎಂದು CBRE ಹೇಳಿದೆ. ಕೊನ್ನಾಟ್ ನಲ್ಲಿ ಪ್ರತಿ ಚದರ ಅಡಿಗೆ ವಾರ್ಷಿಕವಾಗಿ 178.96 ಡಾಲರರಷ್ಟು ಬೇಡಿಕೆ ಇದೆ.

- ಹಾಂಕಾಂಗ್ ನ ಸೆಂಟ್ರಲ್ ವಿಶ್ವದ ಅತ್ಯಂತ ದುಬಾರಿ ಪ್ರದೇಶವೆನಿಸಿದೆ. ಇಲ್ಲಿ ಪತ್ರಿ ಚದರ ಅಡಿಗಳಿಗೆ ವಾರ್ಷಿಕ ವೆಚ್ಚ 235.23 ಡಾಲರನ್ನು ತೆರಬೇಕಾಗಿದ್ದು, ಸತತ ಮೂರನೇ ವರ್ಷ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ನಂತರದ ಸ್ಥಾನದಲ್ಲಿ ಲಂಡನ್ ನ "ವೆಸ್ಟ್ ಎಂಡ್", ಬೀಜಿಂಗ್ ನ "ಫೈನಾನ್ಸ್ ಸ್ಟ್ರೀಟ್" ಮತ್ತು ಬೀಜಿಂಗ್ ನ ಜಿಯಾಂಗುಮೆನ್ ಇವೆ.
- ಪಟ್ಟಿಯಲ್ಲಿ ಕಾಣಿಸಿಕೊಂಡಿರುವ ಭಾರತದ ಇತರೆ ವಾಣಿಜ್ಯ ಕೇಂದ್ರಗಳೆಂದರೆ, ಮುಂಬೈ ನ ಬಾಂದ್ರ ಕುರ್ಲಾ ಕಾಂಪ್ಲೆಕ್ಸ್ (11 ನೇ ಸ್ಥಾನ) ಮತ್ತು ನಾರಿಮನ್ ಪಾಯಿಂಟ್ (26 ನೇ ಸ್ಥಾನ).
- CBRE ನಡೆಸಿರುವ ಈ ಸಮೀಕ್ಷೆಯಲ್ಲಿ ಜಗತ್ತಿನ ಒಟ್ಟು 127 ವಾಣಿಜ್ಯ ಕೇಂದ್ರಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ.

**ಜಮ್ಮು ಮತ್ತು ಕಾಶ್ಮೀರದಲ್ಲಿ: ಏಷ್ಯಾದ ಎರಡನೇ ಅತಿ ದೊಡ್ಡ ರೈಲು ಸುರಂಗ ಮಾರ್ಗ ಉದ್ಘಾಟನೆ**

ದೇಶದ ಅತಿ ದೊಡ್ಡ ಮತ್ತು ಏಷ್ಯಾದ ಎರಡನೇ ಬೃಹತ್ ಸುರಂಗ ಮಾರ್ಗ ಜಮ್ಮುವಿನ ಬನಿಹಾಲ್ ಮತ್ತು ಕಾಶ್ಮೀರದ ಖಾಜಿಗುಂಡ್ ನಡುವಿನ 18 ಕಿ.ಮೀ ಉದ್ದದ ರೈಲ್ವೆ ಮಾರ್ಗಕ್ಕೆ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಮತ್ತು ಯುಪಿಎ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಚಾಲನೆ ನೀಡಿದರು. ಈ ಮೂಲಕ ಭಾರತೀಯ ರೈಲ್ವೆ ಮತ್ತೊಂದು ಮೈಲಿಗಲ್ಲು ಸಾಧಿಸಿದಂತಾಯಿತು.

- 8 ಬೋಗಿಗಳನ್ನು ಒಳಗೊಂಡ ರೈಲು ಈ ಸುರಂಗದ ಮೂಲಕ ದಿನಕ್ಕೆ ಐದು ಬಾರಿ ಚಲಿಸಲಿದೆ. ಇದರಿಂದ ಬನಿಹಾಲ್ ಮತ್ತು ಖಾಜಿಗುಂಡ ನಡುವಿನ ಸಂಚಾರ ಸಮಯ ತಗ್ಗಲಿದೆ. ರಸ್ತೆ ಮಾರ್ಗಗಳ ಮೂಲಕ ಈ ಎರಡು ನಗರಗಳ ನಡುವಿನ ಸಂಪರ್ಕಕ್ಕೆ 35 ಕಿ.ಮೀ ಚಲಿಸಬೇಕಿತ್ತು, ಆದರೆ ಈ ರೈಲು ಮಾರ್ಗದ ಮೂಲಕ ಕೇವಲ 18 ಕಿ.ಮೀ ಚಲಿಸಬೇಕಿದೆ.
- ಪಿರ್ ಪಂಜಲ್ ಪರ್ವತ ಶ್ರೇಣಿಯಲ್ಲಿ ನಿರ್ಮಿಸಲಾಗಿರುವ 18 ಕಿ.ಮೀ ಉದ್ದದ ಮಾರ್ಗದ ಪೈಕಿ 11 ಕಿ.ಮೀ ಸುರಂಗ ಮಾರ್ಗವಾಗಿದೆ. 1691 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಇದು ಭಾರತದ ಅತ್ಯಂತ ಉದ್ದವಾದ ಮತ್ತು ಏಷ್ಯಾದ ಎರಡನೇ ಅತಿ ದೊಡ್ಡ ಸುರಂಗ ಮಾರ್ಗವೆನಿಸಿದೆ. ಇರ್ಕಾನ್ ಇಂಟರ್ ನ್ಯಾಷನಲ್ ಲಿಮಿಟೆಡ್ ಈ ಯೋಜನೆ ಅನುಷ್ಠಾನದ ಪ್ರಮುಖ ರೂವಾರಿ. ಅತ್ಯಾಧುನಿಕ ಬೆಂಕಿ ಅವಘಡ ಪತ್ತೆ ಮತ್ತು ನಂದಿಸುವ ವ್ಯವಸ್ಥೆ ಸೇರಿದಂತೆ ಸಿಸಿಟಿವಿ ಅಳವಡಿಕೆಯನ್ನು ಈ ಸುರಂಗದಲ್ಲಿ ಮಾಡಲಾಗಿದೆ.
- ಡಿಸೆಂಬರ್ 28, 2012 ರಂದು ಪ್ರಥಮ ಬಾರಿಗೆ ಪ್ರಾಯೋಗಿಕ ರೈಲು ಸಂಚಾರವನ್ನು ಇಲ್ಲಿ ನಡೆಸಲಾಗಿತ್ತು.

**ಕಾಶ್ಮೀರ ಕಣಿವೆ ರೈಲ್ವೆ:**

- ಕಾಶ್ಮೀರ ಕಣಿವೆ ರೈಲ್ವೇ 119 ಕಿ.ಮೀ ಉದ್ದವಾದ ರೈಲು ಮಾರ್ಗವನ್ನು ಹೊಂದಿದೆ. 2009 ರಿಂದ ಇದು ಕಾರ್ಯರಂಭ ಮಾಡಿತು. ಇದೊಂದು ದ್ವೀಪ ಪ್ರದೇಶದಂತಿದ್ದು ಇದುವರೆಗೂ ದೇಶದ ಇತರೆ ರೈಲು ಮಾರ್ಗಗಳಿಗೆ ಸಂಪರ್ಕಿಸಲು ಆಗಿರಲಿಲ್ಲ.

- ಪಶ್ಚಿಮ ಕಾಶ್ಮೀರದ ಬಾರಮುಲ್ಲಾ ಮತ್ತು ಕಣಿವೆಯ ಮತ್ತೊಂದು ತುದಿಯಲ್ಲಿರುವ ಖಾಜಿಗುಂಡ ನಡುವೆ ಈ ಮಾರ್ಗ ಸಂಪರ್ಕವನ್ನು ಕಲ್ಪಿಸುತ್ತದೆ.
- ಈಗ ಲೋಕಾರ್ಪಣೆ ಮಾಡಿರುವ ಅತ್ಯಂತ ಸವಾಲಿನ ಈ ಯೋಜನೆಯಡಿ ಖಾಜಿಗುಂಡದಿಂದ ಬನಿಹಾಲ್ ವರೆಗೆ ರೈಲು ಮಾರ್ಗವನ್ನು ವಿಸ್ತರಿಸಲಾಗಿದೆ. ಅಂದರೆ ಕಾಶ್ಮೀರ ಕಣಿವೆಯಿಂದ ದೇಶದ ಇತರೆ ಭಾಗಕ್ಕೆ ಸಂಪರ್ಕ ಕಲ್ಪಿಸಿದಂತಾಗಿದೆ. "<u>ದಿ ನ್ಯೂ ಆಸ್ಟ್ರೀಯನ್ ಟನಲಿಂಗ್ ಮೆಥಡ್ (The New Austrian Tunneling Method)"</u> ಬಳಕೆಯ ಮೂಲಕ ಈ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದೆ.
  - ಮಹಾರಾಷ್ಟ್ರದಲ್ಲಿರುವ ಕರ್ಬುಡೆ (Karbude) ಸುರಂಗ ಮಾರ್ಗ ಇದುವರೆಗೂ ದೇಶದ ಅತಿ ದೊಡ್ಡ ಸುರಂಗ ಮಾರ್ಗವೆನಿಸಿತ್ತು. 1997 ರಲ್ಲಿ ಸಂಚಾರಕ್ಕೆ ಮುಕ್ತವಾದ ಈ ಸುರಂಗ ಮಾರ್ಗ 6,5 ಕಿ.ಮೀ ಉದ್ದವಿದ್ದು, ಉಕ್ಕಿ ಮತ್ತು ಬೊಕೆ ನಡುವೆ ಸಂರ್ಪಕ ಕಲ್ಪಿಸಿದೆ.
  - ಚೀನಾದ ಗನ್ಸು ಬಳಿ ಸ್ಥಾಪಿಸಲಾಗಿರುವ "ವುಶಯಲಿಂಗ್ (Wushaoling)" ಸುರಂಗ ಮಾರ್ಗ ಏಷ್ಯಾದ ಅತಿ ದೊಡ್ಡ ಸುರಂಗ ಮಾರ್ಗ. ಇದರ ಒಟ್ಟು ಉದ್ದ 20 ಕಿ.ಮೀ.
  - ಪ್ರಸ್ತುತ ಜಪಾನ್ ನ ಸೈಕನ್ (Seikan) ಸುರಂಗ ಮಾರ್ಗ ವಿಶ್ವದ ಅತಿ ದೊಡ್ಡ ಮತ್ತು ಅತಿ ಆಳವಾದ ಸುರಂಗ ಮಾರ್ಗ. ಇದರ ಉದ್ದ 53.85 ಕಿ.ಮೀ.

<u>**ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನ: ರಾಷ್ಟ್ರಪತಿಗಳಿಂದ ಪ್ರಶಸ್ತಿ ಪ್ರದಾನ**</u>

ಅಂತರರಾಷ್ಟ್ರೀಯ ಮಾದಕ ವಸ್ತು ಮತ್ತು ಕಾನೂನು ಬಾಹಿರ ಸಾಗಣಿಕೆ ವಿರೋಧಿ ದಿನ (International Day Against Drug Abuse and Illicit Trafficking) ದ ಅಂಗವಾಗಿ ಮದ್ಯಪಾನ ಮತ್ತು ಮಾದಕ ವಸ್ತುಗಳ ಸೇವನೆ ತಡೆಯುವಲ್ಲಿ ಶ್ರಮಿಸಿದವರನ್ನು ಗೌರವಿಸುವ ಸಲುವಾಗಿ ನೀಡಲಾಗುವ ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿ ಅವರು ನವದೆಹಲಿಯಲ್ಲಿ ವಿತರಿಸಿದರು.

- ಇದೇ ಮೊದಲ ಬಾರಿಗೆ ಮದ್ಯಪಾನ ಮತ್ತು ಮಾದಕ ವಸ್ತುಗಳ ಸೇವನೆ ತಡೆಯುವಲ್ಲಿ ಶ್ರಮಿಸಿದವರಿಗೆ ಈ ಪ್ರಶಸ್ತಿಯನ್ನು ಭಾರತ ಸರ್ಕಾರ ನೀಡುತ್ತಿದೆ.
- ಮದ್ಯಪಾನ ಮತ್ತು ಮಾದಕ ವಸ್ತು ಸೇವನೆಯನ್ನು ತಡೆಯುವಲ್ಲಿ ಶ್ರಮಿಸಿರುವ ಮಣಿಪುರ ಮೂಲದ "ಯೂತ್ ಡೆವೆಲಪ್ ಮೆಂಟ್ ಆರ್ಗನೈಸೇಶನ್" ಮತ್ತು ಉತ್ತರಾಖಂಡದ "ಚರ್ಬ ಗ್ರಾಮ ಪಂಚಾಯತಿ"ಗೆ ಈ ಬಾರಿಯ ಪ್ರಶಸ್ತಿಯನ್ನು ನೀಡಲಾಗಿದೆ.
- ಈ ಸಂದರ್ಭದಲ್ಲಿ ಮಾತನಾಡಿದ ಪ್ರಣಬ್ ಮುಖರ್ಜಿ ಅವರು ಮದ್ಯಪಾನ ಮತ್ತು ಮಾದಕ ವಸ್ತು ಸೇವನೆ ಸಾಮಾಜಿಕ, ಮಾನಸಿಕ ಮತ್ತು ವೈದ್ಯಕೀಯ ಸಮಸ್ಯೆಯಾಗಿದ್ದು, ಈ ಪಿಡುಗನ್ನು ತೊಡೆದು ಹಾಕಲು ಪುನರ್ ವಸತಿ ಮತ್ತು ಸಾಮಾಜಿಕ ಏಕೀಕರಣ ಕಾರ್ಯ ತುರ್ತಾಗಿ ನಡೆಯಬೇಕಿದೆ ಎಂದರು.

<u>**ಅಂತರರಾಷ್ಟ್ರೀಯ ಮಾದಕ ವಸ್ತು ಮತ್ತು ಕಾನೂನು ಬಾಹಿರ ಸಾಗಣಿಕೆ ವಿರೋಧಿ ದಿನ**</u>

- ಜೂನ್ 26 ರಂದು ಪ್ರತಿ ವರ್ಷ ಅಂತರರಾಷ್ಟ್ರೀಯ ಮಾದಕ ವಸ್ತು ಮತ್ತು ಕಾನೂನು ಬಾಹಿರ ಸಾಗಣಿಕೆ ದಿನವೆಂದು ಆಚರಿಸಲಾಗುತ್ತಿದೆ.
- ಡಿಸೆಂಬರ್ 7, 1987 ರಂದು ವಿಶ್ವಸಂಸ್ಥೆ ಜೂನ್ 27 ನ್ನು ಅಂತರರಾಷ್ಟ್ರೀಯ ಮಾದಕ ವಸ್ತು ಮತ್ತು ಕಾನೂನು ಬಾಹಿರ ಸಾಗಣಿಕೆ ದಿನವೆಂದು ಆಚರಿಸಲು ನಿರ್ಧರಿಸಿತು.
- "Make Health Your Hign in Life, not Drug" ಇದು ಈ ವರ್ಷದ ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನದ ಥೀಮ್.

**ರಾಜಸ್ತಾನ "ಮುಖ್ಯಮಂತ್ರಿ ಬಿಜ್ಲಿ ಬಚತ್ ಲ್ಯಾಂಪ್ ಯೋಜನೆ" ಜಾರಿ**

ಇಂಧನ ಉಳಿಸುವ ದೃಷ್ಟಿಯಿಂದ ರಾಜಸ್ತಾನ ಸರ್ಕಾರ ಇತ್ತೀಚೆಗೆ "ಮುಖ್ಯಮಂತ್ರಿ ಬಿಜ್ಲಿ ಬಚತ್ ಲ್ಯಾಂಪ್ ಯೋಜನೆ" ಎಂಬ ಹೊಸ ಯೋಜನೆಯೊಂದಕ್ಕೆ ಚಾಲನೆ ನೀಡಿದೆ. ಈ ಯೋಜನೆಯ ಮುಖ್ಯ ಅಂಶಗಳು ಇಲ್ಲಿದೆ.

- ಈ ಯೋಜನೆಯಡಿ ರಾಜಸ್ತಾನ ಸರ್ಕಾರ ಗ್ರಾಮೀಣ ಭಾಗದ ವಿದ್ಯುತ್ ಬಳಕೆದಾರರಿಗೆ ಮತ್ತು ಬಿಪಿಎಲ್ ಕಾರ್ಡ್ ಹೊಂದಿರುವ ನಗರ ವಾಸಿ ಕುಟುಂಬಕ್ಕೆ ಎರಡಂತೆ ಉಚಿತವಾಗಿ ಸಿಎಫ್ಎಲ್ (CFL) ಬಲ್ಬ್ ಗಳನ್ನು ನೀಡಲಿದೆ.
- ಈ ಯೋಜನೆಯು ಆಗಸ್ಟ್ 2013 ರ ವರೆಗೆ ಮಾತ್ರ ಇರಲಿದೆ.
- ಸುಮಾರು 53 ಲಕ್ಷ ಕುಟುಂಬಗಳು ಈ ಯೋಜನೆಯಿಂದ ಅನುಕೂಲವನ್ನು ಪಡೆದುಕೊಳ್ಳಲಿವೆ. ಇದಕ್ಕಾಗಿ ರಾಜಸ್ತಾನ ಸರ್ಕಾರ 100 ಕೋಟಿ ರೂಗಳನ್ನು ಖರ್ಚು ಮಾಡಲಿದೆ.
- ವಿದ್ಯುತ್ ಶಕ್ತಿ ಮಿತಬಳಕೆ ಮತ್ತು ಪರಿಸರ ಸಂರಕ್ಷಣೆ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದ್ದು, 93 ಕೋಟಿಯಷ್ಟು ವಿದ್ಯುತ್ ಶಕ್ತಿ ಉಳಿಕೆಯಾಗಲಿದೆ. ಅಲ್ಲದೇ ವಿದ್ಯುತ್ ಗ್ರಾಹಕರು ವಾರ್ಷಿಕ 298 ಕೋಟಿ ರೂಗಳನ್ನು ಉಳಿಸಲಿದ್ದಾರೆ.

**ರಷ್ಯಾ ನಿರ್ಮಿತ "ಐಎನ್ಎಸ್ ತ್ರಿಕಂಡ್" ಯುದ್ದ ನೌಕೆ ಸೇರ್ಪಡೆ**

ರಷ್ಯಾ ನಿರ್ಮಿತ "ಐಎನ್ಎಸ್ ತ್ರಿಕಂಡ್" ಯುದ್ದ ನೌಕೆಯನ್ನು ಭಾರತ ನೌಕದಳಕ್ಕೆ ಸೇರ್ಪಡೆಗೊಂಡಿತು. ವೈಸ್ ಅಡ್ಮಿರಲ್ ಆರ್.ಕೆ. ದೊವನ್ ಮತ್ತು ರಷ್ಯಾದ ನೌಕದಳದ ಪ್ರಮುಖರ ಸಮ್ಮುಖದಲ್ಲಿ ನಡೆದ ಸರಳ ಸಮಾರಂಭದಲ್ಲಿ ಐಎನ್ಎಸ್ ತ್ರಿಕಂಡ್ ಅನ್ನು ನೌಕಸೇನೆಗೆ ಸೇರ್ಪಡೆಗೊಳಿಸಲಾಯಿತು. ಈ ಯುದ್ದ ನೌಕೆಯ ಸೇರ್ಪಡೆಯಿಂದ ಭಾರತ ನೌಕದಳ ತನ್ನ ಬಲಿಷ್ಠತೆಯನ್ನು ಮತ್ತಷ್ಟು ಹೆಚ್ಚಿಸಿಗೊಂಡಂತಾಗಿದೆ.

**ಐಎನ್ಎಸ್ ತ್ರಿಕಂಡ್ ಬಗ್ಗೆ**:

- ಮೂರು ಯುದ್ದ ನೌಕೆಗಳ ಅಭಿವೃದ್ದಿ ಮತ್ತು ಪೂರೈಕೆಗೆ ಸಂಬಂಧಿಸಿದಂತೆ ಭಾರತ-ರಷ್ಯಾ ನಡುವೆ ಮಾಡಿಕೊಳ್ಳಲಾಗಿದ್ದ ಒಪ್ಪಂದದ ಪೈಕಿ ಕೊನೆಯದಾಗಿದ್ದ ಐಎನ್ಎಸ್ ತ್ರಿಕಂಡ್ ಅನ್ನು ರಷ್ಯಾ ಭಾರತಕ್ಕೆ ಪೂರೈಸಿದೆ. ಈ ಮೂಲಕ ರಷ್ಯಾ ಮತ್ತು ಭಾರತದ ನಡುವಿನ ರಕ್ಷಣಾ ಒಪ್ಪಂದ ಮತ್ತು ತಂತ್ರಜ್ಞಾನ ವಿನಿಮಯ ಕುರಿತಾಗಿ ಮತ್ತೊಂದು ಮೈಲಿಗಲ್ಲು ಎನ್ನಲಾಗಿದೆ.
- ಈ ಒಪ್ಪಂದದಡಿ ಈಗಾಗಲೇ ಐಎನ್ಎಸ್ ತೇಗ್ ಮತ್ತು ಐಎನ್ಎಸ್ ತರ್ಕಷ್ ಯುದ್ದ ನೌಕೆಗಳನ್ನು ರಷ್ಯಾ ಪೂರೈಸಿದ್ದು, ನೌಕದಳದ ಪಶ್ಚಿಮ ಕಮಾಂಡ್ ನಲ್ಲಿ ಕಾರ್ಯನಿರ್ವಹಿಸುತ್ತಿವೆ.

**ವಿಶೇಷತೆಗಳು**:

- ಐಎನ್ಎಸ್ ತ್ರಿಕಂಡ್ ಒಂದು ಅತ್ಯಾಧುನಿಕ ತಂತ್ರಜ್ಞಾನ ಬಳಕೆಯಿಂದ ತಯಾರಿಸಲಾಗಿರುವ ಯುದ್ದ ನೌಕೆ. ಈ ನೌಕೆಯು ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆ, ಎ190 ಮಧ್ಯಮ ಶ್ರೇಣಿಯ ಗನ್ ಮತ್ತು ಜಲಾಂತರ್ಗಾಮಿ ಶಸ್ತ್ರಾಸ್ತ್ರಗಳಾದ ಟೊರ್ಪೆಡೊ ಮತ್ತು ರಾಕೆಟ್ ಗಳನ್ನು ಹೊಂದಿದೆ. ಇವುಗಳ ಜತೆಗೆ ರೆಡಾರ್ ಅಯಸ್ಕಾಂತೀಯದಂತಹ ಸೌಲಭ್ಯಗಳನ್ನು ಸಹ ಇದು ಒಳಗೊಂಡಿದೆ.

**ಜೂನ್ 29: "ಸಂಖ್ಯಾ ಶಾಸ್ತ್ರ (Statistics Day)" ದಿನಾಚರಣೆ**

ಭಾರತದಲ್ಲಿ ಪ್ರತಿ ವರ್ಷ ಜೂನ್ 29 ರಂದು ಸಂಖ್ಯಾ ಶಾಸ್ತ್ರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತದೆ. ಆರ್ಥಿಕ ಯೋಜನೆ ಮತ್ತು ಸಂಖ್ಯಾ ಶಾಸ್ತ್ರಕ್ಕೆ ದಿವಂಗತ ಪ್ರೋ. ಪ್ರಶಾಂತ ಚಂದ್ರ ಮೆಹಲನೊಬಿಸ್ ಅವರು ನೀಡಿರುವ ಗಣನೀಯ ಕೊಡುಗೆಯ ಅಂಗವಾಗಿ ಅವರ ಜನ್ಮದಿನವಾದ

ಜೂನ್ 29 ನ್ನು ದೇಶದಾದ್ಯಂತ ಸಂಖ್ಯಾಶಾಸ್ತ್ರ ದಿನವನ್ನು ಆಚರಿಸುವಂತೆ ಭಾರತ ಸರ್ಕಾರ ನಿರ್ಧರಸಿರುವ ಕಾರಣ ಈ ದಿನದಂದು ಸಂಖ್ಯಾ ಶಾಸ್ತ್ರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

- ಸಾಮಾಜಿಕ-ಆರ್ಥಿಕ ಯೋಜನೆ ಮತ್ತು ನೀತಿ ಜಾರಿ ಮಾಡುವಲ್ಲಿ ಸಂಖ್ಯಾ ಶಾಸ್ತ್ರದ ಮಹತ್ವವನ್ನು ತಿಳಿಯುವ ಸಲುವಾಗಿ ಮೆಹಲನೊಬಿಸ್ ಅವರನ್ನು ಸ್ಫೂರ್ತಿಯಾಗಿಸಿಕೊಳ್ಳಲು ಜನತೆಗೆ ಅದರಲ್ಲೂ ಯುವಜನತೆಗೆ ಕರೆ ನೀಡುವುದು ಈ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ.
- "ಕಾರ್ಮಿಕ ಮತ್ತು ಉದ್ಯೋಗ ಅಂಕಿ-ಅಂಶ (Labour and Employment Statistics)" ಇದು ಈ ವರ್ಷದ ಸಂಖ್ಯಾ ಶಾಸ್ತ್ರ ದಿನದ ಥೀಮ್.

**<u>ಅಭಿಮಾನ್ ದಾಸ್ ಗೆ ಪ್ರಶಸ್ತಿ:</u>**

ಸಂಖ್ಯಾ ಶಾಸ್ತ್ರಕ್ಕೆ ಗಣನೀಯ ಸೇವೆ ನೀಡಿದವರಿಗೆ ಪ್ರೊ. ಸಿ.ಆರ್.ರಾವ್ ಅವರ ಹೆಸರಿನಡಿ ನೀಡಲಾಗುತ್ತಿರುವ ರಾಷ್ಟ್ರೀಯ ಪ್ರಶಸ್ತಿಯನ್ನು ಈ ಬಾರಿ RBI ನಲ್ಲಿ ಸಂಖ್ಯಾಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸುತ್ತಿರುವ ಅಭಿಮನ್ ದಾಸ್ ಅವರಿಗೆ ನೀಡಿ ಗೌರವಿಸಲಾಗಿದೆ. ಪ್ರಶಸ್ತಿಯು ಎರಡು ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ

ಕರುನಾಡು ಎಕ್ಸಾಮ್ಸ್

## ಅಂತರರಾಷ್ಟ್ರೀಯ

**ಕಠ್ಮಂಡು:ಭಾರತ-ನೇಪಾಳ ಗೃಹಕಾರ್ಯದರ್ಶಿಗಳ ಮಟ್ಟದ ಸಭೆ**

ಭಾರತ ಮತ್ತು ನೇಪಾಳ ದೇಶಗಳ ನಡುವೆ ಗೃಹ ಕಾರ್ಯದರ್ಶಿಗಳ ಮಟ್ಟದ ಮಾತುಕತೆ ನೇಪಾಳದ ಕಠ್ಮಂಡುವಿನಲ್ಲಿ ಆರಂಭಗೊಂಡಿತು. ಮೂರು ದಿನಗಳ ಈ ಮಹತ್ವದ ಸಭೆಯಲ್ಲಿ ಭಾರತದ ಗೃಹ ಕಾರ್ಯದರ್ಶಿ ಆರ್.ಕೆ.ಸಿಂಗ್ ಮತ್ತು ನೇಪಾಳದ ಗೃಹ ಕಾರ್ಯದರ್ಶಿ ನವೀನ್ ಕುಮಾರ್ ಗಿಮಿರೆ ರವರು ಭಾಗವಹಿಸಿದ್ದು, ಗಡಿ ಭದ್ರತೆ ಸೇರಿದಂತೆ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ನೇಪಾಳದ ಭಾರತೀಯ ರಾಯಭಾರಿ ಜಯಂತ್ ಪ್ರಸಾದ್, ರಾಜಕೀಯ ಕೌನ್ಸಿಲರ್ ಪೀಯೂಷ್ ಶ್ರೀವಾಸ್ತವ ರವರು ಸಹ ಈ ನಿಯೋಗದಲ್ಲಿದ್ದಾರೆ. ಈ ಸಭೆಯಲ್ಲಿ ಚರ್ಚಿತಗೊಂಡ ವಿಷಯಗಳ ಬಗ್ಗೆ ಒಂದು ನೋಟ ಇಲ್ಲಿದೆ.

- **ಗಡಿ ಭದ್ರತೆ**: ಉಭಯ ದೇಶಗಳ ಗೃಹ ಕಾರ್ಯದರ್ಶಿಗಳು ಗಡಿ ಭದ್ರತೆಯ ಬಗ್ಗೆ ಸಮಾಲೋಚನೆ ನಡೆಸಿದರು. ತೆರೆದ ಗಡಿ ಮೂಲಕ ಒಳ ನುಸುಳುವುದನ್ನು ತಡೆಯಲು ಎರಡೂ ರಾಷ್ಟ್ರಗಳು ಪರಸ್ಪರ ಸಹಕಾರ ನೀಡುವುದಾಗಿ ಸಭೆಯಲ್ಲಿ ಹೇಳಲಾಯಿತು. ಎರಡೂ ದೇಶಗಳಲ್ಲಿ ನಡೆಯುತ್ತಿರುವ ಅಕ್ರಮ ವ್ಯಾಪಾರ, ನಕಲಿ ಕರೆನ್ಸಿ ಚಲಾವಣೆ ಮತ್ತಿತ್ತರ ವಿಷಯಗಳ ಬಗ್ಗೆ ಆಳವಾಗಿ ಚರ್ಚಿಸಲಾಯಿತು.
- ಭಯೋತ್ಪಾದನೆ ನಿಗ್ರಹ, ಅಕ್ರಮ ಶಸ್ತ್ರಾಸ್ತ್ರ ಮಾರಾಟ, ಗಡಿ ನುಸುಳುವಿಕೆ ಮತ್ತು ಮಾದಕ ವಸ್ತುಗಳ ಕಳ್ಳಸಾಗಾಟಗಳನ್ನು ನಿಗ್ರಹಿಸಲು ಉಭಯ ದೇಶಗಳು ಪರಸ್ಪರ ಸಹಕಾರದಿಂದ ಮುನ್ನಡೆಯಲು ತೀರ್ಮಾನಿಸಲಾಯಿತು.
- ಜನವರಿ 2012 ರಲ್ಲಿ ಎರಡೂ ದೇಶಗಳ ಗೃಹ ಕಾರ್ಯದರ್ಶಿಗಳ ಸಭೆಯನ್ನು ದೆಹಲಿಯಲ್ಲಿ ಆಯೋಜಿಸಲಾಗಿತ್ತು. ಭಯೋತ್ಪಾದನೆ ನಿಗ್ರಹ, ಕಳ್ಳ ಸಾಗಾಣಿಕೆ ತಡೆ, ಭಾರತದಲ್ಲಿ ನೇಪಾಳ ಪೊಲೀಸರಿಗೆ ತರಬೇತಿ ನೀಡುವುದು ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಚರ್ಚಿಸಲಾಗಿತ್ತು.

**ಅಮೆರಿಕಾದಿಂದ ಗೋಧಿ ಆಮದು ರದ್ದುಗೊಳಿಸಿದ ಜಪಾನ್ ಮತ್ತು ದಕ್ಷಿಣ ಕೊರಿಯಾ**

ಅಮೆರಿಕಾ ಕುಲಾಂತರಿ ಗೋಧಿಯನ್ನು ರಫ್ತು ಮಾಡುತ್ತಿರುವ ಹಿನ್ನಲೆಯಲ್ಲಿ ಜಪಾನ್ ಮತ್ತು ದಕ್ಷಿಣ ಕೊರಿಯಾ ಗೋಧಿ ಆಮದನ್ನು ರದ್ದುಗೊಳಿಸಿವೆ. ಜಪಾನ್ ಮತ್ತು ದಕ್ಷಿಣ ಕೊರಿಯಾ ಕೈಗೊಂಡಿರುವ ಈ ತೀರ್ಮಾನದಿಂದ ಜಾಗತಿಕ ಮಾರುಕಟ್ಟೆ ತಲ್ಲಣಗೊಂಡಿದ್ದು, ಅಮೆರಿಕಾ ಸರ್ಕಾರದ ಕೃಷಿ ಇಲಾಖೆ ತನಿಖೆಗೆ ಮುಂದಾಗಿದೆ.

- ವಿಶ್ವದ ಯಾವುದೇ ಭಾಗದಲ್ಲಿ ಕುಲಾಂತರಿ ಗೋಧಿಯನ್ನು ವಾಣಿಜ್ಯ ಉದ್ದೇಶಕ್ಕಾಗಿ ಬೆಳೆಯಲು ಅವಕಾಶ ಕಲ್ಪಿಸಲಾಗಿಲ್ಲ ಆದರೆ ಒರೆಗಾನ್ ಕೃಷಿ ಕ್ಷೇತ್ರದಲ್ಲಿ ಕೆಲವೊಂದು ಸಸ್ಯಜನ್ಯ (Herbicide Resistant) ನಿರೋಧಕ ಗಿಡಗಳು ಪತ್ತೆಯಾಗಿದ್ದವು.
- ಕುಲಾಂತರಿ ಗೋಧಿಯಲ್ಲಿ "ಗ್ಲೈಪೊಸ್ಟೇಟ್" ನಿರೋಧಕ ಜೀನ್ ನನ್ನು ಸೇರಿಸಲಾಗಿದೆ. ಆಗಾಗಿ ಮಾನ್ಸೆಂಟೊ ತಯಾರಿಸಿರುವ ಕಳೆ ನಾಶಕ "ರೌಂಡ್ ಅಪ್" ನ್ನು ಸಿಂಪಡಿಸಿದರು ಅದಕ್ಕೆ ನಿರೋಧಕ ವ್ಯಕ್ತಪಡಿಸಿದೆ.
- ಕುಲಾಂತರಿ ಜೋಳ ಮತ್ತು ಸೋಯಾಬೀನ್ ಬೆಳೆಯಲು ಅಮೆರಿಕಾದಲ್ಲಿ ಅವಕಾಶ ನೀಡಲಾಗಿದ್ದು, ಅವುಗಳನ್ನು ಪಶುಸಂಗೋಪನೆಗೆ ಮಾತ್ರ ಬಳಸಲಾಗುತ್ತಿದೆ. ಆದರೆ ಕುಲಾಂತರಿ ಗೋಧಿಯನ್ನು ಬೆಳೆಯಲು ಅನುಮತಿ ನೀಡಿಲ್ಲ ಎಂದು ಅಮೆರಿಕಾ ಸ್ಪಷ್ಟಪಡಿಸಿದೆ.
- ಕುಲಾಂತರಿ ಬೆಳೆಗಳು ಬರಗಾಲ ಮತ್ತು ಕೀಟಗಳಿಗೆ ನಿರೋಧಕತೆಯನ್ನು ಒಡ್ಡುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಜತೆಗೆ ಆರೋಗ್ಯದ ಮೇಲೆ ಪರಿಣಾಮ ಬೀರುವ ವಿಷಯುಕ್ತಕಾರಿ ಅಂಶಗಳನ್ನು ಮತ್ತು ಕಡಿಮೆ ಪೋಷಕಾಂಶಗಳಿಂದ ಕೂಡಿರುತ್ತವೆ ಎಂಬುದು ತಜ್ಞರ ವಾದ.

**ಸಲಿಂಗ ವಿವಾಹ ಅಪರಾಧವೆಂದು ಪರಿಗಣಿಸಲಿರುವ ನೈಜೀರಿಯಾ**

ಸಲಿಂಗ ವಿವಾಹವನ್ನು ಅಪರಾಧವೆಂದು ಪರಿಗಣಿಸಲು ಅವಕಾಶ ಕಲ್ಪಿಸುವ ವಿವಾದತ್ಮಕ ಮಸೂದೆಗೆ ನೈಜೀರಿಯಾ ಸಂಸತ್ತು ಅಂಗೀಕಾರ ನೀಡಿದೆ. ಈ ಮಸೂದೆ ಅನ್ವಯ ಸಲಿಂಗ ವಿವಾಹಕ್ಕೆ ಒಳಗಾಗುವವರಿಗೆ ಗರಿಷ್ಠ 14 ವರ್ಷ ಜೈಲು ಶಿಕ್ಷೆಯನ್ನು ವಿಧಿಸಲಾಗುವುದು.

- ಸಲಿಂಗ ವಿವಾಹಕ್ಕೆ ಸಾಕ್ಷಿ ಹಾಕುವವರು, ಪ್ರೋತ್ಸಾಹಿಸುವವರು, ಸಲಿಂಗ ವಿವಾಹ ಉತ್ತೇಜಿಸುವ ಕ್ಲಬ್ ಗಳೂ ಹಾಗೂ ಸಾರ್ವಜನಿಕವಾಗಿ ಸಲಿಂಗ ವಿವಾಹ ಬಗ್ಗೆ ಪ್ರದರ್ಶನ ಮಾಡಿದವರಿಗೆ 10 ವರ್ಷಗಳ ಕಾಲ ಜೈಲು ಶಿಕ್ಷೆ ನೀಡುವ ಅವಕಾಶವನ್ನು ಮಸೂದೆಯಲ್ಲಿ ನೀಡಲಾಗಿದೆ. ಉದ್ದೇಶಿತ ಮಸೂದೆಯಡಿ ಸಲಿಂಗ ವಿವಾಹವನ್ನು ಧಾರ್ಮಿಕವಾಗಿ ಮತ್ತು ನೈತಿಕವಾಗಿ ವಿರೋಧಿಸಲಾಗಿದೆ. ಸದ್ಯ ಈ ಮಸೂದೆಯನ್ನು ನೈಜೀರಿಯಾದ ಅಧ್ಯಕ್ಷ ಗುಡಲಕ್ ಜೋನಾಥನ್ ರವರ ಸಹಿಗಾಗಿ ಕಳುಹಿಸಲಾಗಿದೆ.
- ನೈಜೀರಿಯಾ ಸುಮಾರು 170 ಮಿಲಿಯನ್ ಜನಸಂಖ್ಯೆಯನ್ನು ಹೊಂದಿದ್ದು, ಭೌಗೋಳಿಕ ಮತ್ತು ಧಾರ್ಮಿಕ ಆಧಾರದ ಮೇಲೆ ವಿಭಜಿಸಲಾಗಿದೆ. ನೈಜೀರಿಯಾದ ಉತ್ತರಾರ್ಧ ಮುಸ್ಲಿಂ ಸಮುದಾಯದಿಂದ ಕೂಡಿದ್ದಾರೆ, ದಕ್ಷಿಣಾರ್ಧ ಕ್ರೈಸ್ತ ಸಮುದಾಯದಿಂದ ಕೂಡಿದೆ.
- ಆಫ್ರಿಕಾದ 37 ದೇಶಗಳಲ್ಲಿ "ಸಲಿಂಗ ಕಾಮ"ವನ್ನು ಕಾನೂನು ಬಾಹಿರವೆಂದು ಪರಿಗಣಿಸಲಾಗಿದೆ. ಸಲಿಂಗ ವಿವಾಹದ ಮೇಲೆ ನಿರ್ಬಂಧ ಹೇರಿದ ಏಕೈಕ ಆಫ್ರಿಕನ್ ರಾಷ್ಟ್ರವೆಂದರೆ ದಕ್ಷಿಣ ಆಫ್ರಿಕಾ.

**ಸೇನಾ ತರಬೇತಿ ವಿಸ್ತರಣೆ ಒಪ್ಪಂದಕ್ಕೆ ಭಾರತ-ಸಿಂಗಾಪುರ ಸಹಿ**

ಸಿಂಗಾಪುರ ಸೇನೆ ಭಾರತದಲ್ಲಿ ಪಡೆಯುತ್ತಿರುವ ತರಬೇತಿ ಮತ್ತು ಸಮರಭ್ಯಾಸ ಸೌಲಭ್ಯವನ್ನು ಈ ವರ್ಷದ ಆಗಸ್ಟ್ ನಿಂದ ಮುಂದಿನ ಐದು ವರ್ಷಗಳ ವರೆಗೆ ವಿಸ್ತರಿಸುವ ಒಪ್ಪಂದಕ್ಕೆ ಭಾರತ ಮತ್ತು ಸಿಂಗಾಪುರ ಸಹಿ ಹಾಕಿದವು. ಸಿಂಗಾಪುರ ಪ್ರವಾಸದಲ್ಲಿರುವ ಭಾರತದ ರಕ್ಷಣಾ ಸಚಿವ ಎ.ಕೆ.ಆಂಟನಿ ಮತ್ತು ಸಿಂಗಾಪುರ ರಕ್ಷಣಾ ಸಚಿವರಾದ ಡಾ.ಎಂಗ್ ಹೆನ್ ರವರ ಸಮ್ಮುಖದಲ್ಲಿ ಭಾರತದ ರಕ್ಷಣಾ ಕಾರ್ಯದರ್ಶಿ ಆರ್.ಕೆ.ಮಾಥುರ್ ಮತ್ತು ಸಿಂಗಾಪುರದ ಖಾಯಂ ರಕ್ಷಣಾ ಕಾರ್ಯದರ್ಶಿ ಚಿಯಾಂಗ್ ಚಿ ಫೊ ರವರು ಈ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದರು. ಇದೇ ವೇಳೆ ಏಷ್ಯಾ-ಫೆಸಿಪಿಕ್ ವಲಯದಲ್ಲಿ ಭದ್ರತೆ ಸೇರಿದಂತೆ ಜಾಗತಿಕ ಮತ್ತು ಪ್ರಾದೇಶಿಕ ಭದ್ರತೆ ಕುರಿತಾದ ವಿಷಯಗಳನ್ನು ಉಭಯ ದೇಶಗಳ ರಕ್ಷಣಾ ಸಚಿವರು ವಿನಿಮಯ ಮಾಡಿಕೊಂಡರು.

- ಈ ಹಿಂದೆ 2007 ಮತ್ತು 2008 ರಲ್ಲಿ ಇಂತಹ ದ್ವಿಪಕ್ಷೀಯ ಸಹಕಾರಕ್ಕೆ ಭಾರತ ಮತ್ತು ಸಿಂಗಾಪುರ ಸಹಿ ಹಾಕಿದ್ದವು. ಇತ್ತೀಚೆಗೆ ಸಹಿ ಹಾಕಿರುವ ಒಪ್ಪಂದದನ್ವಯ 2017 ರ ತನಕ ಸಿಂಗಾಪುರ ಸೇನೆ ಭಾರತದಲ್ಲಿ ತರಬೇತಿ ಮತ್ತು ಸಮರಭ್ಯಾಸ ಸೌಲಭ್ಯವನ್ನು ಬಳಸಿಕೊಳ್ಳಲಿದೆ.
- ಭಾರತದಿಂದ ಇಂತಹ ಸೌಲಭ್ಯವನ್ನು ಪಡೆಯುತ್ತಿರುವ ಏಕೈಕ ರಾಷ್ಟ್ರ ಸಿಂಗಾಪುರ.

**ತಾರಕಕ್ಕೇರಿದ ಈಜಿಪ್ಟ್ –ಈಥೋಪಿಯಾ ಅಣೆಕಟ್ಟು ವಿವಾದ**

ಜಗತ್ತಿನ ಅತ್ಯಂತ ಉದ್ದವಾದ ನದಿಯೆನಿಸಿರುವ ನೈಲ್ ನದಿಯ ಉಪನದಿಯ ಮೇಲೆ "ಈಥೋಪಿಯಾ" ರಾಷ್ಟ್ರ ಬೃಹತ್ ಗಾತ್ರದ ಅಣೆಕಟ್ಟನ್ನು ನಿರ್ಮಿಸುತ್ತಿರುವುದು ಈಜಿಪ್ಟ್ ಮತ್ತು ಈಥೋಪಿಯಾ ನಡುವೆ ಹೊಸ ವಿವಾದವನ್ನು ಸೃಷ್ಟಿಸಿದೆ. ನೈಲ್ ನದಿಯ ಮೇಲೆ ಈಥೋಪಿಯಾ ನಿರ್ಮಿಸುತ್ತಿರುವ ಅಣೆಕಟ್ಟಿನಿಂದ ಈಜಿಪ್ಟ್ ಗೆ ಹರಿಯುವ ನದಿ ನೀರಿನ ಪ್ರಮಾಣದಲ್ಲಿ ಇಳಿಕೆಯಾಗಲಿರುವುದು ವಿವಾದಕ್ಕೆ ಮುಖ್ಯ ಕಾರಣ.

ಏನಿದು ವಿವಾದ?

- ನೈಲ್ ನದಿಯನ್ನು ವಿಶ್ವದ ಅತ್ಯಂತ ಉದ್ದವಾದ ನದಿಯೆಂದು ಪರಿಗಣಿಸಲಾಗಿದೆ. ಲೇಕ್ ವಿಕ್ಟೋರಿಯಾದಲ್ಲಿ ಉಗಮವಾಗುವ ಈ ನದಿಯು 11 ರಾಷ್ಟ್ರಗಳಿಗೆ ಜೀವನಾಡಿಯಾಗಿದೆ. ತಾಂಜಾನಿಯಾ, ಉಗಾಂಡ, ರಾವಂಡ, ಬುರುಂಡಿ, ರಿಪಬ್ಲಿಕ್ ಆಫ್ ಕಾಂಗೋ, ಕೀನ್ಯಾ, ಈಥೋಪಿಯಾ, ದಕ್ಷಿಣ ಸೂಡಾನ್, ಸೂಡನ್ ಮತ್ತು ಈಜಿಪ್ಟ್ ರಾಷ್ಟ್ರಗಳು ಈ ನದಿಯ ನೀರನ್ನು ಬಳಸಿಕೊಂಡು ಬರುತ್ತಿವೆ.
- ನೈಲ್ ನದಿಯು "ವೈಟ್ ನೈಲ್ (White Nile)" ಮತ್ತು "ಬ್ಲೂ ನೈಲ್ (Blue Nile)" ಎಂಬ ಎರಡು ಪ್ರಮುಖ ಉಪನದಿಗಳನ್ನು ಹೊಂದಿದೆ. ವೈಟ್ ನೈಲ್ ನದಿಯು ಮಧ್ಯ ಆಫ್ರಿಕಾದ "ಗ್ರೇಟ್ ಲೇಕ್" ನಲ್ಲಿ ಹುಟ್ಟಿ ಉತ್ತರಾಭಿಮುಖವಾಗಿ ತಾಂಜಾನಿಯಾ, ಲೇಕ್ ವಿಕ್ಟೋರಿಯಾ, ಉಗಾಂಡ ಮತ್ತು ದಕ್ಷಿಣ ಸೂಡಾನ್ ರಾಷ್ಟ್ರಗಳ ಮೂಲಕ ಹರಿಯುತ್ತದೆ. ಬ್ಲೂ ನೈಲ್ ನದಿಯು ಅತ್ಯಂತ ಫಲವತ್ತತೆಯಿಂದ ಕೂಡಿದ್ದು, ಈಥೋಪಿಯಾದ "ಲೇಕ್ ತನ"ದಲ್ಲಿ ಹುಟ್ಟಿ ಸೂಡನ್ ಗೆ ಹರಿಯುತ್ತದೆ. ಈ ಎರಡೂ ನದಿಗಳು ಸೂಡಾನ್ ರಾಜಧಾನಿ "ಖಾರ್ಟೌಮ್(Khartoum)" ನಲ್ಲಿ ಸಂಧಿಸುತ್ತವೆ.
- ಹೀಗೆ ಅನೇಕ ರಾಷ್ಟ್ರಗಳ ಮೂಲಕ ಹರಿದು ಹೋಗುವ ಈ ನದಿಗೆ ನೀರಿನ ಬಳಕೆಗೆ ಸಂಬಂಧಿಸಿದಂತೆ ವಿವಾದಗಳು ಸರ್ವೇ ಸಾಮಾನ್ಯವಾಗಿದೆ. ಈಥೋಪಿಯಾ ರಾಷ್ಟ್ರ ಆಫ್ರಿಕಾದಲ್ಲೇ ಅತ್ಯಂತ ದೊಡ್ಡ ಅಣೆಕಟ್ಟು ಎನಿಸಿರುವ "ದಿ ಗ್ರಾಂಡ್ ಈಥೋಪಿಯನ್ ರೆನೈಸನ್ಸ್ ಅಣೆಕಟ್ಟು (The Grand Ethiopian Renaissance Dam)" ನ್ನು ಬ್ಲೂ ನೈಲ್ ನದಿ ಮೇಲೆ ನಿರ್ಮಿಸುತ್ತಿದೆ. 4.3 ಬಿಲಿಯನ್ ಡಾಲರ್ ಮೊತ್ತದ ಯೋಜನೆ ಇದಾಗಿದ್ದು, 6000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ. ಬ್ಲೂ ನೈಲ್ ನದಿಯು ನೈಲ್ ನದಿಯ ಪ್ರಮುಖ ಭಾಗವಾಗಿದ್ದು, ನೈಲ್ ನದಿಯ ಶೇ 60 ರಷ್ಟು ನೀರು ಬ್ಲೂ ನೈಲ್ ನದಿಯದಾಗಿದೆ. ಈಥೋಪಿಯಾ ನಿರ್ಮಿಸುತ್ತಿರುವ ದಿ ಗ್ರಾಂಡ್ ಅಣೆಕಟ್ಟು 74 ಬಿಲಿಯನ್ ಕ್ಯೂಬಿಕ್ ಮೀಟರ್ ನಷ್ಟು ನೀರು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ. ಈ ಅಣೆಕಟ್ಟು ಪೂರ್ತಿಯಾಗಿ ನಿರ್ಮಾಣಗೊಂಡರೆ ಈಜಿಪ್ಟ್ ಗೆ ಹರಿಯುವ ನೀರಿನ ಪ್ರಮಾಣ ಗಣನೀಯವಾಗಿ ಕಡಿಮೆಯಾಗಲಿದೆ. ಆದ್ದರಿಂದ ಈಥೋಪಿಯಾದ ಈ ಉದ್ದೇಶಿತ ಅಣೆಕಟ್ಟು ನಿರ್ಮಾಣಕ್ಕೆ ಈಜಿಪ್ಟ್ ಭಾರಿ ವಿರೋಧ ವ್ಯಕ್ತಪಡಿಸಿದೆ.

**ಹಿಂದೂ ಧಾರ್ಮಿಕ ಸ್ಥಳಗಳ ರಕ್ಷಣೆ ಕಾನೂನಿಗೆ ಬಾಂಗ್ಲಾ ಸಂಪುಟ ಒಪ್ಪಿಗೆ**

ಬಾಂಗ್ಲಾದೇಶದಲ್ಲಿನ ಹಿಂದೂ ಧಾರ್ಮಿಕ ಸ್ಥಳಗಳ ಅಭಿವೃದ್ದಿ ಮತ್ತು ಸಂರಕ್ಷಣೆಗಾಗಿ ರೂಪಿಸಲಾಗಿರುವ ಕಾನೂನಿನ ಕರಡು ಪ್ರತಿಗೆ ಬಾಂಗ್ಲಾ ಸಂಪುಟ ಒಪ್ಪಿಗೆ ಸೂಚಿಸಿದೆ. ಬಾಂಗ್ಲಾ ಸಂಪುಟದ ಈ ನಿರ್ಧಾರವನ್ನು ಅಲ್ಪಸಂಖ್ಯಾತ ಹಿಂದೂ ಸಮುದಾಯ ಸ್ವಾಗತಿಸಿದೆ.

ಹೊಸ ಕಾನೂನಿನಲ್ಲಿ ಏನಿದೆ?

- ಹೊಸ ಕಾನೂನಿ ಪ್ರಕಾರ ಸರ್ಕಾರ ಹಿಂದೂ ಕಾರ್ಮಿಕ ದತ್ತಿ ಅಥವಾ ದೇವೋತ್ತಾರ್ ಆಸ್ತಿಗಳನ್ನು ಪಟ್ಟಿ ಮಾಡಿ ಇವುಗಳ ಅಭಿವೃದ್ದಿ ಮತ್ತು ಸಂರಕ್ಷಣೆಗೆ ನಿರ್ವಹಣಾ ಮಂಡಳಿಯನ್ನು ರಚಿಸಲಿದೆ. ಹಿಂದೂ ಧರ್ಮ ಕಲ್ಯಾಣ ಟ್ರಸ್ಟ್ ನ ಉಪಾಧ್ಯಕ್ಷರನ್ನು ಈ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲಾಗುವುದು.
- ಹಿಂದೂ ಧಾರ್ಮಿಕ ಆಸ್ತಿಗಳ ದುರುಪಯೋಗ ಅಥವಾ ಅವ್ಯವಹಾರ ನಡೆದಿರುವುದು ಕಂಡುಬಂದರೆ ದಂಡ ಅಥವಾ ಜೈಲು ಶಿಕ್ಷೆಯನ್ನು ವಿಧಿಸಲು ಕಾನೂನಿನಲ್ಲಿ ಅವಕಾಶ ನೀಡಲಾಗಿದೆ.
- ದಶಕಗಳಿಂದ ಹಿಂದೂ ದೇವಸ್ಥಾನಕ್ಕೆ ಸೇರಿದ ಭೂಮಿ ಕಬಳಿಕೆಯನ್ನು ತಡೆಯಲು ಈ ಹೊಸ ಕಾನೂನು ಸಹಾಯವಾಗಲಿದೆ.

**ರಕ್ಷಣಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರಕ್ಕೆ ಭಾರತ-ಆಸ್ಟ್ರೇಲಿಯಾ ಒಪ್ಪಂದ**

ರಕ್ಷಣಾ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ನೀಡಲು ಭಾರತ ಮತ್ತು ಆಸ್ಟ್ರೇಲಿಯಾ ಮಹತ್ವದ ಒಪ್ಪಂದಕ್ಕೆ ಕೈಜೋಡಿಸಿವೆ. ಆಸ್ಟ್ರೇಲಿಯಾಕ್ಕೆ ಭೇಟಿ ನೀಡಿರುವ ಭಾರತದ ರಕ್ಷಣಾ ಸಚಿವ ಎ.ಕೆ. ಆಂಟೋನಿ ರವರು ಆಸ್ಟ್ರೇಲಿಯಾದ ರಕ್ಷಣಾ ಸಚಿವ ಸ್ಟೀಫನ್ ಸ್ಮಿತ್ ರವರ ಜೊತೆ ನಡೆಸಿದ ಮಾತುಕತೆಯ ನಂತರ ಈ ನಿರ್ಧಾರ ಕೈಗೊಂಡಿದ್ದಾರೆ.

- ಒಪ್ಪಂದದ ಅನ್ವಯ ಭಾರತ ಮತ್ತು ಆಸ್ಟ್ರೇಲಿಯಾ 2015 ರಲ್ಲಿ ಜಂಟಿಯಾಗಿ ನೌಕ ಸಮರಾಭ್ಯಾಸ ನಡೆಸಲಿವೆ. ಹಾಗೂ 2014 ರಲ್ಲಿ ಸಿಡ್ನಿಯಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಯುದ್ಧನೌಕೆಗಳ ವಿಮರ್ಶೆಗೆ ಭಾರತ ಸಹ ಯುದ್ಧನೌಕೆಗಳನ್ನು ಕಳುಹಿಸಿಕೊಡಲಿದೆ.
- ಉಭಯ ದೇಶಗಳ ನಡುವೆ ಅಂತರರಾಷ್ಟ್ರೀಯ ಮತ್ತು ಪ್ರಾಂತೀಯ ಸುರಕ್ಷತೆ, ರಕ್ಷಣಾ ಕ್ಷೇತ್ರದಲ್ಲಿ ಬಾಂಧವ್ಯ ಮತ್ತು ಏಷ್ಯಾ-ಫೆಸಿಫಿಕ್ ಹಾಗೂ ಹಿಂದೂ ಮಹಾಸಾಗರ ವಲಯದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಈ ಒಪ್ಪಂದ ಸಹಕಾರಿಯಾಗಲಿದೆ.

**ಇರಾನ್ ತೈಲ ನಿರ್ಬಂಧ: ಭಾರತಕ್ಕೆ ವಿನಾಯತಿ ನೀಡಿದ ಅಮೆರಿಕಾ**

ಇರಾನ್ ನಿಂದ ತೈಲ ಆಮದಿನ ಮೇಲೆ ಭಾರತ ಮತ್ತು ಇತರೆ ಎಂಟು ರಾಷ್ಟ್ರಗಳ ಮೇಲೆ ವಿಧಿಸಿರುವ ನಿರ್ಬಂಧಗಳಿಗೆ ಅಮೆರಿಕಾ ವಿನಾಯಿತಿ ನೀಡಿದೆ. ಈ ದೇಶಗಳು ಇರಾನಿಯನ್ ತೈಲದ ಮೇಲೆ ತಮ್ಮ ಅವಲಂಭನೆಯನ್ನು ಗಣನೀಯವಾಗಿ ತಗ್ಗಿಸಿರುವ ಹಿನ್ನಲೆಯಲ್ಲಿ ಅಮೆರಿಕಾ ಈ ನಿರ್ಣಯವನ್ನು ತಳೆದಿದೆ ಎಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಜಾನ್ ಕೆರ್ರಿ ಹೇಳಿದ್ದಾರೆ.

**ಯಾವ ರಾಷ್ಟ್ರಗಳು?**

- ಭಾರತ ಅಲ್ಲದೇ ಚೀನಾ, ಮಲೇಷಿಯಾ, ರಿಪಬ್ಲಿಕ್ ಆಫ್ ಕೊರಿಯಾ, ಸಿಂಗಾಪುರ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಟರ್ಕಿ ಮತ್ತು ತೈವಾನ್ ದೇಶಗಳು ಅಮೆರಿಕಾ ಆರ್ಥಿಕ ನಿರ್ಬಂಧಗಳಿಂದ ವಿನಾಯತಿ ಪಡೆಯಲು ಯಶಸ್ವಿಯಾಗಿವೆ.
- ಮಾರ್ಚ್ 31 ರ ಅಂತ್ಯಕ್ಕೆ ಕೊನೆಗೊಂಡ ಆರ್ಥಿಕ ಸಾಲಿನಲ್ಲಿ ಭಾರತ ಇರಾನ್ ನಿಂದ ಆಮದು ಮಾಡಿಕೊಂಡ ಕಚ್ಚಾತೈಲದ ಪ್ರಮಾಣದಲ್ಲಿ ಶೇ 26.5 ರಷ್ಟು ಕಡಿಮೆಯಾಗಿದೆ. 2012-13 ನೇ ಸಾಲಿನಲ್ಲಿ ಭಾರತ ಇರಾನ್ ನಿಂದ 13.3 ದಶಲಕ್ಷ ಟನ್ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿದೆ. ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಇದು 18.1 ದಶಲಕ್ಷ ಟನ್ ಗಳಷ್ಟು ಕಡಿಮೆ ಎಂದು ಅಮೆರಿಕಾ ತಿಳಿಸಿದೆ.

**ಹಿನ್ನಲೆ**:

- ಅಮೆರಿಕಾ ಸೇರಿದಂತೆ ವಿಶ್ವದ ಪ್ರಮುಖ ರಾಷ್ಟ್ರಗಳು ಇರಾನ್ ಪರಮಾಣು ಕಾರ್ಯಕ್ರಮವನ್ನು ವಿರೋಧಿಸುತ್ತಲೇ ಬಂದಿವೆ. ಇರಾನ್ ಪರಮಾಣು ಕಾರ್ಯಕ್ರಮವನ್ನು ನಿಲ್ಲಿಸುವಂತೆ ಒತ್ತಾಯಿಸಿ ಅಮೆರಿಕಾ ಅನೇಕ ನಿರ್ಬಂಧಗಳನ್ನು ಹೇರಿದೆ. ಆದರೆ ಅಮೆರಿಕಾದ ಹೇಳಿಕೆಯನ್ನು ನಿರಾಕರಿಸಿರುವ ಇರಾನ್ ತಾನು ಶಾಂತಿ ಉದ್ದೇಶದಿಂದ ಪರಮಾಣು ಕಾರ್ಯಕ್ರಮವನ್ನು ನಡೆಸುತ್ತಿರುವುದಾಗಿ ಹೇಳಿಕೊಂಡು ಪರಮಾಣು ಕಾರ್ಯಕ್ರಮವನ್ನು ಮುಂದುವರೆಸಿದೆ. ಇತ್ತೀಚೆಗೆ ಅಮೆರಿಕಾ ಇರಾನ್ ಮೇಲೆ ಆರ್ಥಿಕ ದಿಗ್ಬಂಧನವನ್ನು ಹೇರಿದೆ.

**ಕ್ಯಾಲಿಫೋರ್ನಿಯಾದಲ್ಲಿ ಅಮೆರಿಕಾ-ಚೀನಾ ಎರಡು ದಿನಗಳ ಶೃಂಗಸಭೆ**

ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿ ಅಮೆರಿಕಾ-ಚೀನಾ ನಡುವಿನ ಎರಡು ದಿನಗಳ ಶೃಂಗಸಭೆಯನ್ನು ಆಯೋಜಿಸಲಾಗಿತ್ತು. ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ ಮತ್ತು ಚೇನಾದ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ರವರು ಈ ಶೃಂಗಸಭೆಯಲ್ಲಿ ದೀರ್ಘಕಾಲದ ವರೆಗೆ ಚರ್ಚಿಸಿದರು. ಉಭಯ ದೇಶಗಳ ನಡುವಿನ ಸಂಬಂಧವನ್ನು ಹೊಸ ಹಾದಿಯಲ್ಲಿ ಮುನ್ನಡೆಸುವ ಇಂಗಿತವನ್ನು ವ್ಯಕ್ತಪಡಿಸಿದರು. ಚರ್ಚಿಸಲಾದ ಇತರೆ ವಿಷಯಗಳು

- **ಹವಾಮಾನ ಬದಲಾವಣೆ**: ಹವಾಮಾನ ವೈಪರಿತ್ಯ ಮತ್ತು ಅದಕ್ಕೆ ಸೂಕ್ತ ಕಡಿವಾಣ ಹಾಕುವ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು. ಎರಡೂ ದೇಶಗಳು "ಹೈಡ್ರೋಫ್ಲೊರೊಕಾರ್ಬನ್ಸ್ (HFC)" ಉತ್ಪಾದನೆ ಮತ್ತು ಬಳಕೆಯನ್ನು ಹಂತ ಹಂತವಾಗಿ ಕಡಿಮೆಗೊಳಿಸಿ ಹವಾಮಾನ ವೈಪರಿತ್ಯವನ್ನು ನಿಯಂತ್ರಿಸುವತ್ತ ದೃಷ್ಟಿ ಹರಿಸಲು ತೀರ್ಮಾನಿವೆ.

- **ಸೈಬರ್ ಭದ್ರತೆ**: ಅಮೆರಿಕಾ ಮತ್ತು ಚೀನಾ ಎರಡಕ್ಕೂ ಪ್ರಮುಖ ಸವಾಲೆನಿಸಿರುವ ಸೈಬರ್ ಭದ್ರತೆ ಬಗ್ಗೆ ಆಳವಾಗಿ ಸಮಾಲೋಚಿಸಲಾಯಿತು. ಹ್ಯಾಕಿಂಗ್, ಸೈಬರ್ ಕನ್ನ ವಿಷಯದ ಬಗ್ಗೆ ಕಳವಳ ವ್ಯಕ್ತಪಡಿಸಿದರು.
- ಉತ್ತರ ಕೊರಿಯಾ ಪರಮಾಣು ಯೋಜನೆ, ಅಣ್ವಸ್ತ್ರ ನಿಶ್ಯಸ್ತ್ರೀಕರಣದ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು.

**ಅಪೌಷ್ಠಿಕತೆ ಹೋಗಲಾಡಿಸುವ ಒಪ್ಪಂದಕ್ಕೆ ವಿಶ್ವದ ಪ್ರಮುಖ ರಾಷ್ಟ್ರಗಳು ಸಹಿ**

ಜಗತ್ತಿನಾದ್ಯಂತ ವಿವಿಧ ರಾಷ್ಟ್ರಗಳಲ್ಲಿನ ಮಕ್ಕಳನ್ನು ಕಾಡುತ್ತಿರುವ ಅಪೌಷ್ಠಿಕತೆಯನ್ನು ಹೋಗಲಾಡಿಸುವ "ಗ್ಲೋಬಲ್ ನ್ಯೂಟ್ರಿಷನ್ ಫಾರ್ ಗ್ರೋತ್ ಕಂಪಕ್ಟ್ (Global Nutrition for Growth Compact)" ಎಂಬ ಒಪ್ಪಂದಕ್ಕೆ ವಿಶ್ವದ ಪ್ರಮುಖ ರಾಷ್ಟ್ರಗಳು ಸಹಿ ಹಾಕಿದವು. ಲಂಡನ್ ನಲ್ಲಿ ಇತ್ತೀಚೆಗೆ ನಡೆದ ಪೋಷಕಾಂಶಗಳ ಕುರಿತಾದ ಸಮ್ಮೇಳನದಲ್ಲಿ ಈ ಬಹು ನಿರೀಕ್ಷಿತ ಒಪ್ಪಂದಕ್ಕೆ ಅನುಮೋದನೆ ನೀಡಲಾಯಿತು.

- ಮಕ್ಕಳಲ್ಲಿ ಅಪೌಷ್ಠಿಕತೆ ಎಂಬ ಪಿಡುಗನ್ನು ಹೋಗಲಾಡಿಸಿ, ಮಕ್ಕಳ ಸಾವಿನ ಸಂಖ್ಯೆಯನ್ನು ಕಡಿಮೆಗೊಳಿಸುವುದು ಈ ಒಪ್ಪಂದದ ಮುಖ್ಯ ಉದ್ದೇಶ. ಇದಕ್ಕಾಗಿ 4.15 ಬಿಲಿಯನ್ ಡಾಲರ್ ಮೊತ್ತದ ನಿಧಿಯನ್ನು ಸ್ಥಾಪಿಸಲು ವಿಶ್ವದ ಪ್ರಮುಖ ನಾಯಕರು ಮುಂದಾಗಿದ್ದು, 2020 ರ ವೇಳೆಗೆ ಅಪೌಷ್ಠಿಕತೆಯನ್ನು ತೊಳೆದು ಹಾಕುವ ನಿರ್ಣಯ ಕೈಗೊಳ್ಳಲಾಯಿತು. ಬ್ರಿಟನ್ 375 ಮಿಲಿಯನ್ ಡಾಲರ್ ಅನ್ನು 2013 ರಿಂದ 2020 ರ ಅವಧಿಗೆ ಹೆಚ್ಚುವರಿಯಾಗಿ ನೀಡಲು ಒಪ್ಪಿಗೆ ಸೂಚಿಸಿದೆ.
- ಬ್ರೆಜಿಲ್, ಯು.ಕೆ ಮತ್ತು "ಚಿಲ್ಡ್ರನ್ಸ್ ಇನ್ ವೆಸ್ಟ್ ಮೆಂಟ್ ಫಂಡ್ ಫೌಂಡೇಶನ್" ವತಿಯಿಂದ ಆಯೋಜಿಸಲಾಗಿದ್ದ ಈ ಸಮ್ಮೇಳನದಲ್ಲಿ ಬಿಲ್ ಗೇಟ್ಸ್, ವಿಶ್ವಸಂಸ್ಥೆಯ ಮಾಜಿ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನಾನ್ ಸೇರಿದಂತೆ 60 ರಾಷ್ಟ್ರಗಳ ಪ್ರಮುಖ ನಾಯಕರು ಭಾಗವಹಿಸಿದ್ದರು.

**ಒಪ್ಪಂದ ಪ್ರಮುಖ ಉದ್ದೇಶಗಳು**:

- ಸುಮಾರು 500 ಮಿಲಿಯನ್ ಗರ್ಭಿಣಿಯರು ಮತ್ತು ಮಕ್ಕಳಲ್ಲಿ ಪೌಷ್ಠಿಕತೆಯ ಮಟ್ಟವನ್ನು ಸುಧಾರಿಸುವುದು.
- ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಕುಂಠಿತ ಬೆಳವಣಿಗೆಯನ್ನು ತಡೆಯುವುದು.
- ಸ್ತನಪಾನ ಉತ್ತೇಜನ ಹಾಗೂ ಉತ್ತಮ ಪೋಷಕಾಂಶಗಳ ಪೂರೈಕೆ ಮೂಲಕ ಮಕ್ಕಳ ಅಕಾಲಿಕ ಮರಣ ಪ್ರಮಾಣವನ್ನು ತಗ್ಗಿಸುವುದು.

**ನಿಧಿ ಬಳಕೆ**:

- ಉನ್ನತ ಗುಣಮಟ್ಟದ ರಾಷ್ಟ್ರೀಯ ಪೌಷ್ಟಿಕಾಂಶ ಯೋಜನೆಗಳನ್ನು ರೂಪಿಸಲು ಅಭಿವೃದ್ಧಿ ಶೀಲ ರಾಷ್ಟ್ರಗಳನ್ನು ಬೆಂಬಲಿಸಲು.
- ರೈತರು ಪೌಷ್ಟಿಕಾಂಶ ಭರಿತ ಬೆಳೆಗಳನ್ನು ಬೆಳೆಯಲು ವಿಶ್ವದರ್ಜೆಯ ತಂತ್ರಜ್ಞಾನ ಅಭಿವೃದ್ದಿಪಡಿಸಲು.
- ತಾಯಂದಿರು ಮಕ್ಕಳಿಗೆ ಎದೆಹಾಲು ಉಣಿಸುವುದನ್ನು ಉತ್ತೇಜಿಸಲು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**ದುಬೈನಲ್ಲಿ ವಿಶ್ವದ ಅತಿ ಎತ್ತರದ "ತಿರುಚಿದ ಕಟ್ಟಡ (Twisted Tower)" ಉದ್ಘಾಟನೆ**

ವಿಶ್ವದ ಅತಿ ಎತ್ತರದ ತಿರುಚಿದ ಕಟ್ಟಡವನ್ನು ದುಬೈನಲ್ಲಿ ಇತ್ತೀಚೆಗೆ ಉದ್ಘಾಟಿಸಲಾಯಿತು. 75 ಮಹಡಿಯ ವಸತಿ ಸಮುಚ್ಛಯವನ್ನು ಕಯಾನ್ ರಿಯಲ್ ಎಸ್ಟೇಟ್ ಇನ್ವೆಸ್ಟ್ ಮೆಂಟ್ ಕಂಪನಿ ನಿರ್ಮಿಸಿದೆ.

ಕಟ್ಟಡದ ವಿಶೇಷತೆಗಳು:

- ಈ ಕಟ್ಟಡವನ್ನು 90 ಡಿಗ್ರಿಯಷ್ಟು ತಿರುಚಿದ ರೀತಿಯಲ್ಲಿ ನಿರ್ಮಿಸಲಾಗಿದೆ. ಕಟ್ಟಡದ ಒಟ್ಟು ಉದ್ದ 310 ಮೀಟರ್ (1,017 ಅಡಿಗಳು). ಸುಮಾರು 272 ಮಿಲಿಯನ್ ಡಾಲರ್ ವೆಚ್ಚದಲ್ಲಿ ಈ ಕಟ್ಟಡವನ್ನು ನಿರ್ಮಿಸಲಾಗಿದೆ.

- ಕಟ್ಟಡ ನಿರ್ಮಾಣದ ಕಾಮಗಾರಿಯನ್ನು 2006 ರಲ್ಲಿ ಆರಂಭಿಸಲಾಯಿತಾದರೂ ಆರ್ಥಿಕ ಹಿಂಜರಿಕೆಯ ಕಾರಣ ನಿರ್ಮಾಣದ ಕೆಲಸ ಕುಂಠಿತಗೊಂಡಿತ್ತು.
- ವಿಶ್ವದ ಅತಿ ಎತ್ತರದ ಗೋಪುರವೆನಿಸಿರುವ "ಬುರ್ಜ್ ಖಲೀಫಾ" ನಿರ್ಮಾಣದ ಹೊಣೆಹೊತ್ತಿದ್ದ ಚಿಕಾಗೋ ಮೂಲದ "ಸ್ಕಿಡ್ಮೊರ್ ಒವಿಂಗ್ ಅಂಡ್ ಮೆರಿನ್" ಈ ಕಟ್ಟಡವನ್ನು ವಿನ್ಯಾಸಗೊಳಿಸಿದೆ.
- ಜನವರಿ 2010 ರಲ್ಲಿ ನಿರ್ಮಿಸಲಾದ "ಬುರ್ಜ್ ಖಲೀಫಾ" ವಿಶ್ವದ ಅತ್ಯಂತ ಎತ್ತರದ ಗೋಪುರ. ಇದರ ಎತ್ತರ 828 ಮೀಟರ್ (2,717 ಅಡಿಗಳು). ಇದು ಸಹ ದುಬೈನಲ್ಲಿದೆ.
- ಮೇ 2012 ರಲ್ಲಿ ಉದ್ಘಾಟನೆಗೊಂಡ ಪ್ರಿನ್ಸೆಸ್ ಟವರ್ ವಿಶ್ವದ ಅತಿ ಎತ್ತರದ ವಸತಿ ಸಮುಚ್ಚಯ. ಇದು ಸಹ ದುಬೈನಲ್ಲಿದೆ. ಇದರ ಎತ್ತರ 413.4 ಮೀಟರ್ ಅಥವಾ 1,356 ಅಡಿ.
- ಇನ್ನು 2012 ರಲ್ಲಿ ಉದ್ಘಾಟಿಸಲಾದ ಟ್ವಿನ್ ಟವರ್ JW "ಮ್ಯಾರಿಯಾಟ್ ಮರ್ಕಿಸ್ ದುಬೈ (Marriot Marquis Dubai)" ವಿಶ್ವದ ಅತ್ಯಂತ ಎತ್ತರದ ಹೋಟೆಲ್. ಇದು 355 (1,655) ಮೀಟರ್ ಎತ್ತರವಿದೆ.

**"ಕತಾರ್" ಅತಿ ಹೆಚ್ಚು ಮಿಲಿಯನೇರ್ ಗಳನ್ನು ಹೊಂದಿರುವ ರಾಷ್ಟ್ರ**

ಬೊಸ್ಟನ್ ಕನ್ಸಲ್ಟಿಂಗ್ ಗ್ರೂಪ್ (BCG) ಬಿಡುಗಡೆಗೊಳಿಸಿರುವ 13 ನೇ "ವಾರ್ಷಿಕ ಜಾಗತಿಕ ಸಂಪತ್ತು ನಿರ್ವಹಣೆ (Annual Global Wealth Management)" ವರದಿ ಪ್ರಕಾರ ಕತಾರ್ (Qatar) ವಿಶ್ವದಲ್ಲೇ ಅತಿ ಹೆಚ್ಚು ಮಿಲಿಯನೇರ್ ಗಳನ್ನು ಹೊಂದಿರುವ ರಾಷ್ಟ್ರ ಎಂಬ ಖ್ಯಾತಿಗೆ ಪಾತ್ರವಾಗಿದೆ. ತೈಲ ಸಮೃದ್ಧ ರಾಷ್ಟ್ರ ಕತಾರ್ ನ ಶೇ 14.3 ರಷ್ಟು ಜನಸಂಖ್ಯೆ ಕನಿಷ್ಟ 1 ಮಿಲಿಯನ್ ಅಮೆರಿಕನ್ ಡಾಲರ್ ನಷ್ಟು ಖಾಸಗಿ ಸಂಪತ್ತನ್ನು ಹೊಂದಿದ್ದಾರೆ.

- ಕತಾರ್ ನ ಪ್ರತಿ 1000 ಕುಟುಂಬಗಳಲ್ಲಿ 143 ಕುಟುಂಬಗಳು ಕನಿಷ್ಠ 1 ಮಿಲಿಯನ್ ಡಾಲರ್ ಸಂಪತ್ತನ್ನು ಹೊಂದಿವೆ. ಇದು ಜಾಗತಿಕ ಸರಾಸರಿಗಿಂತಲೂ ಹೆಚ್ಚಾಗಿದೆ. ಜಾಗತಿಕ ಮಟ್ಟದಲ್ಲಿ ಕೇವಲ ಶೇ 0.9 ರಷ್ಟು ಕುಟುಂಬಗಳು ಮಾತ್ರ 1 ಮಿಲಿಯನ್ ಡಾಲರ್ ಸಂಪತ್ತನ್ನು ಹೊಂದಿವೆ.
- "ಕುವೈತ್" ಈ ಪಟ್ಟಿಯ ಟಾಪ್ ಐದರಲ್ಲಿ ಸ್ಥಾನ ಪಡೆದಿರುವ ಮತ್ತೊಂದು ಕೊಲ್ಲಿ ರಾಷ್ಟ್ರ. 3 ನೇ ಸ್ಥಾನದಲ್ಲಿರುವ ಕುವೈತ್ ನಲ್ಲಿ ಶೇ 11.5 ರಷ್ಟು ಜನರು 1 ಮಿಲಿಯನ್ ಡಾಲರ್ ಸಂಪತ್ತು ಹೊಂದಿದ್ದಾರೆ. ಉಳಿದಂತೆ ಬಹ್ರೇನ್ (ಶೇ 4.9) ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (ಶೇ.4.0) ಕ್ರಮವಾಗಿ 6 ಮತ್ತು 8 ನೇ ಸ್ಥಾನದಲ್ಲಿವೆ.
- ಕತಾರ್ ನ 100,000 ಕುಟುಂಬಗಳಲ್ಲಿ ಪ್ರತಿ 8 ಕುಟುಂಬಗಳು (Ultra High Net Worth) ಹೊಂದುವ ಮೂಲಕ ಕತಾರ್ ವಿಶ್ವದಲ್ಲೇ ನಾಲ್ಕನೇ ಸ್ಥಾನದಲ್ಲಿದೆ.
- ಕತಾರ್ ಜಗತ್ತಿನಲ್ಲೇ ಅತಿ ಹೆಚ್ಚು ನೈಸರ್ಗಿಕ ಅನಿಲ ಸಂಪತ್ತನ್ನು ಹೊಂದಿರುವ ಮೂರನೇ ರಾಷ್ಟ್ರ. ಜತೆಗೆ ಅತಿ ಹೆಚ್ಚು "ಜಿಡಿಪಿ"ಯನ್ನು ಹೊಂದಿರುವ ಏಷ್ಯಾದ ಮೊದಲ ಮತ್ತು ವಿಶ್ವದ ನಾಲ್ಕನೇ ದೇಶ.

**ಇಸ್ತಾಂಬುಲ್ ಸಮ್ಮೇಳನ ಅಂಗೀಕರಿಸಿದ ಇಟಲಿ**

ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಗುರಿಹೊಂದಿರುವ "ಇಸ್ತಾಂಬುಲ್ ಒಪ್ಪಂದವನ್ನು" ಇಟಲಿ ಇತ್ತೀಚೆಗೆ ಅಂಗೀಕರಿಸಿದೆ. ಇಟಲಿ ಈ ಒಪ್ಪಂದವನ್ನು ಅಂಗೀಕರಿಸಿದ ಐದನೇ ದೇಶ.

ಇಸ್ತಾಂಬುಲ್ ಸಮ್ಮೇಳನ:

- ಮಹಿಳೆಯರ ಮೇಲಿನ ಕುಟುಂಬ ದೌರ್ಜನ್ಯ ಮತ್ತು ಹಿಂಸಾತ್ಮಕ ಕೃತ್ಯಗಳನ್ನು ತಡೆಗಟ್ಟುವ ಸಲುವಾಗಿ "ದಿ ಕೌನ್ಸಿಲ್ ಆಫ್ ಯುರೋಪಿಯನ್ ಕನ್ ವೆನ್ಶನ್ ಅಥವಾ ಇಸ್ತಾಂಬುಲ್ ಕನ್ವೆನ್ಷನ್" ಅನ್ನು ಮೇ 11, 2011 ರಲ್ಲಿ ಟರ್ಕಿಯ ಇಸ್ತಾಂಬುಲ್ ನಲ್ಲಿ ಸಹಿ ಹಾಕಲು ಮುಕ್ತಗೊಳಿಸಲಾಯಿತು.
- ಈ ಒಪ್ಪಂದಕ್ಕೆ ಇದುವರೆಗೂ 29 ದೇಶಗಳು ಸಹಿ ಹಾಕಿವೆ. ಮಾರ್ಚ್ 2012 ರಲ್ಲಿ ಟರ್ಕಿ ಈ ಒಪ್ಪಂದವನ್ನು ಅಂಗೀಕರಿಸಿದ ಮೊದಲ ದೇಶವೆನಿಸಿತು.
- ತದನಂತರ ಅಲ್ಬೇನಿಯಾ, ಮಾಂಟೆನಿಗ್ರೊ ಮತ್ತು ಪೋರ್ಚುಗಲ್ ರಾಷ್ಟ್ರಗಳು 2013 ರಲ್ಲಿ ಇದನ್ನು ಅಂಗೀಕರಿಸಿದವು. ಈ ಒಪ್ಪಂದ ಜಾರಿಗೊಳ್ಳಬೇಕಾದರೆ ಒಟ್ಟು 10 ರಾಷ್ಟ್ರಗಳು ಇದನ್ನು ಅಂಗೀಕರಿಸಬೇಕು.
- ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕಾನೂನು ಚೌಕಟ್ಟು ರೂಪಿಸುವ ವಿಶ್ವದ ಮೊದಲ ಕಾನೂನು ಬದ್ಧ ಒಪ್ಪಂದ ಇದಾಗಿದೆ.

**"ನಾರ್ತನ್ ಐರ್ಲೆಂಡ್" ನಲ್ಲಿ 39 ನೇ ಜಿ-8 ರಾಷ್ಟ್ರಗಳ ಶೃಂಗಸಭೆ: ಒಂದು ಪಕ್ಷಿ ನೋಟ**

ಜಗತ್ತಿನ ಎಂಟು ಬಲಿಷ್ಠ ರಾಷ್ಟ್ರಗಳ ಅಥವಾ ಜಿ-8 ರಾಷ್ಟ್ರಗಳ 39 ನೇ ಶೃಂಗಸಭೆ ಜೂನ್ 17 ಮತ್ತು 18, 2013 ರಂದು ಎರಡು ದಿನಗಳ ಲಾಫ್ ಎರ್ನೆ (Lough Erne), ನಾರ್ತನ್ ಐರ್ಲೆಂಡ್, ಯುನೈಟೆಡ್ ಕಿಂಗ್ ಡಮ್ ನಲ್ಲಿ ಯಶಸ್ವಿಯಾಗಿ ನೆರವೇರಿತು. ಎರಡು ದಿನಗಳ ಕಾಲ ನಡೆದ ಈ ಶೃಂಗಸಭೆಯ ಅಧ್ಯಕ್ಷತೆಯನ್ನು ಬ್ರಿಟನ್ ಪ್ರಧಾನಿ ಡೆವಿಡ್ ಕೆಮರೂನ್ ಅವರು ವಹಿಸಿಕೊಂಡಿದ್ದರು. ಜನವರಿ 2013 ರಲ್ಲಿ ಜಿ-8 ರಾಷ್ಟ್ರಗಳ ಅಧ್ಯಕ್ಷತೆಯನ್ನು ಬ್ರಿಟನ್ ವಹಿಸಿಕೊಂಡ ಕಾರಣ ಕೆಮರೂನ್ 39 ನೇ ಶೃಂಗಸಭೆಯ ಅಧ್ಯಕ್ಷರಾಗಿದ್ದರು. ಈ ಶೃಂಗ ಸಭೆಯಲ್ಲಿ ಚರ್ಚಿಸಲಾದ ಕೆಲವು ಪ್ರಮುಖ ಅಂಶಗಳು ಇಲ್ಲಿವೆ.

- ಜಿ-8 ರಾಷ್ಟ್ರಗಳಾದ ಕೆನಡಾ, ಫ್ರಾನ್ಸ್, ರಷ್ಯಾ, ಜರ್ಮನಿ, ಜಪಾನ್, ಇಟಲಿ, ಅಮೆರಿಕಾ ಮತ್ತು ಯುನೈಟೆಡ್ ಕಿಂಗ್ ಡಮ್ ನ ನಾಯಕರು ಈ ಎರಡು ದಿನದ ಶೃಂಗಸಭೆಯಲ್ಲಿ ಮುಖಾಮುಖಿಯಾದರು. ಯುರೋಪಿಯನ್ ಕಮೀಷನ್ ನ ಅಧ್ಯಕ್ಷರಾದ ಜೊಸ್ ಮನ್ಯೂಲ್ ಬರ್ರೊಸ್ ಮತ್ತು ಯುರೋಪಿಯನ್ ಕೌನ್ಸಿಲ್ ನ ಅಧ್ಯಕ್ಷರಾದ ಹರ್ಮನ್ ವಾನ್ ರೊಂಪು ಸಹ ಭಾಗವಹಿಸಿದ್ದರು. ಯುರೋಪಿಯನ್ ಒಕ್ಕೂಟ 1977 ರಲ್ಲಿ ಜಿ-8 ಗುಂಪಿಗೆ ಸೇರ್ಪಡೆಗೊಂಡಿದೆಯಾದರೂ ಶೃಂಗಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿಲ್ಲ.
- ತೆರಿಗೆ, ವ್ಯಾಪಾರ ಮತ್ತು ಪಾರದರ್ಶಕತೆ (Tax, Trade and Transparency (3 T's)) ಸಭೆಯಲ್ಲಿ ಚರ್ಚೆಗೊಂಡ ಪ್ರಮುಖ ಅಜೆಂಡವಾಗಿತ್ತು. **ವ್ಯಾಪಾರ ಒಪ್ಪಂದ**: ಜಾಗತಿಕ ಮತ್ತು ಮುಕ್ತ ವ್ಯಾಪಾರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಈ ಶೃಂಗಸಭೆಯಲ್ಲಿ ಆಳವಾಗಿ ಚರ್ಚಿಸಲಾಯಿತು. ಸದಸ್ಯ ರಾಷ್ಟ್ರಗಳ ನಡುವೆ ವ್ಯಾಪಾರ ಸಹಕಾರವನ್ನು ವೃದ್ಧಿಸುವ ಸಲುವಾಗಿಯೂ ದೀರ್ಘವಾಗಿ ಚರ್ಚಿಸಲಾಯಿತು.
- **ಸಿರಿಯಾ ಸಂಘರ್ಷಣೆಗೆ ಅಂತ್ಯ**:ಸಿರಿಯಾದಲ್ಲಿ ನಡೆಯುತ್ತಿರುವ ರಕ್ತಪಾತಕ್ಕೆ ಕೊನೆ ಕಾಣಿಸುವ ಸಲುವಾಗಿ ಜಿ-8 ರಾಷ್ಟ್ರಗಳು ಬಲವಾಗಿ ಚರ್ಚಿಸಿದವು. ಈ ಸಂಬಂಧ ಏಳು ಅಂಶಗಳ ಕಾರ್ಯಕ್ರಮವನ್ನು ರೂಪಿಸಲಾಯಿತು. ರಾಸಾಯನಿಕ ಶಸ್ತ್ರಾಸ್ತ್ರಗಳ ಬಳಕೆಯನ್ನು ತಡೆಯುವುದು, ಮಾನವೀಯ ನೆರವು ಹೆಚ್ಚಳ ಸೇರಿದಂತೆ ಪ್ರಮುಖವಾದ ಏಳು ಅಂಶಗಳನ್ನು ಈ ಕಾರ್ಯಕ್ರಮ ಒಳಗೊಂಡಿದೆ.

**ಜಿ-8 ರಾಷ್ಟ್ರಗಳು:**

- ವಿಶ್ವದ ಆರು ಪ್ರಮುಖ ಕೈಗಾರಿಕ ರಾಷ್ಟ್ರಗಳಾದ ಫ್ರಾನ್ಸ್, ಅಮೆರಿಕಾ, ಬ್ರಿಟನ್, ಜರ್ಮನಿ, ಜಪಾನ್ ಮತ್ತು ಇಟಲಿ 1975 ರಲ್ಲಿ ಸ್ಥಳೀಯ ಮತ್ತು ಜಾಗತಿಕ ಮಟ್ಟದಲ್ಲಿ ಆರ್ಥಿಕ ಮತ್ತು ರಾಜಕೀಯ ವಿಷಯಗಳ ಬಗ್ಗೆ ರೂಪಗೊಂಡ ಒಕ್ಕೂಟವೇ ಜಿ-8.
- 1976 ರಲ್ಲಿ ಕೆನಡಾ ಇದರ ಸದಸ್ಯತ್ವವನ್ನು ಪಡೆದುಕೊಂಡಿತು. ನಂತರ 1977 ರಲ್ಲಿ ಯುರೋಪಿಯನ್ ಒಕ್ಕೂಟ ಈ ಗುಂಪಿಗೆ ಸೇರ್ಪಡೆಯಾಯಿತು.
- 1998 ರ ಬಿರ್ಮಿಂಗ್ ಹ್ಯಾಮ್ ಶೃಂಗಸಭೆಯಲ್ಲಿ ರಷ್ಯಾ ಈ ಒಕ್ಕೂಟವನ್ನು ಸೇರ್ಪಡೆ ಹೊಂದುವ ಮೂಲಕ ಜಿ-8 ಆಗಿ ಪರಿವರ್ತನೆಯಾಯಿತು.

ಕರುನಾಡು ಎಗ್ಸಾಮ್ಸ್

## ವಿಜ್ಞಾನ-ತಂತ್ರಜ್ಞಾನ

**ಭೂಮಿಯ ಸಮೀಪ ಹಾದು ಹೋದ "1998 ಕ್ಯು ಇ2" ಕ್ಷುದ್ರಗ್ರಹ**

ಬೃಹತ್ ಆಕಾರದ ಕ್ಷುದ್ರಗ್ರಹವೊಂದು ಮೇ 31 ರಂದು ಭೂಮಿಯ ಸಮೀಪ ಹಾದು ಹೋಗಿದ್ದು, ಭಾರಿ ಅನಾಹುತವೊಂದು ತಪ್ಪಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಸುಮಾರು 1.7 ಮೈಲಿ ಗಾತ್ರ ಹೊಂದಿರುವ ಈ ಕ್ಷುದ್ರಗ್ರಹಕ್ಕೆ ವಿಜ್ಞಾನಿಗಳು "1998QE2" ಎಂದು ಹೆಸರಿಟ್ಟಿದ್ದಾರೆ.

- "1998QE2" ಕ್ಷುದ್ರಗ್ರಹವೂ ಭೂಮಿಯಿಂದ ಸುಮಾರು 3.6 ಮಿಲಿಯನ್ ಮೈಲಿ ದೂರದಲ್ಲಿ ಹಾದು ಹೋಗಿದೆ. ಅಂದರೆ ಭೂಮಿ ಮತ್ತು ಚಂದ್ರ ನಡುವೆ ಇರುವ ಅಂತರಕ್ಕಿಂತ 15 ಪಟ್ಟು ಹೆಚ್ಚು.
- ಮೇ 31 ರ ರಾತ್ರಿ 3.25 ರ ಸಮಯದಲ್ಲಿ ಭೂಮಿಗೆ ಅತ್ಯಂತ ಸಮೀಪದಲ್ಲಿ ಹಾದು ಹೋಗಿದೆ. ಆಕಸ್ಮಾತ್ ಈ ಕ್ಷುದ್ರಗ್ರಹ ಭೂಮಿಗೆ ಅಪ್ಪಳಿಸಿದ್ದರೆ ಇಡೀ ಜೀವಮಂಡಲವೇ ಸರ್ವನಾಶವಾಗುತಿತ್ತು ಎಂದು ವಿಜ್ಞಾನಿಗಳು ಹೇಳಿದ್ದಾರೆ.
- ಈ ಕ್ಷುದ್ರಗ್ರಹವನ್ನು ಆಗಸ್ಟ್ 19, 1998 ರಲ್ಲಿ "ಮೆಸ್ಸಚುಸೆಟ್ಸ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಲಾಜಿಯ" LINEAR (Lincoln Near Earth Asteroid Research) ಕಾರ್ಯಕ್ರಮದಡಿ ಅನ್ವೇಷಿಸಲಾಗಿತ್ತು. ಈ ಕ್ಷುದ್ರಗ್ರಹ ಸುಮಾರು 1.7 ಮೈಲಿ ಗಾತ್ರದಷ್ಟಿದೆ.
- ಮತ್ತೆ ಈ ಕ್ಷುದ್ರಗ್ರಹ ಭೂಮಿಯ ಸಮೀಪ ಧಾವಿಸಲು ಎರಡು ಶತಮಾನಗಳು ಬೇಕಾಗಲಿದೆ.

**ಐವಿಎಫ್ ಟೈಮ್ಸ್ ಲ್ಯಾಪ್ಸ್: ವಿಶ್ವದ ಮೊದಲ ಮಗು ಜನನ**

ಬಂಜೆತನ ಚಿಕಿತ್ಸೆಯ ಹೊಸ ಆವಿಷ್ಕಾರವಾದ ಐವಿಎಫ್ ಟೈಮ್ಸ್ ಲ್ಯಾಪ್ಸ್ ಫೋಟೋಗ್ರಾಫಿ ವಿಧಾನದ ಮೂಲಕ ಗರ್ಭ ಧರಿಸಿದ್ದ ಬ್ರಿಟನ್ ನ 42 ರ ಹರೆಯದ ಮನಶಾಸ್ತ್ರಜ್ಞೆ ರುತ್ ಕಾರ್ಟರ್ ರವರು ಇಂಗ್ಲೆಂಡ್ ನ ಲಿವರ್ ಪೂಲ್ ಆಸ್ಪತ್ರೆಯಲ್ಲಿ ವಿಶ್ವದ ಪ್ರಥಮ ಐವಿಎಫ್ ಮಗುವಿಗೆ ಜನ್ಮ ನೀಡಿದ್ದಾರೆ.

- ಈ ಮೂಲಕ "ಇವಾ (Early Embryo Viability Assessment (EEVA))" ತಂತ್ರಜ್ಞಾನದಿಂದ ಜನಿಸಿದ ವಿಶ್ವದ ಮೊದಲ ಮಗು ಇದಾಗಿದೆ.

EEVA ತಂತ್ರಜ್ಞಾನ ಎಂದರೇನು?

- ಫಲಪ್ರದ ಭ್ರೂಣಾಂಕುರವನ್ನು ಪತ್ತೆಹಚ್ಚಿ ಅದನ್ನು ಬೆಳೆಸುವ ನೂತನ ವಿಧಾನವೇ "ಇವಾ" ತಂತ್ರಜ್ಞಾನ. ಈ ವಿಧಾನದ ಮೂಲಕ ಬೆಳವಣಿಗೆ ಕಾಣುತ್ತಿರುವ ಭ್ರೂಣಗಳ ಛಾಯಾಚಿತ್ರಗಳನ್ನು ನಿಮಿಷಕ್ಕೊಂದರಂತೆ ಸೆರೆಹಿಡಿದು, ಅವುಗಳಲ್ಲಿ ಫಲಪ್ರದ ಭ್ರೂಣವನ್ನು ಗುರುತಿಸಿ ಬೆಳಸಲಾಗುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿ ಇದೊಂದು ಕ್ರಾಂತಿಕಾರಿ ಬೆಳವಣಿಗೆ ಎನಿಸಿದ್ದು, ಬಂಜೆತನಕ್ಕೆ ಶಾಶ್ವತ ಪರಿಹಾರ ನೀಡಲಿದೆ ಎಂದು ವೈದ್ಯರು ಹೇಳಿದ್ದಾರೆ.

**ಜಪಾನ್: LO ಸರಣಿಯ ಮ್ಯಾಗ್ಲೆವ್ ಬುಲೆಟ್ ರೈಲು (Maglev Bullet Train) ಪರೀಕ್ಷೆ ಯಶಸ್ವಿ**

ಹೊಸ ತಲೆಮಾರಿನ, ಅತ್ಯಂತ ವೇಗವಾಗಿ ಚಲಿಸುವ "ಮ್ಯಾಗ್ಲೆವ್ ಬುಲೆಟ್ ರೈಲಿ"ನ ಪ್ರಯೋಗಾರ್ಥ ಪರೀಕ್ಷೆಯನ್ನು ಜಪಾನ್ ಯಶಸ್ವಿಯಾಗಿ ನೆರವೇರಿಸಿತು. ಅತ್ಯಾಧುನಿಕ "ಮ್ಯಾಗ್ನೆಟಿಕ್ ಲೇವಿಟೇಷನ್ ತಂತ್ರಜ್ಞಾನ (Magnetic Levitation Technology)" ವ್ಯವಸ್ಥೆಯನ್ನು ಹೊಂದಿರುವ ಈ ರೈಲು ಗಂಟೆಗೆ 311 ಮೈಲಿ ವೇಗದಲ್ಲಿ ಚಲಿಸಲಿದೆ. ಮೂಲಗಳ ಪ್ರಕಾರ 2027 ರ ವೇಳೆಗೆ ಈ ರೈಲು ವಾಣಿಜ್ಯ ಸೇವೆಗೆ ಮುಕ್ತವಾಗಲಿದೆ.

- ಸೆಂಟ್ರಲ್ ಜಪಾನ್ ರೈಲ್ವೆ ಈ ಅತ್ಯಾಧುನಿಕ ರೈಲುಗಳನ್ನು ವಿನ್ಯಾಸಗೊಳಿಸಿದೆ. ಮೊದಲ ಹಂತದಲ್ಲಿ ಜಪಾನ್ ರಾಜಧಾನಿ ಟೋಕಿಯೋವನ್ನು ನಗೋಯಾ ನಿಲ್ದಾಣದೊಂದಿಗೆ ಸಂಪರ್ಕ ಕಲ್ಪಿಸಲ್ಲಿದ್ದು, ಈಗಿರುವ 90 ನಿಮಿಷದ ಪ್ರಯಾಣದ ವೇಳೆಯನ್ನು 40

ನಿಮಿಷಕ್ಕೆ ಇಳಿಸುವ ಮೂಲಕ ಅರ್ಧದಷ್ಟು ಕಡಿಮೆಗೊಳಿಸಲಿದೆ. 2045 ರ ವೇಳೆಗೆ "ಒಸಾಕ" ನಗರಕ್ಕೂ ಈ ರೈಲಿನ ಸೇವೆಯನ್ನು ವಿಸ್ತರಿಸಲಿದ್ದು, ಹಂತ ಹಂತವಾಗಿ ಇಡೀ ಜಪಾನ್ ನಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಲು ಜಪಾನ್ ನಿರ್ಧರಿಸಿದೆ.

- ಈ ರೈಲು ಒಟ್ಟು 16 ಬೋಗಿಗಳನ್ನು ಹೊಂದಿದ್ದು, ಒಂದೇ ಸಮಯದಲ್ಲಿ 1000 ಪ್ರಯಾಣಿಕರನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿದೆ. 1964 ರಲ್ಲಿ ಜಪಾನ್ "ಶಿಂಕನ್ ಸೆನ್ (Shinkansen)" ಎಂಬ ಬುಲೆಟ್ ರೈಲನ್ನು ಪರಿಚಯಿಸಿತ್ತು.

**"ಮ್ಯಾಗ್ನೆಟಿಕ್ ಲೇವಿಟೇಷನ್ ತಂತ್ರಜ್ಞಾನ"**:

- ಮ್ಯಾಗ್ಲೆವ್ ಅಥವಾ ಮ್ಯಾಗ್ನೆಟಿಕ್ ಲೇವಿಟೇಷನ್ ವಾಹನಗಳು ಅದರಲ್ಲೂ ಹೆಚ್ಚಾಗಿ ರೈಲುಗಳನ್ನು ತೂಗಿಹಾಕಿಕೊಂಡು, ದಿಕ್ಕು ತೋರಿ ಮುಂದೆ ತಳ್ಳುವ ಸಾರಿಗೆ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ವಾಹನಗಳನ್ನು ಎತ್ತಲೂ ಮತ್ತು ಮುಂದಕ್ಕೆ ಚಲಾಯಿಸಲು ಬೃಹತ್ ಸಂಖ್ಯೆಯ ಅಯಸ್ಕಾಂತಗಳಿಂದ ಉಂಟಾದ ಅಯಸ್ಕಾಂತೀಯ ತೇಲುವಿಕೆಯನ್ನು ಬಳಸುತ್ತವೆ. ಈ ವ್ಯವಸ್ಥೆಯು ಸಂಪ್ರಾದಾಯಿಕ ಚಕ್ರಾಧಾರಿತ ಸಮೂಹ ಸಾರಿಗೆ ವ್ಯವಸ್ಥೆಗಿಂತಲೂ ಹೆಚ್ಚಿನ ವೇಗ, ಕಡಿಮೆ ಸದ್ದು ಹಾಗೂ ಸುಗಮತೆಯನ್ನು ನೀಡಲು ಸಮರ್ಥವಾಗಿದೆ.
- ಮ್ಯಾಗ್ಲೆವ್ ರೈಲಿನ ದಾಖಲಿತವಾದ ಅತಿ ಹೆಚ್ಚು ವೇಗವು 581mph ಆಗಿದ್ದು, ಇದು ಜಪಾನ್ ನಲ್ಲಿ 2003 ರಲ್ಲಿ ದಾಖಲಾಗಿದೆ.
- ಮೊಟ್ಟಮೊದಲ ಮ್ಯಾಗ್ಲೆವ್ "ಜನ-ಸಾಗಣೆ" ವಾಣಿಜ್ಯ ರೈಲು 1984 ರಲ್ಲಿ ಇಂಗ್ಲೆಂಡ್ ನ ಬರ್ಮಿಂಗ್ ಹ್ಯಾಂನಲ್ಲಿ ಅಧಿಕೃತವಾಗಿ ಚಾಲನೆಗೊಂಡಿತ್ತು.

**ರೋಬೋಟಿಕ್ ಸೈನಿಕರ ಅತ್ತ DRDO ಚಿತ್ತ:**

ಗಡಿ ಪ್ರದೇಶದಲ್ಲಿ ಕಣ್ಗಾವಲು ಇಡಲು ಭಾರತ ವಿನೂತನ ತಂತ್ರಜ್ಞಾನದತ್ತ ಮುಖ ಮಾಡಿದೆ. ಯುದ್ಧ ಸಂದರ್ಭಗಳಲ್ಲಿ ಮಾನವರನ್ನೇ ಹೋಲುವ ರೋಬೋಟಿಕ್ ಸೈನಿಕರನ್ನು ಬಳಸಿಕೊಳ್ಳಲು ಭಾರತ ಸಜ್ಜಾಗಿದ್ದು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO) ಈಗಾಗಲೇ ರೋಬೋಟಿಕ್ ಸೈನಿಕರನ್ನು ಸೃಷ್ಟಿಸುವ ಸವಾಲಿನ ಕೆಲಸವನ್ನು ಕೈಗೆತ್ತಿಕೊಂಡಿರುವುದಾಗಿ DRDOದ ನೂತನ ಮುಖ್ಯಸ್ಥ ಅವಿನಾಶ್ ಚಂದರ್ ಹೇಳಿದ್ದಾರೆ. ಈ ಮೂಲಕ ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿರುವ ಕೆಲವೇ ಆಯ್ದ ರಾಷ್ಟ್ರಗಳ ಗುಂಪಿಗೆ ಭಾರತ ಸೇರ್ಪಡೆಗೊಳ್ಳಲಿದೆ.

- ಈ ರೋಬೋಟಿಕ್ ಸೈನಿಕರನ್ನು ಗಡಿ ಭಾಗದ ವಾಸ್ತವ ನಿಯಂತ್ರಣ ರೇಖೆಯಂತಹ ಕಷ್ಟದ ಯುದ್ಧಭೂಮಿಗಳಲ್ಲಿ ನಿಯೋಜಿಸಲಾಗುವುದು.
- ಶತ್ರು ಮತ್ತು ಮಿತ್ರ ಪಡೆಗಳನ್ನು ಗುರುತಿಸುವ ಚಾಣಕ್ಷತೆಯನ್ನು ಈ ರೋಬೋಟಿಕ್ ಸೈನಿಕರು ಹೊಂದಿರಲಿದ್ದಾರೆ.

ಯುದ್ಧ ಸಂದರ್ಭಗಳಲ್ಲಿ ಇವುಗಳ ಉಪಯೋಗವನ್ನು ಪಡೆದುಕೊಳ್ಳುವ ಮೂಲಕ ಯೋಧರ ಸಾವುನೋವಿನ ಸಂಖ್ಯೆಯನ್ನು ಅದಷ್ಟೂ ಕಡಿಮೆ ಮಾಡುವ ಸಲುವಾಗಿ ಇವುಗಳನ್ನು ಸೃಷ್ಟಿಸಲಾಗುತ್ತಿದೆ

**ನಭಕ್ಕೆ ಜಿಗಿದ ಚೀನಾದ "ಶೆನ್ ಜೊವು (Shenzhou)" ನೌಕೆ**

ಒಬ್ಬ ಮಹಿಳೆ ಸೇರಿದಂತೆ ಮೂವರು ಬಾಹ್ಯಾಕಾಶ ಯಾನಿಗಳನ್ನು ಒಳಗೊಂಡ "ಶೆನ್ ಜೊವೂ" ಹೆಸರಿನ ಬಾಹ್ಯಕಾಶ ನೌಕೆಯನ್ನು ಚೀನಾ ಯಶಸ್ವಿಯಾಗಿ ಉಡಾವಣೆ ಮಾಡಿತು. ಶೆನ್ ಜೊವೂ ಚೀನಾದ ಐದನೇ ಬಾಹ್ಯಾಕಾಶ ನೌಕೆಯಾಗಿದ್ದು, ಈ ನೌಕೆಯ ಗಗನಯಾನಿಗಳು 15 ದಿನಗಳ ಕಾಲ ಅಂತರಿಕ್ಷದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ.

- ನೈ ಹೈಶೆಂಗ್ (Nie Haisheng),ಝಂಗ್ ಕ್ಷಿಯೊಗಾಗ್ (Zhang Xiaoguang) ಮತ್ತು ವಾಂಗ್ ಯಾಪಿಂಗ್ (Wang Yaping) ಗಗನಯಾನಿಗಳನ್ನು ಹೊತ್ತ ಈ ಬಾಹ್ಯಾಕಾಶ ನೌಕೆಯನ್ನು "ಲಾಂಗ್ ಮಾರ್ಚ್ 2F" ರಾಕೆಟ್ ಮೂಲಕ ಜಿಕ್ವಾನ್ ಉಡಾವಣಾ ಕೇಂದ್ರದಿಂದ ನಭಕ್ಕೆ ಹಾರಿಸಲಾಯಿತು. ಬಾಹ್ಯಾಕಾಶದಲ್ಲಿ ಚೀನಾ ಸ್ಥಾಪಿಸಿರುವ ತಿಯಾನ್ ಗಾಂಗ್-1 ಬಾಹ್ಯಾಕಾಶ ಪ್ರಯೋಗಾಲಯದಲ್ಲಿ ಇದು ನೆಲೆ ನಿಲ್ಲಲಿದೆ.
- ವಾಂಗ್ ಯಾಪಿಂಗ್ ರವರು ಬಾಹ್ಯಾಕಾಶ ಯಾತ್ರೆ ಕೈಗೊಳ್ಳುತ್ತಿರುವ ಚೀನಾದ ಎರಡನೇ ಮಹಿಳೆ ಮತ್ತು ಬಾಹ್ಯಾಕಾಶ ದಿಂದ ವಿದ್ಯಾರ್ಥಿಗಳಿಗೆ ಪಾಠ ಮಾಡಲಿರುವ ಮೊದಲ ಮಹಿಳೆ ಎನಿಸಲಿದ್ದಾರೆ.
- ಅಕ್ಟೋಬರ್ 15, 2003 ರಂದು ಚೀನಾ ಗಗನಯಾತ್ರಿಗಳನ್ನು ಒಳಗೊಂಡ "ಶೆನ್ ಜೊವೊ-5" ಎಂಬ ತನ್ನ ಮೊದಲ ಬಾಹ್ಯಾಕಾಶ ನೌಕೆಯನ್ನು ಉಡಾಯಿಸಿತ್ತು. ಈ ಮೂಲಕ ಬಾಹ್ಯಾಕಾಶಕ್ಕೆ ಮಾನವರನ್ನು ಕಳುಹಿಸಿಕೊಟ್ಟ ವಿಶ್ವದ ಮೂರನೇ ರಾಷ್ಟ್ರ ಎಂಬ ಕೀರ್ತಿಯನ್ನು ಪಡೆದುಕೊಂಡಿತು. ಚೀನಾದ ಮೇಜರ್ ಜನರಲ್ ಮತ್ತು ಮಿಲಿಟರಿ ಪೈಲಟ್ ಆದ "ಯಾಂಗ್ ಲಿವೇ" ರವರು ಚೀನಾದ ಮೊದಲ ಗಗನಯಾತ್ರಿ ಎನಿಸಿದರು

**<u>ಕಣ್ಣಿನಲ್ಲಿ ಹೊಸ ಪದರ ಪತ್ತೆಹಚ್ಚಿದ ಭಾರತದ ವಿಜ್ಞಾನಿಗಳ ತಂಡ</u>**

ಮಾನವನ ಕಣ್ಣಿನ ಅಕ್ಷಿಪಟಲದಲ್ಲಿ ಹೊಸಪದರ ಇರುವಿಕೆಯನ್ನು ಭಾರತ ಮೂಲದ ವಿಜ್ಞಾನಿ ನೇತೃತ್ವವಹಿಸಿದ್ದ ತಂಡ ಪತ್ತೆಹಚ್ಚಿದೆ. ನಾಟಿಂಗ್ ಹ್ಯಾಮ್ ವಿಶ್ವವಿದ್ಯಾಲಯದ ನೇತ್ರವಿಜ್ಞಾನ ಮತ್ತು ದೃಶ್ಯವಿಜ್ಞಾನ ವಿಭಾಗದ ಮುಖ್ಯಸ್ಥ ಹಾಗೂ ಪ್ರೊಫೆಸರ್ ಆಗಿರುವ "ಹರ್ಮೀಂದರ್ ದುವಾ" ನೇತೃತ್ವದ ತಂಡ ಹೊಸ ಪದರವನ್ನು ಪತ್ತೆಹಚ್ಚಿದ್ದು, ಈ ಪದರಕ್ಕೆ ಅವರ ಹೆಸರನ್ನೇ ಬಳಸಿ "ದುವಾ ಪದರ" ಎಂದು ಕರೆಯಲಾಗಿದೆ.

- ಈ ಹೊಸ ಸಂಶೋಧನೆಯು ನೇತ್ರವಿಜ್ಞಾನದಲ್ಲಿ ಅತ್ಯಂತ ಮಹತ್ವದ ಬೆಳವಣಿಗೆಯೆಂದು ಬಣ್ಣಿಸಲಾಗಿದ್ದು, ಪಟಲದ ಕಸಿಕಟ್ಟುವಿಕೆಗೆ ಒಳಗಾಗುವ ರೋಗಿಗಳಿಗೆ ಪರಿಣಾಮಕಾರಿಯಾದ ಮತ್ತು ಫಲಪ್ರದವಾದ ಶಸ್ತ್ರಕ್ರಿಯೆ ನಡೆಸಲು ಇದು ನೆರವಾಗಲಿದೆ.
- ಅಕ್ಷಿಪಟಲದಲ್ಲಿ ಕಾರ್ನಿಯಲ್ ಎಪಿಥೀಲಿಯಂ, ಬೌಮನ್ಸ್ ಪದರ, ಕಾರ್ನಿಯಲ್ ಸ್ಟ್ರೋಮಾ, ಡೆಸೆಮೆಟ್ಸ್ ಪದರ ಮತ್ತು ಕಾರ್ನಿಯಲ್ ಎಂಡೋಥೀಲಿಯಂ ಎಂಬ ಐದು ಪದರಗಳಿವೆ ಎನ್ನಲಾಗಿತ್ತು. ಸದ್ಯ ಪತ್ತೆ ಹಚ್ಚಲಾಗಿರುವ "ದುವಾ ಪದರ"ವು ಅಕ್ಷಿಪಟಲದ ಹಿಂಭಾಗದಲ್ಲಿ <u>"ಕಾರ್ನಿಯಲ್ ಸ್ಟೋಮಾ ಮತ್ತು ಡೆಸೆಮೆಟ್ಸ್ ಮೆಂಬ್ರೆನ್"</u> ನಡುವೆ ಇದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ದುವಾ ಪದರದ ಗಾತ್ರ ಕೇವಲ 15 ಮೈಕ್ರಾನ್.

**<u>ಪರಂಗಿ ಎಲೆಯ ರಸ ಡೆಂಗ್ಯೂ ಜ್ವರಕ್ಕೆ ಸೂಕ್ತ ಮದ್ದು: ಸಂಶೋಧನೆ</u>**

ಭಾರತ ಸೇರಿದಂತೆ ವಿಶ್ವದ ಕೆಲವು ರಾಷ್ಟ್ರಗಳಲ್ಲಿ ತೀವ್ರತರನಾಗಿ ಕಾಡುತ್ತಿರುವ ಡೆಂಗ್ಯೂ ಮಾರಣಾಂತಿಕ ಜ್ವರದ ನಿಯಂತ್ರಣಕ್ಕೆ "ಕಾರಿಕಾ ಪಪಾಯ (Carica Papaya) (ಪರಂಗಿ ಹಣ್ಣು)"ದ ಎಲೆಗಳ ರಸ ಪರಿಣಾಮಕಾರಿ ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. ಮಲೇಷಿಯಾ ಮತ್ತು ಭಾರತದಲ್ಲಿ ನಡೆಸಲಾದ ವೈದ್ಯಕೀಯ ಸಂಶೋಧನೆಯ ಫಲವಾಗಿ ಈ ಅಂಶ ಬೆಳಕಿಗೆ ಬಂದಿದೆ.

- ಇನ್ ಸ್ಟಿಟ್ಯೂಟ್ ಆಫ್ ಮೆಡಿಕಲ್ ರಿಸರ್ಚ್, ಕೌಲಾಲಂಪುರ ಮತ್ತು ಅಂಪೌನ್ ರಹಿಮ್ ಆಸ್ಪತ್ರೆ ಜಂಟಿಯಾಗಿ ನಡೆಸಿದ ಸಂಶೋಧನೆಯಡಿ "ಕಾರಿಕಾ ಪಪಾಯ"ದ ಎಲೆಯ ರಸವೂ ಡೆಂಗ್ಯೂ ಜ್ವರ ಬಾಧಿತ ರೋಗಿಗಳಲ್ಲಿ ರಕ್ತದ ಕಿರುತಟ್ಟೆ (Blood Platelets) ಸಂಖ್ಯೆಯನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿರುವುದಾಗಿ ತಿಳಿದು ಬಂದಿದೆ. 228 ರೋಗಿಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರತಿಯೊಬ್ಬರಿಗೂ 50 ಗ್ರಾಂ ನಷ್ಟು ತಾಜಾ ಎಲೆಯ ರಸವನ್ನು ಸತತವಾಗಿ ಮೂರು ದಿನಗಳ ಕಾಲ ನೀಡಲಾಗಿದೆ. ಬಳಿಕ 48 ಗಂಟೆಗಳ ಕಾಲ ರೋಗಿಗಳ ರಕ್ತ ಕಿರುತಟ್ಟೆಗಳ ಬೆಳವಣಿಗೆಯನ್ನು ಗಮನಿಸಲಾಗಿದ್ದು, ಕಿರುತಟ್ಟೆಗಳ ಸಂಖ್ಯೆಯಲ್ಲಿ ಸಾಕಷ್ಟು ಹೆಚ್ಚಳ ಕಂಡು ಬಂದಿರುವುದಾಗಿ ಸಂಶೋಧನಾ ತಂಡ ತಿಳಿಸಿದೆ.

**ಡೆಂಗ್ಯೂ ಜ್ವರ:**

ಡೆಂಗ್ಯೂ ಜ್ವರ ಒಂದು ಸಾಂಕ್ರಾಮಿಕ ರೋಗ. ಡೆಂಗ್ಯೂ ಜ್ವರ ತರುವ ವೈರಸ್ ಒಂದು RNA ವೈರಸ್ ಆಗಿದ್ದು, ಫ್ಲವಿವೈರಿಡೆ ಜಾತಿಗೆ ಸೇರಿದೆ. ಈಡಿಸ್ ಎಂಬ ಸೊಳ್ಳೆಯು ಕಚ್ಚಿದಾಗ ಈ ವೈರಸ್ ಮನುಷ್ಯರಿಗೆ ಹರಡಿ ರೋಗವನ್ನು ಉಂಟಾಗುತ್ತದೆ. ವಿಶೇಷವೆಂದರೆ ಈ ಸೊಳ್ಳೆಗಳು ಹಗಲಿನ ಅದರಲ್ಲೂ ಮುಂಜಾನೆ ಮತ್ತು ಸಂಜೆಯ ವೇಳೆ ಮಾತ್ರ ಕಚ್ಚುತ್ತವೆ. ನಿಂತ ನೀರಿನ ಮೂಲಗಳಲ್ಲಿ ಈ ಸೊಳ್ಳೆಗಳು ಮೊಟ್ಟೆಯಿಟ್ಟು ಸಂತಾನೋತ್ಪಾತಿ ಮಾಡುವ ಕಾರಣ ಈ ರೋಗ ಬಹುಬೇಗ ಹರಡುತ್ತದೆ. ಡೆಂಗ್ಯೂ ಜ್ವರಕ್ಕೆ ಇದುವರೆಗೂ ಅತ್ಯಂತ ಪರಿಣಾಮಕಾರಿ ಔಷಧಿಯನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ. ರೋಗ ಬಾರದಂತೆ ತಡೆಯುವುದೊಂದೇ ಇದಕ್ಕೆ ಪರಿಹಾರ. ಮನೆಯ ಸುತ್ತಮುತ್ತ ಸ್ವಚ್ಛತೆ, ತೆಂಗಿನ ಚಿಪ್ಪು, ಹಳೆ ಟೈರ್ ಮತ್ತಿತ್ತರ ಜಾಗಗಳಲ್ಲಿ ನೀರು ನಿಲ್ಲದಂತೆ ಮುಂಜಾಗ್ರತೆ ವಹಿಸುವುದರಿಂದ ಡೆಂಗ್ಯೂ ಹರಡುವಿಕೆಯನ್ನು ಹತೋಟಿಗೆ ತರಬಹುದು.

**ಡೆಂಗ್ಯೂ ಜ್ವರದ ಲಕ್ಷಣ:**

- ಹಠಾತ್ ಜ್ವರ, ತಲೆ ನೋವು, ಸ್ನಾಯು ನೋವು, ವಾಂತಿ ಭೇದಿ, ಚರ್ಮ ತುರಿತ ಇತ್ಯಾದಿ.
- ಈ ಜ್ವರದಿಂದ ಬಾಧಿತರಾದ ವ್ಯಕ್ತಿಗಳಲ್ಲಿ "ರಕ್ತಕಿರುತಟ್ಟೆಗಳ ಸಂಖ್ಯೆ" ವಿಪರೀತವಾಗಿ ಕಡಿಮೆಯಾಗುತ್ತದೆ. ಒಂದು ವೇಳೆ ಸರಿಯಾದ ಸಮಯದಲ್ಲಿ ಸೂಕ್ತ ಚಿಕಿತ್ಸೆ ಪಡೆಯದೇ ನಿರ್ಲಕ್ಷ್ಯ ತೋರಿದರೆ ಸಾವು ಖಚಿತ.
- ಡೆಂಗ್ಯೂನಿಂದ ಬಳಲುವ ರೋಗಿಗಳು ಸಾಧ್ಯವಾದಷ್ಟು ಹೆಚ್ಚು ನೀರನ್ನು ಕುಡಿಯಬೇಕು.

**SARS ಗಿಂತಲೂ ಅತ್ಯಂತ ಹೆಚ್ಚು ಮಾರಕ "MERS" ವೈರಸ್**

ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಿಗೂಢ ಉಸಿರಾಟ ಸಂಬಂಧಿ ವೈರಸ್ ಪತ್ತೆಯಾಗಿದ್ದು, ಜನರ ನಡುವೆ ಸುಲಭವಾಗಿ ಹರಡುವ ಈ ವೈರಸ್ "SARS (Serious Acute Respiratory Syndrome)" ವೈರಸ್ ಗಿಂತಲೂ ಅತ್ಯಂತ ಹೆಚ್ಚು ಅಪಾಯ ಎಂದು ವೈದ್ಯರು ಎಚ್ಚರಿಸಿದ್ದಾರೆ. MERS ಎಂದು ಕರೆಯಲಾಗಿರುವ ಈ ವೈರಸ್ ನಿಂದ ಕಳೆದ ಕೆಲವು ವರ್ಷಗಳಲ್ಲಿ 60 ಪ್ರಕರಣಗಳು ದಾಖಲಾಗಿವೆ. ಇವುಗಳಲ್ಲಿ 38 ಪ್ರಕರಣಗಳು ಸಾವು ಸಂಭವಿಸಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ. ಸೌದಿ ಅರೇಬಿಯಾದಲ್ಲಿ ಈ ಮಾರಣಾಂತಿಕ ಕಾಯಿಲೆ ತೀವ್ರವಾಗಿ ಹರಡಿರುವುದಾಗಿ ಹೇಳಲಾಗಿದೆ.

**MERS:**

- MERS ಎಂದರೆ **"Middle East Respiratory Syndrome"** ಎಂದರ್ಥ. ಈ ವೈರಸ್ SARS ಗಿಂತಲೂ ಅತ್ಯಂತ ವೇಗವಾಗಿ ಒಬ್ಬರಿಂದ ಒಬ್ಬರಿಗೆ ಹರಡುವ ಸಾಮರ್ಥ್ಯವನ್ನು ಹೊಂದಿರುವ ಈ ಖಾಯಿಲೆ ವೈದ್ಯಕೀಯ ವಲಯದಲ್ಲಿ ತಲ್ಲಣ ಮೂಡಿಸಿದೆ.
- ಅಂತರರಾಷ್ಟ್ರೀಯ ವೈದ್ಯರ ತಂಡ ಸೌದಿ ಅರೇಬಿಯಾದಲ್ಲಿ ನಡೆಸಿದ ಅಧ್ಯಯನದ ವೇಳೆ MERS ನ್ನು ಪತ್ತೆಹಚ್ಚಲಾಗಿದ್ದು, 2003 ರಲ್ಲಿ ಸುಮಾರು ಜನರನ್ನು ಬಲಿ ತೆಗೆದುಕೊಂಡ SARS ನ್ನೇ ಹೋಲುವುದಾಗಿ ವೈದ್ಯರ ತಂಡ ಹೇಳಿದೆ.
- ಸೌದಿ ಅರೇಬಿಯಾದಲ್ಲಿ MERS ಗಂಭೀರವಾಗಿ ಪರಿಣಮಿಸಿರುವುದು ಕಂಡು ಬಂದಿದ್ದರೂ, ಮಧ್ಯ ಪ್ರಾಚ್ಯ ರಾಷ್ಟ್ರಗಳೊಂದಿಗೆ ನೇರ ಸಂಪರ್ಕದಲ್ಲಿರುವ ಜೋರ್ಡನ್, ಕತಾರ್, ಯುಎಇ, ಫ್ರಾನ್ಸ್, ಜರ್ಮನಿ, ಇಟಲಿ ಮತ್ತು ಟುನೇಷಿಯಾದಲ್ಲೂ ಈ ಪ್ರಕರಣಗಳು ಇತ್ತೀಚೆಗೆ ಕಂಡು ಬಂದಿವೆ.

**ವಿಶ್ವದ ಮೊದಲ ತ್ರಿ-ಡಿ ಡಿಜಿಟಲ್ ಮಿದುಳು ಸೃಷ್ಟಿ**

ವಿಶ್ವದಲ್ಲಿ ಇದೇ ಮೊದಲ ಬಾರಿಗೆ ಮನುಷ್ಯನ "ತ್ರಿ-ಡಿ ಡಿಜಿಟಲ್" ಸ್ವರೂಪದ ಮಿದುಳಿನ ಮಾದರಿಯೊಂದನ್ನು ವಿಜ್ಞಾನಿಗಳು ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಿಜ್ಞಾನಿಗಳು ಸೃಷ್ಟಿಸಿರುವ ಈ ಡಿಜಿಟಲ್ ಸ್ವರೂಪದ ಮಿದುಳಿನಿಂದ ಅತ್ಯಂತ ಸೂಕ್ಷ್ಮವಾಗಿ ವಿವರಗಳನ್ನು ಪಡೆಯಬಹುದಾಗಿದೆ.

- ಜರ್ಮನಿ ಮತ್ತು ಕೆನಡಾದ ವಿಜ್ಞಾನಿಗಳು "ಬಿಗ್ ಬ್ರೈನ್" ಎನ್ನುವ ಹೆಸರಿನಡಿ ಈ ಮಿದುಳನ್ನು ಅಭಿವೃದ್ದಿಪಡಿಸಿದ್ದಾರೆ.
- 65 ವರ್ಷದ ಮೃತ ಮಹಿಳೆಯ ಮಿದುಳನ್ನು ಸುಮಾರು 7,400 ಕ್ಕೂ ಹೆಚ್ಚು ಭಾಗಗಳಿಗೆ ವಿಂಗಡಿಸಲಾಗಿದೆ. ಈ ಭಾಗಗಳು ಮನುಷ್ಯನ ಕೂದಲಿನಷ್ಟು ಸಣ್ಣದಾಗಿವೆ. ಬಳಿಕ ಇವುಗಳನ್ನು ಕಂಪ್ಯೂಟರ್ ನಲ್ಲಿ ಸ್ಕ್ಯಾನ್ ಮಾಡಿ ದಾಖಲೀಕರೀಸಲಾಗಿದೆ.
- ಈ ಮಿದುಳನ್ನು ಸೃಷ್ಟಿ ಮಾಡಲು ವಿಜ್ಞಾನಿಗಳು ಬರೋಬ್ಬರಿ 10 ವರ್ಷ ತೆಗೆದುಕೊಂಡಿದ್ದಾರೆ.

**ಸೂಪರ್ ಮೂನ್: ಭೂಮಿಯ ಸಮೀಪದಲ್ಲಿ ಚಂದ್ರ**

ಈ ವರ್ಷದ ಅತ್ಯಂತ ಪ್ರಕಾಶಮಾನವಾದ ಮತ್ತು ದೊಡ್ಡದಾದ ಪೂರ್ಣಚಂದ್ರ ಭೂಮಿಗೆ ಹತ್ತಿರವಾಗಿ ಜೂನ್ 23 ರಂದು ಆಗಸದಲ್ಲಿ ಗೋಚರಿಸುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. ಈ ದಿನದಂದು ಚಂದ್ರ ಭೂಮಿಗೆ ಅತಿ ಸಮೀಪದಲ್ಲಿ ಇರಲ್ಲಿದ್ದು, ಶೇ 14 ರಷ್ಟು ದೊಡ್ಡದಾಗಿ ಮತ್ತು ಶೇ 30 ರಷ್ಟು ಹೆಚ್ಚು ಪ್ರಕಾಶಮಾನವಾಗಿ ಕಾಣಲಿದ್ದಾನೆ.

**ಏನಿದು ಸೂಪರ್ ಮೂನ್?**

- ಖಗೋಳಜ್ಞಾನಿ "ರಿಚರ್ಡ್ ನೊಲ್ಲೆ" 1979 ರಲ್ಲಿ ಸೂಪರ್ ಮೂನ್ ಎಂಬ ಪದವನ್ನು ಮೊದಲಿಗೆ ಬಳಸಿದವರು.
- ಚಂದ್ರ ಭೂಮಿಗೆ ಅತ್ಯಂತ ಸಮೀಪ ಆಗಮಿಸುವ ಸಂದರ್ಭ ಅಥವಾ ಸೂರ್ಯ, ಚಂದ್ರ ಮತ್ತು ಭೂಮಿ ಒಂದೇ ರೇಖೆಯಲ್ಲಿದ್ದು, ಭೂಮಿಗೆ ಚಂದ್ರ ಹತ್ತಿರವಾಗಿದ್ದ ಸಂದರ್ಭವನ್ನು ಸೂಪರ್ ಮೂನ್ ಎನ್ನಲಾಗುತ್ತದೆ.
- ಅಚ್ಚರಿಯೆಂದರೇ ಖಗೋಳ ಸಮುದಾಯದಲ್ಲಿ "ಸೂಪರ್ ಮೂನ್" ಪದವನ್ನು ಬಳಸುವುದಿಲ್ಲ. ಬದಲಿಗೆ ಪೆರಿಜಿ-ಸಿಝಿಗಿ (Perigee-Syzygy) ಅಥವಾ ಪೆರಿಜಿ ಮೂನ್ (Perigee Moon) ಎನ್ನಲಾಗುತ್ತದೆ.
- ಸೂಪರ್ ಮೂನ್ ನಿಂದ ಯಾವುದೇ ಪ್ರಕೃತಿ ವಿಕೋಪಗಳು ಉಂಟಾಗುವುದಿಲ್ಲವೆಂದು ನಾಸಾ ವಿಜ್ಞಾನಿಗಳು ಖಚಿತಪಡಿಸಿದ್ದಾರೆ.

**ಮುಂದಿನ ಸೂಪರ್ ಮೂನ್?**

- ಆಗಸ್ಟ್ 10, 2014 ರಂದು ಮುಂದಿನ ಸೂಪರ್ ಮೂನ್ ಗೋಚರಿಸಲಿದೆ.

**ಬಾಹ್ಯಾಕಾಶಕ್ಕೆ ರೋಬೋಟ್ ಕಳುಹಿಸಲಿರುವ ಜಪಾನ್**

ವಿಶ್ವದಲ್ಲೇ ಇದೇ ಮೊದಲು ರೋಬೋಟ್ ಮತ್ತು ಮಾನವ ನಡುವೆ ಬಾಹ್ಯಕಾಶ ಸಂಭಾಷಣೆ ನಡೆಸುವ ಪ್ರಯತ್ನಕ್ಕೆ ಜಪಾನ್ ಸಜ್ಜಾಗಿದೆ. ಜಪಾನ್ ನ ಕಿರ್ಬೋ ಪ್ರಾಜೆಕ್ಟ್ ನಡಿ ಅಭಿವೃದ್ದಿಪಡಿಸಲಾಗಿರುವ "ಕಿರೋಬೊ" ಹೆಸರಿನ ಈ ರೋಬೋಟ್ ಅನ್ನು ಜಪಾನ್ ಮುಂದಿನ ತಿಂಗಳು ಬಾಹ್ಯಕಾಶಕ್ಕೆ ಹಾರಿಬಿಡಲಿದೆ.

- ಬಾಹ್ಯಕಾಶಕ್ಕೆ ಮೊದಲು ಪ್ರಯಾಣಿಸಿದ ಕೀರ್ತಿ ರಷ್ಯಾಕ್ಕೆ ಸಂದರೆ, ಚಂದ್ರನಲ್ಲಿ ಮೊದಲು ಕಾಲಿಟ್ಟು ಅಮೆರಿಕಾ ದಾಖಲೆ ಸೃಷ್ಟಿಸಿದ್ದು ಇತಿಹಾಸ. ಆದರೆ ಬಾಹ್ಯಕಾಶಕ್ಕೆ ಮಾನವರೊಂದಿಗೆ ಸಂಭಾಷಿಸುವ ರೋಬೋಟ್ ಕಳುಹಿಸಿದ ಮೊದಲ ದೇಶವೆಂಬ ಕೀರ್ತಿಗೆ ಜಪಾನ್ ಪಾತ್ರವಾಗಲಿದೆಯೆಂದು ಕಿರ್ಬೋ ಪ್ರಾಜೆಕ್ಟ್ ನ ಮ್ಯಾನೇಜರ್ ಯೊರಿಚಿಕ ನಿಶಿಜಿಮಾ ಹೇಳಿದ್ದಾರೆ.
- ಹಲವಾರು ಕಂಪನಿಗಳ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಲಾಗಿರುವ ಕಿರ್ಬೋ ರೋಬೋಟ್ ಬಾಹ್ಯಾಕಾಶದಲ್ಲಿ ಮಾನವರೊಂದಿಗೆ ಸಂಪರ್ಕದಲ್ಲಿರುವ ಮೂಲಕ ಅಧ್ಯಯನಕ್ಕೆ ಸಹಾಯ ಮಾಡಲಿದೆ.
- 'ಕಿರೋಬೊ" 34 ಸೆಂ.ಮೀ ಉದ್ದ ಮತ್ತು ಸುಮಾರು ಒಂದು ಕೆ.ಜಿ ತೂಕವಿದೆ. ಈ ರೋಬೋಟ್ ಅನ್ನು ತನೆಗ್ಶಿಮಾ ಬಾಹ್ಯಕಾಶ ಕೇಂದ್ರದಿಂದ ಆಗಸ್ಟ್ 4 2013 ರಂದು ಬಾಹ್ಯಕಾಶ ಕಳುಹಿಸಲು ಜಪಾನ್ ಸಿದ್ದತೆ ನಡೆಸಿದೆ.

**ಅನಾಲ್ಜಿನ್, ಪಿಯೊಗ್ಲಿಟಜೋನ್ ಮತ್ತು ಡೆಕ್ಸಿಂಟ್ ಔಷಧಿಗಳ ಮೇಲೆ ನಿಷೇಧ ಹೇರಿದ ಕೇಂದ್ರ ಸರ್ಕಾರ**

ಪ್ರಮುಖ ನೋವುನಿವಾರಕ ಅನಾಲ್ಜಿನ್ (analgin), ಮಧುಮೇಹ ನಿಯಂತ್ರಕ ಪಿಯೊಗ್ಲಿಟಜೋನ್ (pioglitazone) ಮತ್ತು ಖಿನ್ನತೆ ದೂರಮಾಡುವ ಡೆಕ್ಸಿಂಟ್ (deanxit) ಔಷಧಿಗಳ ಮಾರಾಟ ಮತ್ತು ವಿತರಣೆಯ ಮೇಲೆ ಕೇಂದ್ರ ಆರೋಗ್ಯ ಸಚಿವಾಲಯ ನಿಷೇಧ ಹೇರಿ ಆದೇಶ ಹೊರಡಿಸಿದೆ. ಈ ಔಷಧಿಗಳ ಸೇವನೆಯಿಂದ ಅಡ್ಡಪರಿಣಾಮ ಉಂಟಾಗುವ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ವಿಶ್ವದ ಹಲವು ರಾಷ್ಟ್ರಗಳಲ್ಲಿ ಈ ಔಷಧಿಗಳ ಮೇಲೆ ಈಗಾಗಲೇ ನಿಷೇಧ ಹೇರಲಾಗಿದೆ.

- "ಡ್ರಗ್ಸ್ ಮತ್ತು ಕಾಸ್ಮೆಟಿಕ್ ಕಾಯಿದೆ-1940" ರ ಸೆಕ್ಷನ್ 26ಎ ಅಡಿ ಕೇಂದ್ರ ಆರೋಗ್ಯ ಸಚಿವಾಲಯ ಈ ಮೂರು ಔಷಧಿಗಳ ಉತ್ಪಾದನೆ, ಮಾರಾಟ ಮತ್ತು ವಿತರಣೆಯ ಮೇಲೆ ಸಂಪೂರ್ಣ ನಿಷೇಧ ಹೇರಿದೆ. ಸರ್ಕಾರದ ಈ ಕ್ರಮದಿಂದ ವಾರ್ಷಿಕ ರೂ 700 ಕೋಟಿ ವ್ಯವಹಾರಕ್ಕೆ ಕಂಟಕ ಬರಲಿದೆ ಎನ್ನಲಾಗಿದೆ.

**ಪಿಯೊಗ್ಲಿಟಜೋನ್**: ಮಧುಮೇಹ ನಿಯಂತ್ರಣಕ್ಕೆ ವ್ಯಾಪಾಕವಾಗಿ ಬಳಸುತ್ತಿರುವ ಈ ಔಷಧದಿಂದ ಹೃದಯಘಾತ ಮತ್ತು ಮೂತ್ರಕೋಶ ಸಂಬಂಧಿ ಕ್ಯಾನ್ಸರ್ ಉಂಟಾಗುತ್ತದೆ ಎನ್ನುವ ಆರೋಪದ ಹಿನ್ನೆಲೆಯಲ್ಲಿ ನಿಷೇಧಿಸಲಾಗಿದೆ.

**ಅಲ್ಜಾಮಿನ್**: ನೋವು ನಿವಾರಕವಾಗಿ ಬಳಸಲಾಗುತ್ತಿರುವ ಈ ಔಷಧದಿಂದ ಬಿಳಿ ರಕ್ತ ಕಣಗಳ ಸಂಖ್ಯೆ ಇಳಿಕೆಯಾಗುತ್ತದೆ. ಮುಂದುವರೆದ ಸೇವನೆಯಿಂದ ಸಾವು ಸಂಭವಿಸುವ ಪ್ರಕರಣಗಳು ಹೆಚ್ಚು ಎನ್ನಲಾಗಿದೆ. ಈಗಾಗಲೇ ಫ್ರಾನ್ಸ್,ಸ್ವೀಡನ್, ಜಪಾನ್, ಕೆನಡಾ ಮತ್ತು ಆಸ್ಟ್ರೇಲಿಯಾದಲ್ಲಿ ಈ ಔಷಧಿಯ ಬಳಕೆಯ ಮೇಲೆ ನಿಷೇಧ ವಿಧಿಸಲಾಗಿದೆ.

**ಡೆಕ್ಸಿಂಟ್**: ಹಾನಿಕರ ಅಂಶಗಳಿಂದ ಕೂಡಿರುವ ಕಾರಣ ಖಿನ್ನತೆ ನಿವಾರಕ ಔಷಧ ಡೆಕ್ಸಿಂಟ್ ನ್ನು ರೋಗಿಗಳ ಸುರಕ್ಷತೆಯ ಹಿನ್ನೆಲೆಯಲ್ಲಿ ನಿಷೇಧ ಹೇರಲಾಗಿದೆ. ಡೆನ್ಮಾರ್ಕ್ ನಲ್ಲಿ ಅನೇಕ ವರ್ಷಗಳ ಹಿಂದೆಯೇ ಇದರ ಮೇಲೆ ನಿರ್ಬಂಧ ಹೇರಲಾಗಿದೆ.

**ಸುದ್ದಿ ಸಂಗ್ರಹ: "ಪ್ರಾಜೆಕ್ಟ್ ಲೂನ್ (Project Loon)"**

ಅಂತರ್ಜಾಲವೆಂದರೆ ತಟ್ಟನೇ ನೆನಪಾಗುವುದು ಗೂಗಲ್ ಸರ್ಚ್ ಎಂಜಿನ್. ಗೂಗಲ್ ಈಗ ಹಿಂದುಳಿದ ಪ್ರದೇಶಗಳಿಗೆ ಇಂಟರ್ ನೆಟ್ ಸೇವೆಯನ್ನು ಒದಗಿಸಲು ಮುಂದಾಗಿದ್ದು, ತನ್ನ ಈ ಯೋಜನೆಗೆ "ಪ್ರಾಜೆಕ್ಟ್ ಲೂನ್" ಎಂದು ಹೆಸರಿಟ್ಟಿದೆ. ಪ್ರಾಜೆಕ್ಟ್ ಲೂನ್ ನ ಸಂಕ್ಷೀಪ್ತ ಮಾಹಿತಿ ಇಲ್ಲಿದೆ.

**ಪ್ರಾಜೆಕ್ಟ್ ಲೂನ್:**

- ಗ್ರಾಮೀಣ ಮತ್ತು ಕುಗ್ರಾಮ ಪ್ರದೇಶಗಳಿಗೆ ಅಂತರ್ಜಾಲ ಸೌಲಭ್ಯವನ್ನು ಒದಗಿಸಲು ಗೂಗಲ್ ಕೈಗೊಂಡಿರುವ ಸಂಶೋಧನಾ ಮತ್ತು ಅಭಿವೃದ್ಧಿ ಕಾರ್ಯಕ್ರಮವೇ ಪ್ರಾಜೆಕ್ಟ್ ಲೂನ್.
- ಈ ಮಹತ್ವದ ಕಾರ್ಯಕ್ರಮದಡಿ ಬಲೂನ್ (ಆಕಾಶಬುಟ್ಟಿ) ಗಳನ್ನು ವಾತಾವರಣದ ಸ್ಟ್ರಾಟೋಸ್ಪೀಯರ್ (20 ಕಿ.ಮೀ) ನಲ್ಲಿ ತೇಲಿಬಿಡಲಾಗುವುದು. ಅಂದರೆ ವಿಮಾನ ಹಾರಾಡುವುದಕ್ಕಿಂತಲೂ ಎರಡು ಪಟ್ಟು ಎತ್ತರದಲ್ಲಿ ಬಲೂನ್ ಗಳು ಹಾರಲಿವೆ. ಇವುಗಳ ಮೂಲಕ ಇಂಟರ್ ನೆಟ್ ಸೌಲಭ್ಯವನ್ನು ನೀಡುವ ಗುರಿಯನ್ನು ಹೊಂದಲಾಗಿದೆ. ಗಾಳಿ ಬೀಸುವ ದಿಕ್ಕು ಮತ್ತು ವೇಗಕ್ಕೆ ಅನುಗುಣವಾಗಿ ಈ ಬಲೂನ್ ಗಳನ್ನು ಭೂಮಿಯಿಂದ ನಿಯಂತ್ರಿಸಬಹುದಾಗಿದೆ.
- ಇಂಟರ್ ನೆಟ್ ಬಳಕೆದಾರರು ತಮ್ಮ ಮನೆಯ ಮೇಲಿರುವ ಅಂಟೆನಾಗಳಿಂದ ಹಾರಾಡುವ ಬಲೂನ್ ಗಳೊಂದಿಗೆ ಸಂಪರ್ಕ ಸಾಧಿಸುವ ಮೂಲಕ ಇಂಟರ್ ನೆಟ್ ಸೇವೆಯನ್ನು ಪಡೆಯಬಹುದು.

ಪರೀಕ್ಷಾರ್ಥ ಪ್ರಯೋಗ:

- ಈ ಬಹುನಿರೀಕ್ಷಿತ ಕಾರ್ಯಕ್ರಮವನ್ನು ಗೂಗಲ್ ಇತ್ತೀಚೆಗೆ ನ್ಯೂಜಿಲ್ಯಾಂಡ್ ನಲ್ಲಿ ಯಶಸ್ವಿಯಾಗಿ ಪರೀಕ್ಷಿಸಿತು. ಗೂಗಲ್ ಹೇಳುವಂತೆ ಪ್ರಯೋಗ ಯಶಸ್ವಿಯಾಗಿದೆ, ಆದರೆ ವಿಶ್ವದ ಕೆಲವು ತಜ್ಞರು ಈ ಯೋಜನೆಯನ್ನು ಮತಿಭ್ರಮಣೆ ಎಂದಿದ್ದಾರೆ.

## ವ್ಯವಹಾರ

**ಯು.ಎಸ್ ಕೂಪರ್ ಟೈರ್ ಮತ್ತು ರಬ್ಬರ್ ಕಂಪನಿಯನ್ನು ಖರೀದಿಸಲಿರುವ ಅಪೊಲೊ ಟೈರ್**

ಗುರಾಂಗವ್ ಮೂಲದ ಟೈರ್ ತಯಾರಿಕ ಕಂಪನಿ ಅಪೊಲೊ ಟೈರ್ ಅಮೆರಿಕಾದ ಕೂಪರ್ ಟೈರ್ ಮತ್ತು ರಬ್ಬರ್ ಕಂಪನಿಯನ್ನು ರೂ 14,500 ಕೋಟಿಗೆ ಖರೀದಿಸುವುದಾಗಿ ಹೇಳಿದೆ.

- ಕಂಪನಿಯ ಇಟ್ಟಿರುವ ಈ ದಿಟ್ಟ ಹೆಜ್ಜೆಯಿಂದ ಜಾಗತಿಕ ಮಟ್ಟದಲ್ಲಿ ಟೈರ್ ತಯಾರಿಕೆಯಲ್ಲಿ 16 ನೇ ಸ್ಥಾನದಲ್ಲಿರುವ ಅಪೊಲೊ ಟೈರ್ಸ್ 7 ನೇ ಸ್ಥಾನಕ್ಕೆ ಜಿಗಿಯಲಿದೆ. ಅಲ್ಲದೇ ಜಾಗತಿಕ ಮಾರುಕಟ್ಟೆಯಲ್ಲಿ ತನ್ನದೇ ಆದ ಛಾಪು ಮೂಡಿಸಲಿದೆ.
- ಕೂಪರ್ ಸಂಸ್ಥೆ ಚೀನಾದಲ್ಲಿ ಎರಡು, ಯು.ಕೆ, ಸರ್ಬೀಯಾ ಮತ್ತು ಮೆಕ್ಸಿಕೊದಲ್ಲಿ ತಲಾ ಒಂದು ಹಾಗೂ ಅಮೆರಿಕಾದಲ್ಲಿ ಮೂರು ಘಟಕಗಳನ್ನು ಹೊಂದಿದೆ.ಅಪೊಲೊ ಒಟ್ಟು ಆರು ಘಟಕಗಳನ್ನು ಹೊಂದಿದೆ. 2012 ರಲ್ಲಿ ಈ ಎರಡು ಕಂಪನಿಗಳ ಒಟ್ಟು ರೆವಿನ್ಯೂ 6.6 ಬಿಲಿಯನ್ ಡಾಲರ್ ರಷ್ಟಿತ್ತು.
- ಕೂಪರ್ ಸಂಸ್ಥೆಯನ್ನು ಖರೀದಿಸಿದ ಮೇಲೆ ಅಲ್ಲಿನ ಸಿಬ್ಬಂದಿ ವರ್ಗದಲ್ಲಿ ಯಾವುದೇ ಬದಲಾವಣೆ ತರುವುದಿಲ್ಲವೆಂದು ಅಪೊಲೊ ಸ್ಪಷ್ಟಪಡಿಸಿದೆ. ಆದರೆ ಕೂಪರ್ ಟೈರ್ಸ್ ಮಾರುಕಟ್ಟೆಯಾದ ಚೀನಾ ಮತ್ತು ಅಮೆರಿಕಾದಲ್ಲಿ ಅಪೊಲೊ ಟೈರ್ ಗಳನ್ನು ಪರಿಚಯಿಸಲಾಗುವುದು. ಹಾಗೆಯೇ ಭಾರತದಲ್ಲಿ ಕೂಪರ್ ಟೈರ್ ಗಳನ್ನು ಪರಿಚಯಿಸಲಾಗುವುದು.

**"ಕೊಚ್ಚಿ"ಯಲ್ಲಿ ವಿಶ್ವ ಆರ್ಥಿಕ ವೇದಿಕೆ (ಇಂಡಿಯಾ ಚಾಪ್ಟರ್)-2013 ಸಮ್ಮೇಳನ**

"ವಿಶ್ವ ಆರ್ಥಿಕ ವೇದಿಕೆ-2013 (World Economic Forum)" 29 ನೇ ಸಮ್ಮೇಳನವನ್ನು ನವೆಂಬರ್ 8 ಮತ್ತು 9 ರಂದು ಕೇರಳದ ಕೊಚ್ಚಿಯಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ. ವಿಶ್ವ ಆರ್ಥಿಕ ವೇದಿಕೆಯ ಕೇಂದ್ರ ಕಚೇರಿಯಾದ ಸ್ವಿಟ್ಜರ್ಲ್ಯಾಂಡ್ ನ ಡಾವೊಸ್ ನಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

- "ವಿಶ್ವ ಆರ್ಥಿಕ ವೇದಿಕೆ" ಭಾರತದಲ್ಲಿ ನಡೆಯುತ್ತಿರುವುದು ಇದು ಎರಡನೇ ಬಾರಿ. ಈ ಹಿಂದೆ "ವಿಶ್ವ ಆರ್ಥಿಕ ವೇದಿಕೆ" ಯ 27 ನೇ ಸಮ್ಮೇಳವನ್ನು ನವದೆಹಲಿಯಲ್ಲಿ ಆಯೋಜಿಸಲಾಗಿತ್ತು. ಇದೇ ಮೊದಲ ಬಾರಿಗೆ ದಕ್ಷಿಣ ಭಾರತದಲ್ಲಿ ಈ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ.
- ವಾರ್ಷಿಕವಾಗಿ ಆಯೋಜಿಸಲಾಗುವ ಈ ಸಮ್ಮೇಳನದಲ್ಲಿ ದೇಶ ವಿದೇಶಗಳ 300 ಕ್ಕೂ ಹೆಚ್ಚು ಪ್ರತಿನಿಧಿಗಳು, ಉದ್ಯಮಿಗಳು ಮತ್ತು ಪ್ರತಿಷ್ಠಿತ ಸಂಸ್ಥೆಗಳ ಸಿಇಓ ಗಳು ಭಾಗವಹಿಸಲ್ಲಿದ್ದಾರೆ.
- ವಿಶ್ವ ಆರ್ಥಿಕ ವೇದಿಕೆ ಕೇರಳದಲ್ಲಿ ನಡೆಯುತ್ತಿರುವುದರಿಂದ ಕೇರಳ ರಾಜ್ಯ ವಿಶ್ವದ ಗಮನ ಸೆಳೆಯುವಲ್ಲಿ ಸಫಲವಾಗಲಿದೆ ಎಂದು ಕೇರಳ ಮುಖ್ಯ ಮಂತ್ರಿ ಉಮ್ಮನ್ ಚಾಂಡಿ ಹೇಳಿದ್ದಾರೆ.

**ಸ್ವಿಸ್ ಬ್ಯಾಂಕ್ ಗಳಲ್ಲಿ ಹಣ: ಭಾರತಕ್ಕೆ 70 ನೇ ಸ್ಥಾನ**

ಸ್ವಿಟ್ಜರ್ಲ್ಯಾಂಡ್ ನ ಬ್ಯಾಂಕ್ ಗಳಲ್ಲಿ ಇಡಲಾಗಿರುವ ವಿದೇಶಿ ಹಣದ ಮೊತ್ತ ಆಧಾರಿಸಿ ಸಿದ್ಧಪಡಿಸಲಾಗಿರುವ ಪಟ್ಟಿಯಲ್ಲಿ ಭಾರತ 70ನೇ ಸ್ಥಾನಕ್ಕೆ ಕುಸಿದಿದೆ. ಕಳೆದ ವರ್ಷ ಭಾರತ 55 ನೇ ಸ್ಥಾನದಲ್ಲಿತ್ತು. ಸ್ವಿಸ್ ಬ್ಯಾಂಕ್ ಗಳಲ್ಲಿ ಭಾರತೀಯರು ಇಟ್ಟಿರುವ ಹಣ ವರ್ಷದಿಂದ ವರ್ಷಕ್ಕೆ ಕರಗುತ್ತಿರುವುದಕ್ಕೆ ಇದು ನಿದರ್ಶನವೆನಿಸಿದೆ. ಐರೋಪ್ಯ ರಾಷ್ಟ್ರಗಳಲ್ಲಿರುವ ತನ್ನ ಎಲ್ಲಾ ಬ್ಯಾಂಕುಗಳಲ್ಲಿರುವ ಠೇವಣಿಯ ವಾರ್ಷಿಕ ವಿಶ್ಲೇಷಣಾ ವರದಿಯನ್ನು ಸ್ವಿಸ್ ರಾಷ್ಟ್ರೀಯ ಬ್ಯಾಂಕ್ ಸಿದ್ಧಪಡಿಸಿದ್ದು ಅದರಲ್ಲಿ ಭಾರತ 70 ನೇ ಸ್ಥಾನ ಪಡೆದುಕೊಂಡಿದೆ.

- ಪಟ್ಟಿಯಲ್ಲಿ ಬ್ರಿಟನ್ ಮೊದಲ ಸ್ಥಾನದಲ್ಲಿದೆ (295 ಬಿಲಿಯನ್ ಸ್ವಿಸ್ ಫ್ರಾಂಕ್ಸ್). ಈ ಮೂಲಕ ಸತತ ಎರಡನೇ ವರ್ಷ ಬ್ರಿಟನ್ ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ. ಸ್ವಿಸ್ ಬ್ಯಾಂಕ್ ನಲ್ಲಿ ಇಡಲಾಗಿರುವ ಒಟ್ಟು ಹಣದಲ್ಲಿ ಶೇ 22 ರಷ್ಟು ಪಾಲನ್ನು ಬ್ರಿಟನ್ ಹೊಂದಿದೆ.
- ಸ್ವಿಸ್ ಬ್ಯಾಂಕ್ ಗಳಲ್ಲಿ ಇಟ್ಟಿರುವ ಒಟ್ಟು ಹಣಕ್ಕೆ ಹೋಲಿಸಿದರೆ ಭಾರತದ ಪಾಲು ಶೇ 0.10 ರಷ್ಟು ಮಾತ್ರ. ಅಂದರೆ ಸುಮಾರು 9,000 (1.42 ಬಿಲಿಯನ್ ಸ್ವಿಸ್ ಫ್ರಾಂಕ್ಸ್) ಕೋಟಿ ಹಣವನ್ನು ಭಾರತೀಯರು ಸ್ವಿಸ್ ಬ್ಯಾಂಕ್ ಗಳಲ್ಲಿ ಠೇವಣಿ ಇಟ್ಟಿದ್ದಾರೆ.
- ಸ್ವಿಸ್ ಬ್ಯಾಂಕ್ ಹೆಚ್ಚು ಹಣ ಇಟ್ಟಿರುವ ಟಾಪ್ ಟೆನ್ ರಾಷ್ಟ್ರಗಳೆಂದರೆ: ಬ್ರಿಟನ್ ನಂತರದ ಸ್ಥಾನದಲ್ಲಿ ಅಮೆರಿಕ, ವೆಸ್ಟ್ ಇಂಡೀಸ್, ಜೆರ್ಸಿ, ಗುರ್ನೆಸೆ, ಜರ್ಮನಿ, ಫ್ರಾನ್ಸ್, ಬಹಮಾಸ್, ಕೆಮನ್ ಐಲ್ಯಾಂಡ್ ಮತ್ತು ಹಾಂಗ್ ಕಾಂಗ್.
- ಈ ಪಟ್ಟಿಯಲ್ಲಿ ಚೀನಾ 26, ಬ್ರೆಜಿಲ್ 39, ದಕ್ಷಿಣ ಆಫ್ರಿಕಾ 50 ಮತ್ತು ಪಾಕಿಸ್ತಾನ 69ನೇ ಸ್ಥಾನದಲ್ಲಿವೆ.

**ವಿದೇಶಿ ಬಂಡವಾಳ ಆಕರ್ಷಣೆ: ಭಾರತಕ್ಕೆ ಮೂರನೇ ಸ್ಥಾನ**

ಯುನೈಟೆಡ್ ನೇಷನ್ ಕಾನ್ಫರೆನ್ಸ್ ಆನ್ ಟ್ರೇಡ್ ಅಂಡ್ ಡೆವೆಲಪ್ ಮೆಂಟ್ (UNCTD) ಇತ್ತೀಚೆಗೆ ನಡೆಸಿರುವ ಸಮೀಕ್ಷೆಯ ಅಂಕಿ-ಅಂಶಗಳ ಪ್ರಕಾರ ವಿದೇಶಿ ಬಂಡವಾಳ ಹೂಡಿಕೆಯಲ್ಲಿ (2013-15) ಭಾರತ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ. ಈ ಮೂಲಕ ಭಾರತ ತನ್ನ ಸ್ಥಾನವನ್ನು ಕಾಯ್ದುಕೊಂಡು ಮುನ್ನಡೆಯುತ್ತಿದೆ.

- ವಿಶ್ವದ ಪ್ರಮುಖ 159 ಸಂಸ್ಥೆಗಳನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿದ್ದು, ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಚೀನಾ ಅಗ್ರಸ್ಥಾನವನ್ನು ಕಾಯ್ದುಕೊಂಡರೆ, ಅಮೆರಿಕಾ ಎರಡನೇ ಸ್ಥಾನವನ್ನು ಪಡೆದುಕೊಂಡಿದೆ.
- ಈ ಪಟ್ಟಿಯಲ್ಲಿ ಟಾಪ್ 5 ಸ್ಥಾನದಲ್ಲಿ ಕಾಣಿಸಿಕೊಂಡಿರುವ ಇತರೆ ರಾಷ್ಟ್ರಗಳೆಂದರೆ ಬ್ರೆಜಿಲ್ (4 ನೇ ಸ್ಥಾನ) ಮತ್ತು ಇಂಡೋನೇಷಿಯಾ (5 ನೇ ಸ್ಥಾನ).

ಕರುನಾಡು

## ಪರಿಸರ

**ಮೆಟ್ರೋ ನಗರಗಳಲ್ಲಿ ಕ್ಷೀಣಿಸಿದ ವಾಯು ಗುಣಮಟ್ಟ: TERI ಸಮೀಕ್ಷೆ**

ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ಹಾಗೂ ಮಿತಿಮೀರಿ ಬೆಳೆಯುತ್ತಿರುವ ಕೈಗಾರಿಕೆಗಳಿಂದ ಕಳೆದ ಐದು ವರ್ಷಗಳಲ್ಲಿ ದೇಶದ ಆರು ಮೆಟ್ರೊ ನಗರಗಳ ವಾಯುವಿನ ಗುಣಮಟ್ಟ ಕುಸಿದಿರುವ ಆಘಾತಕಾರಿ ಅಂಶ ಬೆಳಕಿಗೆ ಬಂದಿದೆ. TERI (The Energy and Resource Institutes) ಬೆಂಗಳೂರು, ಚೆನ್ನೈ, ದೆಹಲಿ, ಹೈದ್ರಾಬಾದ್, ಕೊಲ್ಕತ್ತಾ ಮತ್ತು ಮುಂಬೈ ನಗರಗಳಲ್ಲಿ ನಡೆಸಿರುವ ಪರಿಸರ ಸಮೀಕ್ಷೆ-2013 ರ ವರದಿಯಲ್ಲಿ ತಿಳಿಸಲಾಗಿದೆ.

- ಪರಿಸರ ತಜ್ಞ ಡಾ.ಆರ್.ಕೆ.ಪಚೌರಿ ನೇತೃತ್ವದ ತಂಡವು ಈ ಆರು ನಗರಗಳಲ್ಲಿ ಸುಮಾರು 4,000 ಜನರನ್ನು ಸಮೀಕ್ಷೆಗೆ ಒಳಪಡಿಸಿ ಪರಿಸರ ಸಂಬಂಧಿತ ವಿಷಯಗಳ ಬಗ್ಗೆ ಜನರ ಸ್ಪಂದನೆಯನ್ನು ತಿಳಿಯಲಾಗಿದೆ. ಸಮೀಕ್ಷೆಯಲ್ಲಿ ಭಾಗವಹಿಸಿದ ಬಹುತೇಕ ಜನರು ವಾಯು ಮತ್ತು ನೀರಿನ ಗುಣಮಟ್ಟ ಕ್ಷೀಣಿಸಿದ್ದು, ಇದಕ್ಕೆ ಪರಿಹಾರ ಹುಡುಕುವ ಹೊಣೆ ಸರ್ಕಾರದ್ದು ಎಂದಿದ್ದಾರೆ. ಹೈದ್ರಾಬಾದ್ ಹೊರತುಪಡಿಸಿದರೆ ಕುಡಿಯುವ ನೀರಿನ ಲಭ್ಯತೆ ಮತ್ತು ಗುಣಮಟ್ಟದಲ್ಲಿ ಕೆಲವರು ಸಮಾಧಾನ ವ್ಯಕ್ತಪಡಿಸಿದ್ದಾರೆ.
- ಚೆನ್ನೈ, ದೆಹಲಿ, ಕೊಲ್ಕತ್ತಾ ಮತ್ತು ಮುಂಬೈನಲ್ಲಿ ಪರಿಸರ ಮಾಲಿನ್ಯಕ್ಕೆ ಪ್ರಮುಖ ಕಾರಣ ಸಾರಿಗೆ ವ್ಯವಸ್ಥೆ ನಂತರ ಕೈಗಾರಿಕೆಗಳು ಎನ್ನಲಾಗಿದೆ. ಆದರೆ ಬೆಂಗಳೂರಿನಲ್ಲಿ ಇದಕ್ಕೆ ವ್ಯತಿರಿಕ್ತ ಅಭಿಪ್ರಾಯ ವ್ಯಕ್ತವಾಗಿದ್ದು, ಮಾಲಿನ್ಯಕ್ಕೆ ಪ್ರಮುಖ ಕಾರಣ ಕೈಗಾರಿಕೆ ಎಂದು ಜನರು ದೂರಿದ್ದಾರೆ. ಇನ್ನು ಹೈದ್ರಾಬಾದ್ ನಲ್ಲಿ ಕಟ್ಟಡ ನಿರ್ಮಾಣ ಕೆಲಸ ಮಾಲಿನ್ಯಕ್ಕೆ ಪ್ರಮುಖ ಹೊಣೆಯನ್ನಾಗಿ ಮಾಡಲಾಗಿದ್ದು, ನಂತರದ ಸ್ಥಾನದಲ್ಲಿ ಸಾರಿಗೆ ವ್ಯವಸ್ಥೆ ಇದೆ.
- ಸಮೀಕ್ಷೆಯಲ್ಲಿ ಕಂಡುಬಂದಿರುವಂತೆ ಬೆಂಗಳೂರಿನ ಶೇ 90 ರಷ್ಟು ಜನತೆ ವಾರಕ್ಕೆ ಮೂರು ಸಲವಾದರೂ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಸಂಚರಿಸುವುದಾಗಿ ಹೇಳಿದ್ದಾರೆ. ಉಳಿದ ನಗರಗಳಲ್ಲಿ ಈ ಪ್ರಮಾಣ ಶೇ 50 ರಷ್ಟಿದೆ. ವಿಶೇಷವೆಂದರೆ ಸಮೀಕ್ಷೆಯಲ್ಲಿ ಪಾಲ್ಗೊಂಡ ಬಹುತೇಕ ಜನರು ವಾಯು ಮಾಲಿನ್ಯಕ್ಕೆ ಕಡಿವಾಣ ಹಾಕಲು ಖಾಸಗಿ ವಾಹನಗಳಿಗೆ ತೆರಿಗೆ ವಿಧಿಸಬೇಕು ಎಂದು ಹೇಳಿದ್ದಾರೆ.

**"ಸ್ವಚ್ಛ ಭಾರತ ಅಭಿಯಾನ (Clean Campaign India)"ದಡಿ ಆರು ಸ್ಮಾರಕಗಳನ್ನು ದತ್ತು ಪಡೆದ ONGC**

ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ "ಸ್ವಚ್ಛ ಭಾರತ ಅಭಿಯಾನ"ದಡಿ ಆರು ಸ್ಮಾರಕ/ಪ್ರವಾಸಿ ತಾಣಗಳನ್ನು "ತೈಲ ಮತ್ತು ನೈಸರ್ಗಿಕ ಅನಿಲ ಸಂಸ್ಥೆ (ONGC)" ಗೆ ದತ್ತು ನೀಡುವ ಪ್ರಸ್ತಾವನೆಗೆ ಭಾರತ ಪುರಾತತ್ವ ಇಲಾಖೆ ಒಪ್ಪಿಗೆ ನೀಡಿದೆ. ಇನ್ನು ಮುಂದೆ ಈ ಸ್ಮಾರಕಗಳ ನಿರ್ವಹಣೆಯನ್ನು ONGC ನಿರ್ವಹಿಸಲಿದೆ.

**ಯಾವ ಸ್ಮಾರಕ/ಪ್ರವಾಸಿ ತಾಣಗಳು**:

- ಆಗ್ರಾದ ತಾಜ್ ಮಹಲ್, ಮಹಾರಾಷ್ಟ್ರದ ಎಲ್ಲೋರ ಮತ್ತು ಎಲಿಫಂಟಾ ಗುಹೆಗಳು, ದೆಹಲಿಯ ಕೆಂಪು ಕೋಟೆ, ಹೈದ್ರಾಬಾದ್ ನ ಗೋಲ್ಕಂಡ ಕೋಟೆ ಮತ್ತು ತಮಿಳುನಾಡಿನ ಮಹಬಲಿಪುರಂ ಪ್ರವಾಸಿ ತಾಣಗಳನ್ನು ONGC ದತ್ತು ಪಡೆದುಕೊಂಡಿದೆ.
- ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿಯಡಿ ONGC ಈ ಸ್ಮಾರಕಗಳನ್ನು ನಿರ್ವಹಿಸಲಿದ್ದು, ಈ ಸ್ಮಾರಕಗಳ ಸುತ್ತ-ಮುತ್ತ ಸ್ವಚ್ಛತೆ ಮತ್ತು ಸಂರಕ್ಷಣೆಯ ಸಲುವಾಗಿ ಕಾರ್ಯಕ್ರಮಗಳನ್ನು ರೂಪಿಸಿ ಪ್ರವಾಸಿಗರಲ್ಲಿ ಈ ಸ್ಥಳಗಳ ಬಗ್ಗೆ ಗೌರವ ಹೆಚ್ಚಿಸುವ ಹೊಣೆಯನ್ನು ONGC ಹೊಂದಿದೆ.

**ಸ್ವಚ್ಛ ಭಾರತ ಅಭಿಯಾನ:**

- "ಸ್ವಚ್ಚ ಭಾರತ ಅಭಿಯಾನ" ವನ್ನು ಕೇಂದ್ರ ಪರಿಸರ ಸಚಿವಾಲಯ ಜಾರಿಗೊಳಿಸಿದೆ. ದೇಶದ ಪ್ರವಾಸಿ ತಾಣಗಳು ಮತ್ತು ಐತಿಹಾಸಿಕ ಸ್ಮಾರಕಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ಶುಚಿತ್ವವನ್ನು ಸ್ಥಳೀಯರು, ಸ್ಥಳೀಯ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಕಾಪಾಡಿ ಪ್ರವಾಸಿ ತಾಣಗಳನ್ನು ಪ್ರವಾಸಿ ಸ್ನೇಹಿ ತಾಣಗಳನ್ನಾಗಿ ನೋಡಿಕೊಳ್ಳುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶ. ಕಾರ್ಪೋರೇಟ್ ವಲಯದ ಕಂಪನಿಗಳು ಆರ್ಥಿಕವಾಗಿ ಸದೃಢವಾಗಿರುವ ಕಾರಣ ಈ ಅಭಿಯಾನದಲ್ಲಿ ಮುಖ್ಯ ಪಾತ್ರವಹಿಸಲಿವೆ.

**<u>2028 ರ ವೇಳೆಗೆ ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕಲಿರುವ ಭಾರತ: ವಿಶ್ವಸಂಸ್ಥೆ</u>**

ವಿಶ್ವದಲ್ಲೇ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಚೀನಾವನ್ನು ಹಿಂದಿಕ್ಕುವತ್ತ ಭಾರತ ದಾಪುಗಾಲಿಟ್ಟಿದೆ. ವಿಶ್ವಸಂಸ್ಥೆ ಬಿಡುಗಡೆಗೊಳಿಸಿರುವ "ವಿಶ್ವ ಜನಸಂಖ್ಯೆ ಮುನ್ನೋಟ-2012" ರ ವರದಿಯಂತೆ ಭಾರತ 2028 ರ ವೇಳೆಗೆ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿ ಹೊರಹೊಮ್ಮಲಿರುವುದಾಗಿ ಹೇಳಲಾಗಿದೆ. ಈ ಮೂಲಕ ಜನಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿರುವ ಚೀನಾವನ್ನು ಎರಡನೇ ಸ್ಥಾನಕ್ಕೆ ತಳ್ಳಲು ಭಾರತ ಸಜ್ಜಾಗಿದೆ.

- ವಿಶ್ವಸಂಸ್ಥೆಯ "ವಿಶ್ವ ಜನಸಂಖ್ಯೆ ಮುನ್ನೋಟ-2012" ವರದಿ ಪ್ರಕಾರ 2050 ರ ವೇಳೆಗೆ ವಿಶ್ವದ ಜನಸಂಖ್ಯೆ 9.6 ಬಿಲಿಯನ್ ಮುಟ್ಟಲಿದೆ. ಜನಸಂಖ್ಯೆ ಬೆಳವಣಿಗೆಯಲ್ಲಿ ಆಫ್ರಿಕಾ ದೇಶಗಳ ಪಾಲು ಅತಿ ಹೆಚ್ಚು ಇರಲಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ.
- ಪ್ರಸ್ತುತ ವಿಶ್ವದ ಜನಸಂಖ್ಯೆ 7.2 ಬಿಲಿಯನ್ ಇದ್ದು, ಮುಂದಿನ 12 ವರ್ಷಗಳಲ್ಲಿ 1 ಬಿಲಿಯನ್ ನಷ್ಟು ಏರಿಕೆಯಾಗಲಿದೆ. ಅಂದರೆ 2025 ರ ವೇಳೆಗೆ ವಿಶ್ವದ ಜನಸಂಖ್ಯೆ 8.1 ಬಿಲಿಯನ್ ನಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ.
- ಹಲವು ದಶಕಗಳ ವರೆಗೆ ಭಾರತದಲ್ಲಿ ದಶಕದ ಜನಸಂಖ್ಯಾ ಬೆಳವಣಿಗೆ 1.6 ಬಿಲಿಯನ್ ಇರಲಿದೆ. 2100 ರ ವೇಳೆಗೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗುವ ಮೂಲಕ 1.5 ಬಿಲಿಯನ್ ನಷ್ಟು ಇರಬಹುದು ಎನ್ನಲಾಗಿದೆ. ಇತ್ತ 2030 ರ ವೇಳೆಗೆ ಚೀನಾದ ಜನಸಂಖ್ಯಾ ಬೆಳವಣಿಗೆಯಲ್ಲಿ ಇಳಿಮುಖವಾಗಲಿದ್ದು, 2100 ರ ವೇಳೆಗೆ 1.1 ಬಿಲಿಯನ್ ನಷ್ಟು ಇರುವುದಾಗಿ ಹೇಳಲಾಗಿದೆ.

ವರದಿಯ ಪ್ರಕಾರ ಮಾನವ ಇತಿಹಾಸದಲ್ಲೇ ಮರಣ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿರುವುದಕ್ಕೆ 20 ನೇ ಶತಮಾನ ಸಾಕ್ಷಿಯಾಗಿದೆ. 1950-55 ರಲ್ಲಿ 47 ವರ್ಷವಿದ್ದ ವಿಶ್ವದ ಜೀವಿತಾವಧಿ, 2005-10 ರಲ್ಲಿ 67 ಕ್ಕೆ ಏರಿಕೆಯಾಗಿದೆ.

**<u>ಕಾಂಬೋಡಿಯಾದಲ್ಲಿ 1,200 ವರ್ಷಗಳಷ್ಟು ಹಳೆಯದಾದ ನಗರ ಪತ್ತೆ</u>**

ಸುಮಾರು 1,200 ವರ್ಷಗಳಷ್ಟು ಹಳೆಯದಾದ ಮಧ್ಯಪ್ರಾಚೀನ ನಗರವೊಂದನ್ನು ಕಾಂಬೋಡಿಯಾದ ಮಂಜು ಮುಚ್ಚಿದ ಪರ್ವತದಲ್ಲಿ ಪುರಾತತ್ವ ತಜ್ಞರು ಪತ್ತೆಹಚ್ಚಿದ್ದಾರೆ. ದಟ್ಟ ಅರಣ್ಯದ ನಡುವೆ ಹುದುಗಿ ಹೋಗಿದ್ದ ಈ ಪುರಾತನ ನಗರವನ್ನು ವಾಯುಗಾಮಿ ಲೇಸರ್ ತಂತ್ರಜ್ಞಾನ (Airborne Laser Technology) ಬಳಸಿ ಪತ್ತೆಹಚ್ಚಲಾಗಿದೆ.

- ಕಾಂಬೋಡಿಯಾದ "ಫ್ನೊಮ್ ಕುಲೆನ್" ಪರ್ವತದಲ್ಲಿ ಪತ್ತೆಹಚ್ಚಲಾಗಿರುವ ಈ ನಗರವನ್ನು ಮಹೇಂದ್ರ ಪರ್ವತ ಎಂದು ನಂಬಲಾಗಿದೆ. ಕಾಂಬೋಡಿಯಾ ಪ್ರಸಿದ್ಧ ಹಿಂದೂ ದೇವಾಲಯ "ಅಂಗರ್ ವಾಟ್" ನಿರ್ಮಾಣಕ್ಕೂ 350 ವರ್ಷಗಳ ಮುಂಚೆಯೇ ಈ ನಗರವನ್ನು ಸ್ಥಾಪಿಸಲಾಗಿದೆ ಎಂದು ಊಹಿಸಲಾಗಿದೆ. ಇತಿಹಾಸ ಪುರಾವೆಗಳ ಪ್ರಕಾರ ಈ ಪರ್ವತ ರಾಜ ಜಯವರ್ಮನ್ ನ ರಾಜಧಾನಿಯಾಗಿತ್ತು.

- ಲಂಡನ್ ಪುರಾತತ್ವ ಇಲಾಖೆಯ ನಿರ್ದೇಶಕ "ಜೀನ್-ಬಾಪ್ಟಿಸ್ಟೆ ಚೆವೆಂನ್ಸ್ ನೇತೃತ್ವದ ತಂಡ ಈ ನಗರದ ಅನ್ವೇಷಣೆಯನ್ನು ಮಾಡಿದೆ. ಪುರಾತತ್ವ ತಜ್ಞರ ಪ್ರಕಾರ ತೀವ್ರ ಸ್ವರೂಪದ ಅರಣ್ಯ ನಾಶ ಈ ನಾಗರಿಕತೆಯ ಅವನತಿಗೆ ಮೂಲ ಕಾರಣ ಎನ್ನಲಾಗಿದೆ.

**"ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ"ಕ್ಕೆ ವಿಶ್ವದ ಎರಡನೇ ಅತ್ಯುತ್ತಮ ವಿಮಾನ ನಿಲ್ದಾಣ ಪ್ರಶಸ್ತಿ**

ದೆಹಲಿಯ "ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (IGI)" ವಿಶ್ವದ ಎರಡನೇ ಅತ್ಯುತ್ತಮ ವಿಮಾನ ನಿಲ್ದಾಣವೆಂಬ ಖ್ಯಾತಿಗೆ ಪಾತ್ರವಾಗಿದೆ. ವಾರ್ಷಿಕ 25 ರಿಂದ 40 ಮಿಲಿಯನ್ ಪ್ರಯಾಣಿಕರನ್ನು ನಿಭಾಯಿಸುವ ಸಾಮರ್ಥ್ಯದ ವಿಭಾಗದ ವಿಮಾನ ನಿಲ್ದಾಣಗಳ ಪೈಕಿ ಎರಡನೇ ಅತ್ಯುತ್ತಮ ವಿಮಾನ ನಿಲ್ದಾಣವೆಂಬ ಹಿರಿಮೆಗೆ ಭಾಜನವಾಗಿದೆ.

- ಜಗತ್ತಿನ 199 ವಿಮಾನ ನಿಲ್ದಾಣಗಳ ಪೈಕಿ ಎಲ್ಲಾ ವಿಭಾಗಗಳಲ್ಲೂ ಇಂದಿರಾ ಗಾಂಧಿ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಾಲ್ಕನೇ ಶ್ರೇಷ್ಠ ವಿಮಾನ ನಿಲ್ದಾಣವೆಂದು ಗುರುತಿಸಲಾಗಿದೆ. ಟರ್ಕಿಯ ಇಸ್ತಾಂಬುಲ್ ನಲ್ಲಿ ನಡೆದ ಸಮಾರಂಭದಲ್ಲಿ "ಏರ್ ಪೋರ್ಟ್ ಕೌನ್ಸಿಲ್ ಇಂಟರ್ ನ್ಯಾಷನಲ್" ವತಿಯಿಂದ ನೀಡಲಾಗವು "ವಿಮಾನ ಸೇವೆ ಗುಣಮಟ್ಟ"ದ ಪ್ರಶಸ್ತಿಯನ್ನು ಇತ್ತೀಚೆಗೆ ನೀಡಲಾಯಿತು.
- ವಿಮಾನ ಸೇವೆ ಗುಣಮಟ್ಟ ಪ್ರಮಾಣದಲ್ಲಿ IGI 5 ಕ್ಕೆ 4.83 ಅಂಕವನ್ನು ಗಳಿಸಿಕೊಂಡಿದೆ. 2007 ರಲ್ಲಿ ಕೇವಲ 3.02 ಅಂಕಗಳನ್ನು ಗಳಿಸುವ ಮೂಲಕ 101 ವಿಮಾನ ನಿಲ್ದಾಣಗಳ ಪಟ್ಟಿಯಲ್ಲಿ ಕಡೆಯ ಸ್ಥಾನಗಳಿಸಿಗೊಂಡಿತ್ತು.

**ವಿಮಾನ ಸೇವೆ ಗುಣಮಟ್ಟ ಪ್ರಶಸ್ತಿ**:

ಪ್ರಯಾಣಿಕರ ತೃಪ್ತಿ ಸಮೀಕ್ಷೆಯ ಆಧಾರದ ಮೇಲೆ ವಿಮಾನ ನಿಲ್ದಾಣಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಪ್ರಯಾಣಿಕರ ಅನುಭವನ್ನು ಸುಧಾರಿಸಲು ಮತ್ತು ವಿಮಾನ ನಿಲ್ದಾಣಗಳಲ್ಲಿ ಬದ್ದತೆಯನ್ನು ಆಚರಿಸುವಲ್ಲಿ ಈ ಪ್ರಶಸ್ತಿ ಪ್ರಮುಖ ಪಾತ್ರವಹಿಸುತ್ತಿದೆ

**ಸಿರಿಯಾದ ಆರು ವಿಶ್ವ ಪಾರಂಪರಿಕ ತಾಣಗಳು ಅಳಿವಿನಂಚಿನ ಪಟ್ಟಿಗೆ ಸೇರ್ಪಡೆ**

ಸಿರಿಯಾದ ಆರು ವಿಶ್ವ ಪಾರಂಪರಿಕ ತಾಣಗಳನ್ನು ಯುನೆಸ್ಕೊ ಅಳಿವಿನಂಚಿನಲ್ಲಿರುವ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಗೊಳಿಸಿದೆ. ಇತ್ತೀಚೆಗೆ ಕಾಂಬೋಡಿಯಾದಲ್ಲಿ ನಡೆದ 37 ನೇ ಯುನೆಸ್ಕೋ ವಿಶ್ವ ಪಾರಂಪರಿಕ ವಾರ್ಷಿಕ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

**ಕಾರಣವೇನು?**

- ಸಿರಿಯಾದಲ್ಲಿ ಎರಡು ವರ್ಷಗಳಿಂದ ಸತತವಾಗಿ ನಡೆಯುತ್ತಿರುವ ನಾಗರಿಕ ಯುದ್ಧದಿಂದ ಈ ವಿಶ್ವ ಪಾರಂಪರಿಕ ತಾಣಗಳು ಹಾನಿಗೊಳಗಾಗಿರುವುದೇ ಯುನೆಸ್ಕೊದ ಈ ನಿರ್ಧಾರಕ್ಕೆ ಪ್ರಮುಖ ಕಾರಣವಾಗಿದೆ.
- ಸಿರಿಯಾದಲ್ಲಿ ನಡೆಯುತ್ತಿರುವ ಸಶಸ್ತ್ರ ಸಂಘರ್ಷದಿಂದ ಈ ಐತಿಹಾಸಿಕ ತಾಣಗಳನ್ನು ಸಂರಕ್ಷಿಸುವುದು ಬಹಳ ಕಷ್ಟಕರ ಕೆಲಸವೆಂದು ಯುನೆಸ್ಕೊ ತಿಳಿಸಿದೆ.

**ಯಾವ ತಾಣಗಳು?**

ಸಿರಿಯಾ ಒಟ್ಟು ಆರು ವಿಶ್ವ ಪಾರಂಪರಿಕ ತಾಣಗಳನ್ನು ಹೊಂದಿದೆ ಅವುಗಳೆಂದರೆ:-

- ದಿ ಎನ್ಷಿಯೆಂಟ್ ಸಿಟೀಸ್ ಆಫ್ ದಮಸ್ಕಸ್ (The Ancient Cities of Damascus)
- ಬೊಸ್ರ ಮತ್ತು ಅಲೆಪ್ಪೊ (Bosra and Aleppo)
- ದಿ ಓಯಾಸಿಸ್ ಆಫ್ ಪಲ್ ಮೈರ (The Oasis of Palmyra)

- ದಿ ಕ್ಯಾಸ್ಟಲ್ ಆಫ್ ಕ್ರೂಸೆಡ್ಸ್ ಚೆವಲಿರ್ (The Castle of Crusades Chevalier)
- ಕ್ಯುಲತ್ ಸಲಾ ಎಲ್-ದಿನ್ (Qal-at Salah El-din)
- ಎನ್ಷಿಯೆಂಟ್ ವಿಲೇಜೆಸ್ ಆಫ್ ನಾರ್ತನ್ ಸಿರಿಯಾ (Ancient villages of northern Syria)

**ಸೂರ್ಯನ ಅಧ್ಯಯನಕ್ಕೆ ನಾಸಾದಿಂದ "IRIS" ಉಪಗ್ರಹ ಉಡಾವಣೆ**

ಸೂರ್ಯನ ಬಗ್ಗೆ ಬಗೆಹರಿಯದೇ ಉಳಿದಿರುವ ಕೆಲವು ರಹಸ್ಯ ಮಾಹಿತಿಗಳ ಅಧ್ಯಯನ ನಡೆಸುವ ಸಲುವಾಗಿ ನಾಸಾ IRIS ಹೆಸರಿನ ಉಪಗ್ರಹವನ್ನು ಇತ್ತೀಚೆಗೆ ಉಡಾಯಿಸಿತು. ಕ್ಯಾಲಿಫೋರ್ನಿಯಾದ ವಂಡೆನ್ ಬರ್ಗ್ ವಾಯುನೆಲೆಯಿಂದ ವಿಶೇಷವಾಗಿ ವಿನ್ಯಾಸಗೊಳಿಸಲಾದ ಪೆಗಾಸಸ್ XL ರಾಕೆಟ್ ಈ ಉಪಗ್ರಹವನ್ನು ಹೊತ್ತೊಯ್ಯಿತು.

**IRIS ಬಗ್ಗೆ**:

- IRIS ಎಂದರೆ Interface Region Imaging Spectrograph satellite. ನಾಸಾದ ಬಹು ನಿರೀಕ್ಷಿತ ಉಪಗ್ರಹವಾಗಿದ್ದು, ಎರಡು ವರ್ಷಗಳ ಕಾಲ ಸೂರ್ಯನ ಮೇಲ್ಮೈಯನ್ನು ಇದು ಅಧ್ಯಯನ ನಡೆಸಲಿದೆ. ಸೂರ್ಯನ ಸುತ್ತ ಶಕ್ತಿ ಮತ್ತು ವಸ್ತುಗಳ ಚಲನೆಯ ಬಗ್ಗೆ ಅಧ್ಯಯನ ನಡೆಸಲು ವಿಜ್ಞಾನಿಗಳಿಗೆ ಇದು ಸಹಕಾರಿಯಾಗಲಿದೆ ಎಂದು ಭಾವಿಸಲಾಗಿದೆ.
- ನಾಸಾ ಹೇಳಿಕೆಯಂತೆ IRIS ಉಪಗ್ರಹ 181 ಕೆ.ಜಿ ಭಾರವಿದ್ದು, 7 X 12 ಅಡಿ ಗಾತ್ರವನ್ನು ಹೊಂದಿದೆ. ಇದರ ಕಾರ್ಯನಿರ್ವಹಣೆಗೆ ಬೇಕಾಗುವ ಶಕ್ತಿಗಾಗಿ ಸೋಲಾರ್ ಪ್ಯಾನಲ್ ಗಳನ್ನು ಅಳವಡಿಸಲಾಗಿದೆ ಮತ್ತು ಈ ಯೋಜನೆಯ ವೆಚ್ಚ 120 ಮಿಲಿಯನ್ ಡಾಲರ್ ಗಳು.
- ಸೂರ್ಯನ ಮೇಲ್ಭಾಗ ಮತ್ತು ಕರೋನಾ ನಡುವಿನ ವಾತಾವರಣವನ್ನು ಈ ಉಪಗ್ರಹದಿಂದ ಅಧ್ಯಯನ ಮಾಡಲಾಗುವುದು. ಅಲ್ಲದೇ, ಸೂರ್ಯನ ಒಳ ಭಾಗದಿಂದ ಶಕ್ತಿ ಹೇಗೆ ಪಸರಿಸುತ್ತದೆ ಎಂಬುದು ಸೇರಿದಂತೆ ಸೌರ ಗಾಳಿ, ಸೌರ ವಿಕಿರಣಗಳ ಬಗ್ಗೆ ಅಧ್ಯಯನ ಮಾಡಲಾಗುವುದು.

**ಅಂಡಮಾನ್ ಮತ್ತು ನಿಕೋಬರ್ ದ್ವೀಪ ಪ್ರದೇಶದಲ್ಲಿ: ಸುನಾಮಿ ಮುನ್ನೆಚರಿಕೆ ವ್ಯವಸ್ಥೆ ಸ್ಥಾಪನೆ**

ಭೂಕಂಪ ಸಂಭವಿಸದ ಕೆಲವೇ ನಿಮಿಷಗಳಲ್ಲಿ ಸುನಾಮಿ ಎಚ್ಚರಿಕೆಯನ್ನು ರವಾನಿಸುವ ವ್ಯವಸ್ಥೆಯನ್ನು ಅಂಡಮಾನ್ ನಿಕೋಬರ್ ನ ರಂಗಚಂಗ್ ನಲ್ಲಿ ಇತ್ತೀಚೆಗೆ ಸ್ಥಾಪಿಸಲಾಗಿದೆ. ಈ ವ್ಯವಸ್ಥೆಯಿಂದ ಸುನಾಮಿ ಉಂಟಾಗುವಿಕೆಯನ್ನು ಮೊದಲೇ ಗ್ರಹಿಸಬಹುದಾಗಿದ್ದು, ಸುರಕ್ಷತೆ ಕ್ರಮಗಳನ್ನು ಕೈಗೊಳ್ಳಲು ಇದು ಸಹಕಾರಿಯಾಗಲಿದೆ.

- ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆ ಈ ವ್ಯವಸ್ಥೆಯನ್ನು ಸ್ಥಾಪಿಸಿದೆ. ಭೂಕಂಪ ಸಂಭವಿಸಿದ ನಂತರ ಕೇವಲ ಮೂರು ನಿಮಿಷಗಳ ಒಳಗೆ ಸುನಾಮಿ ಉಂಟಾಗುವಿಕೆಯನ್ನು ಗ್ರಹಿಸಿ ಮುನ್ಸೂಚನೆ ಸಂದೇಶವನ್ನು ಈ ವ್ಯವಸ್ಥೆ ರವಾನಿಸುತ್ತದೆ. ಭೂಕಂಪ ಸಂಭವಿಸಿದಾಗ ಉಂಟಾಗುವ ಅಲೆಗಳ ರಭಸದ ಆಧಾರದ ಮೇಲೆ ಸುನಾಮಿ ಆಗುವಿಕೆಯನ್ನು ಗ್ರಹಿಸಿ ಈ ವ್ಯವಸ್ಥೆ ಕಾರ್ಯನಿರ್ವಹಿಸಲಿದೆ.
- ಎಚ್ಚರಿಕೆ ಸಂದೇಶ ರವಾನಿಕೆ ಆದ ಮೇಲೆ ಸುನಾಮಿ ಮುನ್ನಚರಿಕೆಯನ್ನು ಅಪಾಯಕ್ಕೆ ಸಿಲುಕಲಿರುವ ಪ್ರದೇಶಗಳಿಗೆ ತಕ್ಷಣವೇ ನೀಡಲಾಗುವುದು. ಹೀಗೆ ಮುನ್ನೆಚರಿಕೆ ನೀಡುವುದರಿಂದ ಸಾವು ನೋವುಗಳನ್ನು ಸಾಕಷ್ಟು ಕಡಿಮೆಗೊಳಿಸಬಹುದಾಗಿದೆ.

## ಕ್ರೀಡೆ

**"ಫೋರ್ಬ್" ವಿಶ್ವದ 100 ಶ್ರೀಮಂತ ಕ್ರೀಡಾಪಟುಗಳ ಪಟ್ಟಿಯಲ್ಲಿ ಧೋನಿಗೆ 16 ನೇ ಸ್ಥಾನ**

ವಿಶ್ವದ ಶ್ರೀಮಂತ ಕ್ರೀಡಾಪಟುಗಳ ಪಟ್ಟಿಯನ್ನು "ಫೋರ್ಬ್ಸ್" ನಿಯತಕಾಲಿಕೆ ಹೊರತಂದಿದ್ದು, ಈ ಪಟ್ಟಿಯಲ್ಲಿ ಭಾರತ ಕ್ರಿಕೆಟ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ 16 ನೇ ಸ್ಥಾನ ಪಡೆದುಕೊಂಡಿದ್ದಾರೆ. 2012 ರಲ್ಲಿ 31 ನೇ ಸ್ಥಾನದಲ್ಲಿದ್ದ ಧೋನಿ ಈ ವರ್ಷ 15 ಸ್ಥಾನ ಮೇಲೇರಿದ್ದಾರೆ.

- 31 ವರ್ಷ ವಯಸ್ಸಿನ ಧೋನಿ ರವರ ವಾರ್ಷಿಕ ಒಟ್ಟು ಗಳಿಗೆ 180 ಕೋಟಿ ರೂಪಾಯಿ. ಇದರಲ್ಲಿ ಪಂದ್ಯ ಸಂಭಾವನೆ ರೂಪದಲ್ಲಿ 20 ಕೋಟಿ ಮತ್ತು ಜಾಹಿರಾತು ಪ್ರಚಾರ ರಾಯಭಾರಿಯಾಗುವ ಮೂಲಕ 160 ಕೋಟಿ ದುಡಿಯುತ್ತಿದ್ದಾರೆ.
- ವಿಶ್ವದ ನಂ.1 ಗಾಲ್ಫ್ ಆಟಗಾರ "ಟೈಗರ್ ವುಡ್ಸ್" ರವರು ಈ ಪಟ್ಟಿಯಲ್ಲಿ ಪ್ರಥಮ ಸ್ಥಾನದಲ್ಲಿದ್ದಾರೆ. ಟೈಗರ್ ವುಡ್ಸ್ ರವರ ವಾರ್ಷಿಕ ಒಟ್ಟು ಆದಾಯ 445 ಕೋಟಿ ರೂಪಾಯಿ.
- ಎರಡನೇ ಸ್ಥಾನವನ್ನು ಸ್ವಿಟ್ಜರ್ಲ್ಯಾಂಡ್ ನ ಖ್ಯಾತ ಟೆನ್ನಿಸ್ ಆಟಗಾರ ರೋಜರ್ ಫೆಡರರ್ ಅಲಂಕರಿಸಿದ್ದಾರೆ. ಫೆಡರರ್ ರವರು ವಾರ್ಷಿಕವಾಗಿ 407 ಕೋಟಿ ದುಡಿಯುತ್ತಿದ್ದಾರೆ. 2012 ರಲ್ಲಿ ಫೆಡರರ್ ಅಗ್ರಸ್ಥಾನದಲ್ಲಿದ್ದರು.
- ಮಹಿಳಾ ಕ್ರೀಡಾಪಟುಗಳ ಪೈಕಿ ಮರಿಯಾ ಶರಪೋವ 22 ನೇ ಸ್ಥಾನದಲ್ಲಿ, ಸೆರೆನಾ ವಿಲಿಯ್ಸಂ 68 ನೇ ಸ್ಥಾನದಲ್ಲಿ ಹಾಗೂ ಚೀನಾದ ಲಿ ನಾ ರವರು 85 ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ.

**ಥಾಯ್ಲೆಂಡ್ ಓಪನ್: ಚೊಚ್ಚಲ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡ ಶ್ರೀಕಾಂತ್**

ಭಾರತದ ಯುವ ಪ್ರತಿಭೆ ಶ್ರೀಕಾಂತ್ ರವರು ಥಾಯ್ಲೆಂಡ್ ಓಪನ್ ಗ್ರಾಂಡ್ ಫಿಕ್ಸ್ ನ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಜಯ ಸಾಧಿಸುವ ಮೂಲಕ ತಮ್ಮ ಚೊಚ್ಚಲ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಗೆದ್ದುಕೊಂಡರು.

- ಫೈನಲ್ ಪಂದ್ಯದಲ್ಲಿ ಸ್ಥಳೀಯ ಪ್ರತಿಭೆ ಬೂನಾಕ್ಸ್ ಪೊನ್ಸಾನಾ ರವರ ವಿರುದ್ಧ ನಡೆಸಿದ ಸೆಣಸಾಟದಲ್ಲಿ ಶ್ರೀಕಾಂತ್ 21-16, 21-12 ನೇರ ಸೆಟ್ ಗಳಿಂದ ಬೂನಾಕ್ಸ್ ರವರನ್ನು ಮಣಿಸಿ ಪ್ರಶಸ್ತಿಯನ್ನು ಬಾಚಿಕೊಂಡರು.
- ಸೆಮಿಫೈನಲ್ ಪಂದ್ಯದಲ್ಲಿ ಶ್ರೀಕಾಂತ್ 21-14, 21-18 ನೇರ ಸೆಟ್ ಗಳಿಂದ ಸ್ಥಳೀಯ ಆಟಗಾರ ಥಮಾಸಿನ್ ಸಿಥಿಕೊಮ್ ರವರನ್ನು ಸೋಲಿಸಿ ಫೈನಲ್ ಗೆ ಲಗ್ಗೆ ಹಾಕಿದ್ದರು.
- ಈ ಪ್ರತಿಷ್ಠಿತ ಟೂರ್ನಿಯಲ್ಲಿ ಭಾರತದ ಭರವಸೆಯ ಆಟಗಾರ್ತಿ ಸೈನಾ ನೆಹ್ವಾಲ್ ಸೇರಿದಂತೆ ಭಾರತೀಯ ಆಟಗಾರರು ಹೊರಬಿದ್ದ ಹಿನ್ನಲೆಯಲ್ಲಿ ಶ್ರೀಕಾಂತ್ ಏಕಾಂಗಿ ಹೋರಾಟ ನಡೆಸಿದ್ದರು.

**ಫ್ರೆಂಚ್ ಓಪನ್ ಸೆರೆನಾ ಮಡಿಲಿಗೆ ಪ್ರಶಸ್ತಿ**

ಅಮೆರಿಕಾದ ಖ್ಯಾತ ಟೆನ್ನಿಸ್ ತಾರೆ ಸೆರೆನಾ ವಿಲಿಯಮ್ಸ್ ಫ್ರೆಂಚ್ ಓಪನ್ ಗ್ರ್ಯಾನ್ ಸ್ಲಾಮ್ ನ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಬಾಚಿಕೊಂಡರು.

- ಕುತೂಹಲ ಕೆರಳಿಸಿದ್ದ ಫೈನಲ್ ಪಂದ್ಯದಲ್ಲಿ ಸೆರೆನಾ ಹಾಲಿ ಚಾಂಪಿಯನ್ ರಷ್ಯಾದ ಮಾರಿಯಾ ಶರಪೋವಾ ಅವರನ್ನು 6-4, 6-4 ನೇರ ಸೆಟ್ ಗಳಿಂದ ಸೋಲಿಸಿ ಈ ಪ್ರಶಸ್ತಿಯನ್ನು ಗೆದ್ದುಕೊಂಡರು. ಸೆರೆನಾಗೆ ಇದು 16 ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ.
- 11 ವರ್ಷಗಳ ಹಿಂದೆ ಸೆರೆನಾ ತಮ್ಮ ಮೊದಲ ಫ್ರೆಂಚ್ ಓಪನ್ ಪ್ರಶಸ್ತಿಯನ್ನು ಗೆದ್ದಿದ್ದರು. ಮಾರಿಯಾ ಶರಪೋವಾಗೆ ಸೆರೆನಾ ವಿಲಿಯಮ್ಸ್ ವಿರುದ್ಧ ಇದು 10 ನೇ ಸೋಲು.

**ಬಾಬ್ ಅಂಡ್ ಮೈಕ್ ಬ್ರಯಾನ್ ಗೆ ಫ್ರೆಂಚ್ ಓಪನ್ ಡಬ್ಬಲ್ ಪ್ರಶಸ್ತಿ:**

- ಅಮೆರಿಕಾದ ಅವಳಿ ಸಹೋದರರಾದ ಬಾಬ್ ಮತ್ತು ಮೈಕ್ ಬ್ರಯಾನ್ ಜೋಡಿಯು ಫ್ರಾನ್ಸ್ ನ ಮೈಕಲ್ ಲೊದ್ರ ಮತ್ತು ನಿಕೊಲಸ್ ಮಹುತ್ ಜೋಡಿಯನ್ನು 6-4, 4-6, 7-6 ನೇರ ಸೆಟ್ ಗಳಿಂದ ಮಣಿಸುವ ಮೂಲಕ ಫ್ರೆಂಚ್ ಓಪನ್ ಡಬ್ಬಲ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿತು. ಬ್ರಯಾನ್ ಜೋಡಿ 2003 ರಲ್ಲಿ ಫ್ರೆಂಚ್ ಓಪನ್ ಡಬ್ಬಲ್ ಪ್ರಶಸ್ತಿಯನ್ನು ಗೆಲ್ಲಲು ಶಕ್ತವಾಗಿತ್ತು. ಆದರೆ 2005, 2006 ಮತ್ತು 2012 ರಲ್ಲಿ ಫೈನಲ್ ಪಂದ್ಯದಲ್ಲಿ ಸೋಲು ಕಂಡಿತ್ತು.

**ಫ್ರೆಂಚ್ ಓಪನ್ ಟೆನ್ನಿಸ್ ಟೂರ್ನಿ: ಪ್ರಶಸ್ತಿ ಗೆದ್ದ ನಡಾಲ್ ವಿಶ್ವ ದಾಖಲೆ**

"ಕಿಂಗ್ ಆಫ್ ಕ್ಲೇ" ಎಂದೇ ಖ್ಯಾತಿ ಪಡೆದಿರುವ ಸ್ಪೇನ್ ನ ರಾಫೆಲ್ ನಡಾಲ್ ಅವರು ಫ್ರೆಂಚ್ ಓಪನ್ ಟೆನ್ನಿಸ್ ನ ಪುರುಷರ ಸಿಂಗಲ್ಸ್ ನ ಫೈನಲ್ ಪಂದ್ಯದಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಇದು ನಡಾಲ್ ರವರಿಗೆ 8 ನೇ ಫ್ರೆಂಚ್ ಓಪನ್ ಟೆನ್ನಿಸ್ ಪ್ರಶಸ್ತಿ. ಈ ಮೂಲಕ ಒಂದೇ ಗ್ರ್ಯಾನ್ ಸ್ಲಾಮ್ ಟೂರ್ನಿಯಲ್ಲಿ ಇಷ್ಟು ಬಾರಿ ಜಯಿಸಿದ ವಿಶ್ವದ ಪ್ರಥಮ ಆಟಗಾರ ಎನಿಸಿದರು.

- ರಾಫೆಲ್ ಅವರದ್ದೇ ದೇಶದ ಆಟಗಾರರಾರ ಡೇವಿಡ್ ಫೆರರ್ ಅವರನ್ನು 6-3, 6-2, 6-3 ನೇರ ಸೆಟ್ ಗಳಿಂದ ಸೋಲಿಸಿದರು. ಈ ಮೂಲಕ ಸತತ ನಾಲ್ಕನೇ ಬಾರಿ ಮತ್ತು ಒಟ್ಟಾರೆ 8 ಬಾರಿ ಫ್ರೆಂಚ್ ಓಪನ್ ಟೆನ್ನಿಸ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡು ವಿಶ್ವ ದಾಖಲೆ ಬರೆದರು.

**ಫ್ರೆಂಚ್ ಓಪನ್ ಟೆನ್ನಿಸ್ ಇತರೆ ಪ್ರಶಸ್ತಿ ಪಡೆದವರ ವಿವರ**:

- **ಮಹಿಳೆಯರ ಡಬ್ಬಲ್ಸ್**: ರಷ್ಯಾದ ಎಲಿನಾ ವೆಸ್ನಿನಾ ಮತ್ತು ಕಟೆರಿನಾ ಮಕರೊವ ಜೋಡಿ ಮಹಿಳೆಯರ ಡಬ್ಬಲ್ಸ್ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಇಟಲಿಯ ಸರಾ ಇರಾನಿ ಮತ್ತು ರೊಬರ್ಟ ವಿಂಚಿ ಜೋಡಿಯನ್ನು ಮಣಿಸುವ ಮೂಲಕ ಈ ಸಾಧನೆಗೈದರು.
- **ಮಹಿಳೆಯರ ಸಿಂಗಲ್ಸ್:** ಅಮೆರಿಕಾದ ಸೆರೆನಾ ವಿಲಿಯಮ್ಸ್ ರಷ್ಯಾದ ಮರಿಯಾ ಶರಪೋವಾ ಅವರನ್ನು ಸೋಲಿಸಿ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ವಿಜೇತರಾದರು.
- **ಪುರುಷರ ಡಬ್ಬಲ್ಸ್:** ಬಾಬ್ ಮತ್ತು ಮೈಕ್ ಬ್ರಿಯಾನ್ ಜೋಡಿಯು ಫ್ರಾನ್ಸ್ ನ ಮೈಕಲ್ ಲೋದ್ರಾ ಹಾಗೂ ನಿಕೊಲಸ್ ಮಹುತ್ ಜೋಡಿಯನ್ನು ಪರಾಭವಗೊಳಿಸಿ ತಮ್ಮ 14 ನೇ ಡಬ್ಬಲ್ಸ್ ಪ್ರಶಸ್ತಿಯನ್ನು ಬಾಚಿಕೊಂಡಿತು.
- **ಮಿಕ್ಸಡ್ ಡಬ್ಬಲ್:** ಫ್ರಾನ್ಸಿಸೆಕ್ ಸೆರ್ಮಾಕ್ ಮತ್ತು ಲೂಸಿ ರಾಡೆಕ ಜೋಡಿ ಮಿಕ್ಸಡ್ ಡಬ್ಬಲ್ಸ್ ವಿಭಾಗದಲ್ಲಿ ವಿಜಯಿಯಾಯಿತು, ಡೆನಿಯಲ್ ನೆಸ್ಟರ್ ಮತ್ತು ಕ್ರಿಸ್ಟಿನಾ ಲಡೆನೊವಿಕ್ ಜೋಡಿಯ ವಿರುದ್ಧ ಗೆಲುವು ಸಾಧಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

**3 ನೇ ಚೀನಾ ಓಪನ್ ಬಾಕ್ಸಿಂಗ್ ಟೂರ್ನಮೆಂಟ್: ಮನಜಿಂತ್ ಸಿಂಗ್ ಗೆ ಬೆಳ್ಳಿ**

ಭಾರತದ ಉದಯೋನ್ಮುಖ ಬಾಕ್ಸರ್ ಮನಜೀತ್ ಸಿಂಗ್ ಅವರು ಚೀನಾದ ಗುಯಾಂಗ್ ನಲ್ಲಿ ನಡೆದ ಮೂರನೇ ಚೀನಾ ಓಪನ್ ಬಾಕ್ಸಿಂಗ್ ಟೂರ್ನಮೆಂಟ್ ನ 91 ಕೆಜಿ ವಿಭಾಗದಲ್ಲಿ ಭಾರತಕ್ಕೆ ಬೆಳ್ಳಿ ಪದಕವನ್ನು ತಂದುಕೊಟ್ಟರು. ಟೂರ್ನಿ ಉದ್ದಕ್ಕೂ ಅಮೋಘ ಪ್ರದರ್ಶನ ತೋರಿದ ಮಂಜಿತ್ ಅಂತಿಮ ಪಂದ್ಯದಲ್ಲಿ ಸ್ಥಳೀಯ ಬಾಕ್ಸರ್ ಅಕೆಫೀರ್ ಯೂಸುಫ್ ವಿರುದ್ಧ ಸೋತು ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡರು.

- 21 ಹರೆಯದ ಮಂಜೀತ್ ಸಿಂಗ್ ಚೊಚ್ಚಲ ಬಾರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನಾರ್ಹ ಸಾಧನೆ ತೋರಿದರು. ಈ ಟೂರ್ನಿಯಲ್ಲಿ ಫೈನಲ್ ಪಂದ್ಯವನ್ನು ಪ್ರವೇಶಿಸಿದ ಏಕೈಕ ಭಾರತೀಯ ಬಾಕ್ಸರ್ ಎನಿಸಿದರು

- ಭಾರತದ ಪುರುಷರ ತಂಡ ಈ ಟೂರ್ನಿಯಲ್ಲಿ ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳು ಸೇರಿದಂತೆ ಒಟ್ಟು ನಾಲ್ಕು ಪದಕಗಳನ್ನು ಗೆದ್ದುಕೊಂಡಿತ್ತು.
- ಸುನೀಲ್ ಕುಮಾರ್, ಅಜಯ್ ಕುಮಾರ್ ಮತ್ತು ಜೈದೀಪ್ ಕಂಚಿನ ಪದಕ ಗೆದ್ದ ಭಾರತದ ಬಾಕ್ಸರ್ ಗಳು.

**ಭಾರತಕ್ಕೆ ಒಲಿದ ಚಾಂಪಿಯನ್ಸ್ ಟ್ರೋಫಿ ಏಕದಿನ ಪ್ರಶಸ್ತಿ**

ಪ್ರತಿಷ್ಠಿತ ಚಾಂಪಿಯನ್ಸ್ ಟ್ರೋಫಿ ಏಕದಿನ ಪ್ರಶಸ್ತಿಯನ್ನು ತನ್ನದಾಗಿಸಿಕೊಳ್ಳುವ ಮೂಲಕ ಪ್ರಸಕ್ತ ವಿಶ್ವದಲ್ಲಿ ನಾವೇ ಸರ್ವ ಶ್ರೇಷ್ಠ ಎಂದು ಭಾರತ ಕ್ರಿಕೆಟ್ ತಂಡ ಮತ್ತೊಮ್ಮೆ ಸಾಬೀತು ಮಾಡಿತು. ಇಂಗ್ಲೆಂಡ್ ನ ಬರ್ಮಿಂಗ್ ಹ್ಯಾಮ್ ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ ತಂಡ ಇಂಗ್ಲೆಂಡ್ ತಂಡವನ್ನು ಸೋಲಿಸುವ ಮೂಲಕ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದುಕೊಂಡಿತ್ತು. ಈ ಮೂಲಕ ಭಾರತ ಕ್ರಿಕೆಟ್ ತಂಡದ ನಾಯಕ ಧೋನಿ ತಮ್ಮ ನಾಯಕತ್ವದಲ್ಲಿ ಚಾಂಪಿಯನ್ಸ್ ಟ್ರೋಫಿಯನ್ನು ಗೆಲ್ಲುವ ಕನಸನ್ನು ನನಸು ಮಾಡಿಕೊಂಡರು.

- ಕುತೂಹಲ ಮೂಡಿಸಿದ್ದ ಫೈನಲ್ ಪಂದ್ಯ ಮಳೆಯಿಂದಾಗಿ 20 ಓವರ್ ಗಳಿಗೆ ಕಡಿತಗೊಂಡಿತ್ತು. ಟಾಸ್ ಸೋತು ಮೊದಲು ಬ್ಯಾಟ್ ಮಾಡಲು ಆಮಂತ್ರಣ ಪಡೆದ ಭಾರತ 7 ವಿಕೆಟ್ ಕಳೆದುಕೊಂಡು 129 ರನ್ ಪೇರಿಸಿತು. ಸುಲಭ ಗುರಿ ಪಡೆದ ಇಂಗ್ಲೆಂಡ್ ತಂಡ 20 ಓವರ್ ಗಳಲ್ಲಿ 8 ವಿಕೆಟ್ ನಷ್ಟಕ್ಕೆ 124 ರನ್ ಗಳಿಸಲಷ್ಟೇ ಶಕ್ತವಾಗಿ 5 ರನ್ ಗಳಿಂದ ಸೋಲನ್ನು ಅನುಭವಿಸಿತ್ತು. ಸಮಯೋಚಿತ ಆಟ ಪ್ರದರ್ಶನ ಮಾಡಿದ ವಿರಾಟ್ ಕೊಹ್ಲಿ ಮತ್ತು ರವೀಂದ್ರ ಜಡೇಜಾ ಭಾರತಕ್ಕೆ ಆಸರೆಯಾದರು.
- 2002 ರಲ್ಲಿ ಭಾರತ ಮತ್ತು ಶ್ರೀಲಂಕಾ ಈ ಪ್ರಶಸ್ತಿಯನ್ನು ಜಂಟಿಯಾಗಿ ಹಂಚಿಕೊಂಡಿದ್ದವು.

**ಶಿಖರ್ ದವನ್ ಗೆ "ಗೋಲ್ಡನ್ ಬ್ಯಾಟ್":**

- ಭಾರತ ತಂಡದ ಆರಂಭಿಕ ಎಡಗೈ ಬ್ಯಾಟ್ಸ್ ಮನ್ ಶಿಖರ್ ಧವನ್ ಅವರು ಟೂರ್ನಿಯಲ್ಲಿ ಹೆಚ್ಚು ರನ್ ಗಳಿಸಿದ ಕಾರಣ "ಗೋಲ್ಡನ್ ಬ್ಯಾಟ್" ಪಡೆದುಕೊಂಡರು. ಧವನ್ ಐದು ಪಂದ್ಯಗಳಿಂದ ಎರಡು ಶತಕ ಮತ್ತು ಒಂದು ಅರ್ಧ ಶತಕದ ನೆರವಿನಿಂದ 90.75 ಸರಾಸರಿಯಲ್ಲಿ 363 ರನ್ ಗಳನ್ನು ಪೇರಿಸಿದ್ದಾರೆ.

**ಜಡೇಜಾ ಗೆ "ಗೋಲ್ಡನ್ ಬಾಲ್"**:

- ಟೂರ್ನಿಯಲ್ಲಿ ಒಟ್ಟು 12 ವಿಕೆಟ್ ಪಡೆದು ಮುಂದಿರುವ ಭಾರತದ ಆಲ್ ರೌಂಡರ್ ಆಟಗಾರ ರವೀಂದ್ರ ಜಡೇಜಾ ಅವರು "ಗೋಲ್ಡನ್ ಬಾಲ್" ಪ್ರಶಸ್ತಿಗೆ ಪಾತ್ರರಾದರು.

**ಬಿಸಿಸಿಐ ನಿಂದ 1 ಕೋಟಿ:**

- ಚಾಂಪಿಯನ್ಸ್ ಟ್ರೋಫಿ ಗೆಲುವಿನಿಂದ ಬೀಗುತ್ತಿರುವ ಭಾರತ ತಂಡದ ಆಟಗಾರರಿಗೆ ತಲಾ 1 ಕೋಟಿಯನ್ನು ಬಹುಮಾನವಾಗಿ ಬಿಸಿಸಿಐ ಘೋಷಿಸಿದೆ.

**ಐಸಿಸಿ ಚಾಂಪಿಯನ್ಸ್ ಟ್ರೋಫಿ**:

- ವಿಶ್ವಕಪ್ ಕ್ರಿಕೆಟ್ ನಂತರ ಅತ್ಯಂತ ಮಹತ್ವವುಳ್ಳ ಕ್ರಿಕೆಟ್ ಟೂರ್ನಿಯಾದ ಚಾಂಪಿಯನ್ಸ್ ಟ್ರೋಫಿಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ಆಯೋಜಿಸುತ್ತದೆ.
- ಪ್ರಥಮ ಬಾರಿಗೆ 1998 ರಲ್ಲಿ ಈ ಟೂರ್ನಿಯನ್ನು ಆಯೋಜಿಸಲಾಗಿತ್ತು. ಆಗ ಇದನ್ನು ಐಸಿಸಿ ನಾಕ್ ಔಟ್ ಟೂರ್ನಮೆಂಟ್ ಎನ್ನಲಾಗುತ್ತಿತ್ತು. ಬಳಿಕ 2002 ರಲ್ಲಿ ಇದಕ್ಕೆ ಐಸಿಸಿ ಚಾಂಪಿಯನ್ಸ್ ಟೋಫಿಯೆಂದು ನಾಮಕರಣ ಮಾಡಲಾಯಿತು.

- 2009 ಈ ಟೂರ್ನಿಯಲ್ಲಿ ಭಾಗವಹಿಸುವ ತಂಡಗಳ ಸಂಖ್ಯೆಯನ್ನು 8 ತಂಡಗಳಿಗೆ ಸೀಮಿತಗೊಳಿಸಲಾಯಿತು. ಅಂತರರಾಷ್ಟ್ರೀಯ ಕ್ರಿಕೆಟ್ ಶ್ರೇಣಿಯಲ್ಲಿ ಮೊದಲ 8 ಸ್ಥಾನದಲ್ಲಿರುವ ತಂಡಗಳು ಮಾತ್ರ ಭಾಗವಹಿಸಲು ಅರ್ಹತೆಯನ್ನು ಹೊಂದಿವೆ.
- 2013 ರ ಚಾಂಪಿಯನ್ಸ್ ಪಂದ್ಯಾವಳಿಗಳು 7 ನೇ ಮತ್ತು ಕೊನೆಯ ಏಕದಿನ ಪಂದ್ಯಾವಳಿ ಎನಿಸಿದೆ. ಏಕೆಂದರೆ 2017 ರಿಂದ ಇದನ್ನು ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್ ಷಿಪ್ ಆಗಿ ಆಯೋಜಿಸಲು ತೀರ್ಮಾನಿಸಲಾಗಿದೆ

**ಪ್ರಶಸ್ತಿ ಗೆದ್ದ ತಂಡಗಳು**: ದಕ್ಷಿಣ ಆಫ್ರಿಕಾ (1998), ನ್ಯೂಜಿಲ್ಯಾಂಡ್ (2000), ಭಾರತ ಮತ್ತು ಶ್ರೀಲಂಕಾ (2002), ವೆಸ್ಟ್ ಇಂಡೀಸ್ (2004), ಆಸ್ಟ್ರೇಲಿಯಾ (2006, 2008), ಭಾರತ (2013).

**ಸಿಂಗಾಪುರ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್: ಟಾಮಿ, ವಾಂಗ್ ಗೆ ಪ್ರಶಸ್ತಿ**

ಅದ್ಭುತ ಪ್ರದರ್ಶನ ತೋರಿದ ಇಂಡೋನೇಷಿಯಾದ ಟಾಮಿ ಸುಗಿಯರ್ತೊ ಅವರು ಸಿಂಗಪುರ ಓಪನ್ ಸೂಪರ್ ಸರಣಿಯ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ವಿಭಾಗದ ಫೈನಲ್ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು.

- ಫೈನಲ್ ಪಂದ್ಯದಲ್ಲಿ ಸುಗಿಯರ್ತೊ 20-22, 21-16, 21-17 ರಲ್ಲಿ ಥಾಯ್ಲೆಂಡ್ ನ ಬೂನ್ಸಕ್ ಪೋನ್ಸಾನರವರನ್ನು ಮಣಿಸುವ ಮೂಲಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಕಳೆದ ಬಾರಿ ಪೋನ್ಸಾನ ಅವರು ಈ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದಾರೆ.

**ವಾಂಗ್ ಯಿಹಾನ್ ಗೆ ಪ್ರಶಸ್ತಿ**

- ಮಹಿಳೆಯರ ವಿಭಾಗದ ಫೈನಲ್ ಪಂದ್ಯದಲ್ಲಿ ಚೀನಾದ ವಾಂಗ್ ಯಿಹಾನ್ ಪ್ರಶಸ್ತಿಯನ್ನು ಪಡೆದುಕೊಂಡರು. ಫೈನಲ್ ಪಂದ್ಯದಲ್ಲಿ ವಾಂಗ್ 21-18, 21-12 ರಲ್ಲಿ ಚೀನಾದವರೇ ಆದ ಲೀ ಕುಯ್ಸಿರುಯಿ ಎದುರು ಜಯಗಳಿಸುವ ಮೂಲಕ ಪ್ರಶಸ್ತಿಗೆ ಭಾಜನರಾದರು.

**2016 ಟಿ20 ವಿಶ್ವಕಪ್ ಕ್ರಿಕೆಟ್ ಆತಿಥ್ಯವಹಿಸಿಕೊಳ್ಳಲಿರುವ ಭಾರತ**

2015 ರಿಂದ ಎಂಟು ವರ್ಷಗಳ ಕಾಲ ನಡೆಯುವ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಪ್ರಮುಖ ಪಂದ್ಯಾವಳಿಗಳ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು, ಭಾರತ ಪ್ರಮುಖವಾದ ಮೂರು ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳ ಆತಿಥ್ಯವನ್ನು ವಹಿಸಿಕೊಳ್ಳಲಿದೆ. ಇತ್ತೀಚೆಗೆ ನಡೆದ ಐಸಿಸಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ.

- ಐಸಿಸಿ ನಿರ್ಣಯದಂತೆ ಭಾರತ 2016 ರಲ್ಲಿ ಮೊದಲ ಬಾರಿಗೆ ಟಿ20 ವಿಶ್ವಕಪ್, 2021 ರ ಎರಡನೇ ಟೆಸ್ಟ್ ಚಾಂಪಿಯನ್ ಶಿಪ್ ಮತ್ತು 2023 ರಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಗಳ ಆತಿಥ್ಯವನ್ನು ವಹಿಸಿಕೊಳ್ಳಲಿದೆ.
- ಇದುವರೆಗೂ ನಡೆಸಲಾಗುತ್ತಿದ್ದ ಐಸಿಸಿ ಅಂತರರಾಷ್ಟ್ರೀಯ ಏಕದಿನ ಚಾಂಪಿಯನ್ ಟ್ರೋಫಿಯನ್ನು 2017 ರಿಂದ ಅಂತರರಾಷ್ಟ್ರೀಯ ಟೆಸ್ಟ್ ಚಾಂಪಿಯನ್ ಶಿಪ್ ಆಗಿ ನಡೆಸಲಿದ್ದು, ಮೊದಲ ಅಂತರರಾಷ್ಟ್ರೀಯ ಟೆಸ್ಟ್ ಚಾಂಪಿಯನ್ ಶಿಪ್ ನ ಆತಿಥ್ಯವನ್ನು ಇಂಗ್ಲೆಂಡ್ ಗೆ ನೀಡಲಾಗಿದೆ.

**ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ಸದಸ್ಯತ್ವ ಸ್ಥಾನ ಪಡೆದ ಆಫ್ಘಾನಿಸ್ತಾನ**

ಕ್ರಿಕೆಟ್ ಲೋಕಕ್ಕೆ ಅಂಬೆಗಾಲಿಡಿರುತ್ತಿರುವ ಆಫ್ಘಾನಿಸ್ತಾನ ಕೊನೆಗೂ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ)ಯ ಅಸೋಸಿಯೇಟ್ ಸದಸ್ಯತ್ವ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಇಂಗ್ಲೆಂಡ್ ನಲ್ಲಿ ಇತ್ತೀಚೆಗೆ ನಡೆದ ಐಸಿಸಿಯ ವಾರ್ಷಿಕ ಸಭೆಯಲ್ಲಿ ಈ

ನಿರ್ಣಯವನ್ನು ತೆಗೆದುಕೊಳ್ಳಲಾಗಿದ್ದು, ಕಡಿಮೆ ಅವಧಿಯಲ್ಲಿ ಐಸಿಸಿ ಸದಸ್ಯತ್ವ ಸ್ಥಾನ ಪಡೆದ ಹೆಗ್ಗಳಿಕೆಗೆ ಆಫ್ಘಾನಿಸ್ತಾನ ಭಾಜನವಾಗಿದೆ. ಆಫ್ಘಾನಿಸ್ತಾನಕ್ಕೆ ಅಸೋಸಿಯೇಟ್ ಸದಸ್ಯ ಸ್ಥಾನವನ್ನು ನೀಡುವಂತೆ ಏಷ್ಯನ್ ಕ್ರಿಕೆಟ್ ಮಂಡಳಿ ಐಸಿಸಿಗೆ ಪ್ರಸ್ತಾವನೆಯನ್ನು ಸಲ್ಲಿಸಿತ್ತು.

- ಈ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಅಸೋಸಿಯೇಟ್ ಸದಸ್ಯತ್ವ ಸ್ಥಾನ ಪಡೆದ 37 ನೇ ಮತ್ತು ಏಷ್ಯಾ ವಲಯದ 8 ನೇ ರಾಷ್ಟ್ರ ಆಫ್ಘಾನಿಸ್ತಾನ. ಈ ಹಿಂದೆ ಹಾಂಕ್ ಕಾಂಗ್ (1969), ಕುವೈತ್ (2005), ಮಲೇಷಿಯಾ (1967), ನೇಪಾಳ (1996), ಸಿಂಗಾಪುರ (1974), ಥಾಯ್ ಲ್ಯಾಂಡ್ (2005) ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ (1990) ಐಸಿಸಿಯ ಅಸೋಸಿಯೇಟ್ ಸದಸ್ಯತ್ವ ಪಡೆದ ಇತರೆ ಏಷ್ಯಾ ವಲಯದ ರಾಷ್ಟ್ರಗಳು.
- 2001 ರಲ್ಲಿ ಪಾಕಿಸ್ತಾನ ವಿರುದ್ಧ ನಡೆದ ಕ್ರಿಕೆಟ್ ಟೂರ್ನಿಯಲ್ಲಿ ಆಫ್ಘಾನಿಸ್ತಾನ ಭಾಗವಹಿಸುವ ಮೂಲಕ ಐಸಿಸಿಯ ಪ್ರಾಥಮಿಕ ಸ್ಥಾನವನ್ನು ಆಫ್ಘಾನಿಸ್ತಾನ ಪಡೆದುಕೊಂಡಿತ್ತು.
- ಐಸಿಸಿಯ ಅಸೋಸಿಯೇಟ್ ಸದಸ್ಯತ್ವ ಪಡೆದಿರುವ ಹಿನ್ನಲೆಯಲ್ಲಿ ಐಸಿಸಿ ಯಿಂದ ಆಫ್ಘಾನಿಸ್ತಾನಕ್ಕೆ ವಾರ್ಷಿಕವಾಗಿ ನೀಡಲಾಗುತ್ತಿರುವ ಆರ್ಥಿಕ ಸಹಾಯದಲ್ಲಿ ಗಣನೀಯವಾಗಿ ಹೆಚ್ಚಳ ಆಗಲಿದೆ. ಅಲ್ಲದೇ ಕ್ರಿಕೆಟ್ ಲೋಕದಲ್ಲಿ ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲು ಆಫ್ಘಾನಿಸ್ತಾನಕ್ಕೆ ಅನುಕೂಲವಾಗಲಿದೆ.

## ಸುದ್ದಿಯಲ್ಲಿರುವ ವ್ಯಕ್ತಿಗಳು

**DRDO ನೂತನ ಮುಖ್ಯಸ್ಥರಾಗಿ "ಅವಿನಾಶ್ ಚಂದರ್"**

"ಅಗ್ನಿ" ದೂರಗಾಮಿ ಕ್ಷಿಪಣಿ ಕಾರ್ಯಕ್ರಮದ ರೂವಾರಿ ಎನಿಸಿರುವ ಖ್ಯಾತ ವಿಜ್ಞಾನಿ ಅವಿನಾಶ್ ಚಂದರ್ ರವರನ್ನು "ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)" ಯ ನೂತನ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಚಂದರ್ ರವರು ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರಾಗಿಯೂ ಸೇವೆ ಸಲ್ಲಿಸಲ್ಲಿದ್ದಾರೆ.

"ಅವಿನಾಶ್ ಚಂದರ್":

- ಐಐಟಿ ದೆಹಲಿ ಯಿಂದ ಎಲೆಕ್ಟ್ರಿಕಲ್ ಎಂಜನಿಯರ್ ನಲ್ಲಿ ಪದವಿ ಹಾಗೂ ಹೈದ್ರಾಬಾದ್ ನ "ಜವಹಾರ್ ಲಾಲ್ ತಂತ್ರಜ್ಞಾನ ವಿಶ್ವವಿದ್ಯಾಲಯದಿಂದ ಬಾಹ್ಯಕಾಶ ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಸ್ನಾತ್ತಕೋತ್ತರ ಪದವಿಯನ್ನು ಪಡೆದಿರುವ ಚಂದರ್ ರವರು 1972 ರಲ್ಲಿ DRDO ಗೆ ಸೇರ್ಪಡೆಗೊಂಡರು.
- ಅಗ್ನಿ ಕ್ಷಿಪಣಿ ಅಭಿವೃದ್ದಿಗೆ ಸಂಬಂಧಿಸಿದಂತೆ ಮೂಲ ಸೌಕರ್ಯ ಹಾಗೂ ತಂತ್ರಜ್ಞಾನ ಒದಗಿಸುವಲ್ಲಿ ಚಂದರ್ ರವರು ಪ್ರಮುಖ ಪಾತ್ರವಹಿಸಿದ್ದರು. ಅಷ್ಟೇ ಅಲ್ಲದೇ ಬ್ರಹ್ಮೋಸ್ ಮತ್ತು ನಾಗ್ ನಂತಹ ಕ್ಷಿಪಣಿ ಅಭಿವೃದ್ದಿಯಲ್ಲೂ ಮುಂಚೂಣಿಯಲ್ಲಿದ್ದಾರೆ.
- ಚಂದರ್ ರವರು ಉತ್ಕೃಷ್ಟ ಕ್ಷಿಪಣಿ ವಿಜ್ಞಾನಿ, ಅಗ್ನಿ ದೂರಗಾಮಿ ಕ್ಷಿಪಣಿಯ ಮುಖ್ಯ ಶಿಲ್ಪಿ. ಇವರ ಕಲ್ಪನೆ ಮತ್ತು ದೂರದೃಷ್ಟಿಯ ಫಲವಾಗಿ ಅಗ್ನಿ ಕ್ಷಿಪಣಿ ವ್ಯವಸ್ಥೆಗಳ (ಅಗ್ನಿ I, ಅಗ್ನಿ II, ಅಗ್ನಿ III, ಅಗ್ನಿ IV ಮತ್ತು ಅಗ್ನಿ V) ವಿನ್ಯಾಸ ಸಕಾರಗೊಂಡಿತು. ಅಗ್ನಿ-V ಕ್ಷಿಪಣಿಯು 5000 ಕಿ.ಮೀ ವ್ಯಾಪ್ತಿಯನ್ನು ಕ್ರಮಿಸುವ ಸಾಮರ್ಥ್ಯವನ್ನು ಹೊಂದಿದ್ದು, ಇಂತಹ ಕ್ಷಿಪಣಿ ವ್ಯವಸ್ಥೆ ಹೊಂದಿರುವ ವಿಶ್ವದ ಐದು ರಾಷ್ಟ್ರಗಳಲ್ಲಿ ಭಾರತ ಸಹ ಒಂದು ಎನಿಸಿದೆ.
- ಚಂದರ್ ರವರು ಜೂನ್ 1, 2013 ರಿಂದ ಅಧಿಕಾರವಹಿಸಿಕೊಳ್ಳಲಿದ್ದು, ಮುಂದಿನ ಮೂರು ವರ್ಷಗಳ ಕಾಲ ಅಧಿಕಾರದಲ್ಲಿರುವರು.

**CBDT ಮುಖ್ಯಸ್ಥರಾಗಿ ಸುಧಾ ಶರ್ಮಾ ನೇಮಕ**

"ಕೇಂದ್ರೀಯ ನೇರ ತೆರಿಗೆ ಮಂಡಳಿ (Central Board of Direct Tax)"ಯ ಮುಖ್ಯಸ್ಥರಾಗಿ 1976 ನೇ ಬ್ಯಾಚ್ ನ IRS ಅಧಿಕಾರಿ ಸುಧಾ ಶರ್ಮಾ ಅವರನ್ನು ನೇಮಕ ಮಾಡಲಾಗಿದೆ. ಇದುವರೆಗೂ ಮಂಡಳಿಯ ಮುಖ್ಯಸ್ಥರಾಗಿದ್ದ "ಪಿ.ಕೆ.ಸಕ್ಸೇನಾ" ರವರು ಮೇ 31 ರಂದು ನಿವೃತ್ತಿ ಹೊಂದಿದ ಕಾರಣ ಈ ಹುದ್ದೆ ತೆರವಾಗಿತ್ತು. CBDT ಯ ಕಾನೂನು ಮತ್ತು ಗಣಕೀಕೃತ ವಿಭಾಗದಲ್ಲಿ ಸುಧಾ ಶರ್ಮಾರವರು ಕಾರ್ಯನಿರ್ವಹಿಸುತ್ತಿದ್ದರು.

**CBDT:**

- ಹಣಕಾಸು ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಒಂದು ವಿಭಾಗ. CBDT ಒಂದು ಶಾಸನಬದ್ದ ಸಂಸ್ಥೆಯಾಗಿದ್ದು, "ಸೆಂಟ್ರಲ್ ಬೋರ್ಡ್ ಆಫ್ ರೆವಿನ್ಯೂ ಆಕ್ಟ್, 1963" ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.
- ನೇರ ತೆರಿಗೆಗೆ ಸಂಬಂಧಿಸಿದಂತೆ ನೀತಿ ಮತ್ತು ನಿಯಮಗಳನ್ನು ಜಾರಿಗೊಳಿಸುವುದು ಹಾಗೂ ನೇರ ತೆರಿಗೆಗೆ ಸಂಬಂಧಿಸಿದ ಕಾನೂನನ್ನು ಆದಾಯ ತೆರಿಗೆ ಇಲಾಖೆಯ ಮೂಲಕ ಸಮರ್ಪಕವಾಗಿ ಅನುಷ್ಟಾನಗೊಳಿಸುವುದು ಇದರ ಮುಖ್ಯ ಕಾರ್ಯ.
- CDBT ಯೂ ಒಬ್ಬ ಮುಖ್ಯಸ್ಥ ಹಾಗೂ ಆರು ಜನ ಸದಸ್ಯರನ್ನು ಒಳಗೊಂಡಿರುತ್ತದೆ. ಮಂಡಳಿಯ ಮುಖ್ಯಸ್ಥರನ್ನು "ಭಾರತೀಯ ಕಂದಾಯ ಸೇವೆ (IRS)" ಯಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಆಯ್ಕೆಮಾಡಲಾಗುವುದು. ಉಳಿದಂತೆ ಸದಸ್ಯರನ್ನು ವಿವಿಧ ಇಲಾಖೆಗಳಿಂದ ಆರಿಸಲಾಗುವುದು.

**ಥಾಮಸ್ ಮ್ಯಾಥ್ಯೂ: ಜೀವ ವಿಮಾ ನಿಗಮ (LIC)ದ ನೂತನ ಚೇರಮನ್**

ಭಾರತೀಯ ಜೀವ ವಿಮಾ ನಿಗಮದ ಮುಖ್ಯಸ್ಥರಾಗಿ “ಥಾಮಸ್ ಮ್ಯಾಥ್ಯೂ” ರವರನ್ನು ಸರ್ಕಾರ ನೇಮಿಸಿದೆ. ಡಿ.ಕೆ. ಮಲ್ಹೋತ್ರರವರ ಅಧಿಕಾರ ಅವಧಿ ಮೇ 31 ರಂದು ಮುಗಿದ ಹಿನ್ನೆಲೆಯಲ್ಲಿ ಮ್ಯಾಥ್ಯೂ ಅವರನ್ನು LIC ಯ ಮುಖ್ಯಸ್ಥರಾಗಿ ನೇಮಿಸಲಾಗಿದೆ.

- ಅರ್ಥಶಾಸ್ತ್ರ ವಿಷಯದಲ್ಲಿ ಸ್ನಾತ್ತಕೋತ್ತರ ಪದವಿಧರರಾಗಿರುವ ಮ್ಯಾಥ್ಯೂ ರವರು ಕಾನೂನು ವಿಷಯದಲ್ಲೂ ಪದವಿಯನ್ನು ಪಡೆದಿದ್ದಾರೆ.
- ಮ್ಯಾಥ್ಯೂ ರವರು ಜೀವ ವಿಮಾ ವಿಭಾಗದಲ್ಲಿ 30 ವರ್ಷಗಳಿಗಿಂತಲೂ ಹೆಚ್ಚು ಅನುಭವವನ್ನು ಹೊಂದಿದ್ದು, 2006 ರಿಂದ LIC ಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.
- ಇದೇ ವೇಳೆ ಆರ್.ಕೆ. ರಾಯ್ ರವರನ್ನು LIC ಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

**ಪಾಕಿಸ್ತಾನ ಸಂಸತ್ತಿನ ನೂತನ ಸ್ಪೀಕರ್ ಆಗಿ “ಅಯಾಝ್ ಸಾದಿಕ್”**

ಪಾಕಿಸ್ತಾನ ಮುಸ್ಲಿಂ ಲೀಗ್-ನವಾಝ್ (PML-N) ಪಕ್ಷದ ಹಿರಿಯ ನಾಯಕ “ಅಯಾಝ್ ಸಾದಿಕ್” ರವರು ಪಾಕಿಸ್ತಾನ ಸಂಸತ್ತಿನ ನೂತನ ಸ್ಪೀಕರ್ ಆಗಿ ಆಯ್ಕೆಯಾದರು. ಜೂನ್ 3 ರಂದು ಸ್ಪೀಕರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಭಾರಿ ಮತಗಳ ಅಂತರದಿಂದ ಸಾದಿಕ್ ಅವರು ಗೆಲುವು ಪಡೆದುಕೊಂಡರು. ಚಲಾವಣೆಗೊಂಡ ಒಟ್ಟು 313 ಮತಗಳಲ್ಲಿ ಸಾದಿಕ್ ರವರು 258 ಮತಗಳನ್ನು ಪಡೆದುಕೊಳ್ಳುವ ಮೂಲಕ ಪಾಕಿಸ್ತಾನದ 19 ನೇ ಸ್ಪೀಕರ್ ಆಗಿ ನೇಮಕಗೊಂಡರು.

- ಸಾದಿಕ್ ಅವರ ಪ್ರತಿಸ್ಪರ್ಧಿ ತೆರಿಕ್-ಇ-ಇನ್ಸಾಫ್ ಪಕ್ಷದ ಅಭ್ಯರ್ಥಿ “ಶಹರಿಯಾರ್ ಆಫ್ರಿದಿ” ಕೇವಲ 31 ಮತಗಳನ್ನು ಪಡೆದುಕೊಂಡರೆ, ಮತ್ತೊಬ್ಬ ಪ್ರತಿಸ್ಪರ್ಧಿ ಎಸ್.ಎ.ಇಕ್ಬಲ್ ಖಾದ್ರಿ ರವರು 23 ಮತಗಳನ್ನು ಪಡೆದುಕೊಳ್ಳಲು ಯಶಸ್ವಿಯಾದರು.
- ಸ್ಪೀಕರ್ ಸ್ಥಾನದಿಂದ ಕೆಳಗಿಳಿಯುತ್ತಿರುವ ಪಾಕಿಸ್ತಾನದ ಮೊದಲ ಮಹಿಳಾ ಸ್ಪೀಕರ್ ಎಂಬ ಖ್ಯಾತಿಗೆ ಪಾತ್ರರಾಗಿರುವ “ಫೆಹ್ಮಿದಾ ಮಿರ್ಜಾ” ರವರು ಸಾಧಿಕ್ ರವರಿಗೆ ಪ್ರಮಾಣ ವಚನ ಬೋಧಿಸಿದರು.
- 59 ವರ್ಷ ಹರೆಯದ ಸಾದಿಕ್ 2002 ರಿಂದ ಮೂರು ಬಾರಿ ಸಂಸತ್ತಿಗೆ ಆಯ್ಕೆಯಾಗಿದ್ದಾರೆ.

**ಪ್ಯಾಲೇಸ್ತಾನ್ ನೂತನ ಪ್ರಧಾನಿಯಾಗಿ “ರಮಿ ಹಮ್ದಲ್ಲಾ (Rami Hamdallah)**

ಪ್ಯಾಲೇಸ್ತಾನ್ ಅಧ್ಯಕ್ಷ ಮಹಮೂದ್ ಅಬ್ಬಾಸ್ ರವರು ಶಿಕ್ಷಣ ತಜ್ಞ ಮತ್ತು ಫತಾಃ ಪಕ್ಷದ ಸದಸ್ಯ “ರಮಿ ಹಮ್ದಲ್ಲಾ” ರವರನ್ನು ಪ್ಯಾಲೇಸ್ತಾನ್ ನ ನೂತನ ಪ್ರಧಾನಿಯಾಗಿ ನೇಮಕ ಮಾಡಿದ್ದು, ಹೊಸ ಸರ್ಕಾರ ರಚಿಸುವಂತೆ ಸೂಚಿಸಿದ್ದಾರೆ. ಹಮ್ದಲ್ಲಾ ರವರು ಪ್ಯಾಲೇಸ್ತಾನ್ ಚುನಾವಣಾ ಆಯೋಗದ ಮುಖ್ಯಸ್ಥರೂ ಆಗಿರಲ್ಲಿದ್ದಾರೆ.

- ಪ್ಯಾಲೇಸ್ತಾನ ಹಂಗಾಮಿ ಪ್ರಧಾನಿಯಾಗಿದ್ದ “’ಸಲಾಂ ಫಯ್ಯದ್’” ರವರು ಏಪ್ರಿಲ್ 13 ರಂದು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಅಬ್ಬಾಸ್ ಮತ್ತು ಫಯ್ಯದ್ ನಡುವೆ ಮೂಡಿದ್ದ ಭಿನ್ನಭಿಪ್ರಾಯದ ಹಿನ್ನಲೆಯಲ್ಲಿ ಫಯ್ಯದ್ ರವರು ರಾಜೀನಾಮೆ ನೀಡಿದ್ದರು.
- ಪ್ಯಾಲೇಸ್ತಾನ್ ಕಾನೂನಿ ಪ್ರಕಾರ ಸರ್ಕಾರ ರಚಿಸುವ ಜವಾಬ್ದಾರಿಯನ್ನು ಹೊತ್ತುಕೊಂಡವರು ಮೂರು ವಾರದೊಳಗೆ ಸರ್ಕಾರವನ್ನು ರಚಿಸಬೇಕು. ಆಕಸ್ಮಾತ್ ಯಾವುದಾದರೂ ಕಾರಣಗಳಿಂದ ಸರ್ಕಾರ ರಚನೆಯಾಗದಿದ್ದರೆ ಮತ್ತೆ ಎರಡು ವಾರ ಕಾಲಾವಕಾಶವನ್ನು ನೀಡಲಾಗುವುದು.

**ಪಾಕಿಸ್ತಾನದ ಪ್ರಧಾನಿಯಾಗಿ "ನವಾಜ್ ಷರೀಫ್" ಅಧಿಕಾರ ಸ್ವೀಕಾರ**

"ಪಾಕಿಸ್ತಾನ್ ಮುಸ್ಲಿಂ ಲೀಗ್-ಎನ್" ಪಕ್ಷದ ಮುಖ್ಯಸ್ಥ ನವಾಜ್ ಷರೀಫ್ ಅವರು ಮೂರನೇ ಬಾರಿಗೆ ಪಾಕಿಸ್ತಾನದ ಪ್ರಧಾನಿಯಾಗಿ ಆಯ್ಕೆಗೊಂಡರು. ಈ ಮೂಲಕ ಮೂರನೇ ಬಾರಿಗೆ ಪ್ರಧಾನಿಯಾಗಿ ನೇಮಕಗೊಂಡ ಮೊದಲ ವ್ಯಕ್ತಿ "ನವಾಜ್ ಷರೀಫ್" ಎಂಬ ಹಿರಿಮೆಗೆ ಪಾತ್ರರಾದರು.

- ಪ್ರಧಾನಿ ಆಯ್ಕೆ ಸಂಬಂಧ ಪಾಕಿಸ್ತಾನ ರಾಷ್ಟ್ರೀಯ ಸಂಸತ್ತಿನಲ್ಲಿ ನಡೆದ ಮತದಾನದಲ್ಲಿ ಒಟ್ಟು 341 ಮತಗಳ ಪೈಕಿ ಷರೀಫ್ 244 ಮತಗಳನ್ನು ಪಡೆದರು. ಜಮಾತ್-ಎ-ಇಸ್ಲಾಮಿ, ಎಂಕ್ಯೂಎಂ, ಜೆಯುಐ-ಎಫ್ ಸೇರಿದಂತೆ ಪ್ರಮುಖ ಪಕ್ಷಗಳು ಷರೀಫ್ ಅವರನ್ನು ಬೆಂಬಲಿಸಿದವು.

**ನವಾಜ್ ಷರೀಫ್**:

- 1949 ರಲ್ಲಿ ಲಾಹೋರ್ ನ ಶ್ರೀಮಂತ ಕುಟುಂಬದಲ್ಲಿ ಜನನ. ಪಂಜಾಬ್ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದ ನಂತರ ಉಕ್ಕು ಕಂಪನಿಯಲ್ಲಿ ಕೆಲಸಕ್ಕೆ ಸೇರ್ಪಡೆಗೊಂಡರು.
- ಬಳಿಕ ರಾಜಕೀಯ ಸೇರ್ಪಡೆಗೊಂಡ ಅವರು "ಜಿಯಾ ಉಲ್ ಹಕ್" ಅವಧಿಯಲ್ಲಿ ಹಣಕಾಸು ಸಚಿವರಾಗಿ ಮತ್ತು 1985 ರಿಂದ 1990 ರವರೆಗೆ ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿ ಸೇವೆಸಲ್ಲಿಸಿದರು.
- 1990-93 ಹಾಗೂ 1997-99 ರಲ್ಲಿ ಎರಡು ಬಾರಿ ಪ್ರಧಾನಿಯಾಗಿ ನೇಮಕಗೊಂಡಿದ್ದರು. ಆದರೆ 1999 ರಲ್ಲಿ ನಡೆದ ಸೇನಾ ಕ್ಷಿಪ್ರ ಕ್ರಾಂತಿಯಲ್ಲಿ ಅಧಿಕಾರದಿಂದ ಬಲವಂತವಾಗಿ ಕೆಳಗಿಳಿದ ಷರೀಫ್ ಏಳು ವರ್ಷಗಳ ಕಾಲ ಸೌದಿ ಅರೇಬೀಯಾದಲ್ಲಿ ನೆಲೆಕಂಡುಕೊಂಡಿದ್ದರು. 2007 ರಲ್ಲಿ ಪಾಕಿಸ್ತಾನಕ್ಕೆ ಹಿಂತಿರುಗಿದ ಮೇಲೆ ಮತ್ತೆ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರು.

**ಒಬಾಮ ರವರ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಸುಸಾನ್ ರೈಸ್ ನೇಮಕ**

ವಿಶ್ವಸಂಸ್ಥೆಯ ಅಮೆರಿಕಾದ ಪ್ರತಿನಿಧಿಯಾಗಿರುವ ಸುಸಾನ್ ರೈಸ್ ರವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನಾಗಿ ಅಧ್ಯಕ್ಷ ಬರಾಕ್ ಒಬಾಮ ನೇಮಕ ಮಾಡಿದ್ದಾರೆ. ಇದೇ ವೇಳೆ ವಿಶ್ವಸಂಸ್ಥೆಯ ಅಮೆರಿಕಾದ ಪ್ರತಿನಿಧಿಯಾಗಿ "ಸಮಂತಾ ಪವರ್" ಅವರನ್ನು ನೇಮಿಸಲಾಗಿದೆ.

- ಸುಸಾನ್ ರೈಸ್ ರವರು ಟಾಮ್ ಡಾನ್ಲಿನ್ ಅವರ ರಾಜೀನಾಮೆಯಿಂದ ತೆರವಾಗಲಿರುವ ಸ್ಥಾನವನ್ನು ತುಂಬಲಿದ್ದಾರೆ. ಜುಲೈ ಆರಂಭದಲ್ಲಿ 58 ವರ್ಷದ ಟಾಮ್ ಡಾನ್ಲಿನ್ ರವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಹುದ್ದೆಯಿಂದ ಕೆಳಗಿಳಿಯಲಿದ್ದಾರೆ.
- ಭಾರತದೊಂದಿಗಿನ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಸುಸಾನ್ ರೈಸ್ ಅವರು ಹೆಚ್ಚಿನ ಆಸಕ್ತಿಯನ್ನು ತೋರುತ್ತಾ ಬಂದಿದ್ದು, ವಿಶ್ವಸಂಸ್ಥೆಯ ಭಾರತದ ಪ್ರತಿನಿಧಿಯಾಗಿದ್ದ ಹರದೀಪ್ ಸಿಂಗ್ ಅವರೊಂದಿಗೆ ಉತ್ತಮ ಭಾಂದವ್ಯವನ್ನು ಹೊಂದಿದ್ದರು.

**ಭಾರತೀಯ ಬ್ಯಾಂಕ್ ಸಂಘಟನೆ ಅಧ್ಯಕ್ಷರಾಗಿ ಕೆ.ವಿ.ಕಾಮತ್ ಪುನರ್ ಆಯ್ಕೆ**

ಪಂಜಾಬ್ ನ್ಯಾಷನಲ್ ಬ್ಯಾಂಕ್ ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿರುವ ಕೆ.ವಿ.ಕಾಮತ್ ರವರನ್ನು "ಭಾರತೀಯ ಬ್ಯಾಂಕ್ ಸಂಘಟನೆ" ಯ ಅಧ್ಯಕ್ಷರನ್ನಾಗಿ 2013-14 ನೇ ಸಾಲಿಗೆ ಮರು ಆಯ್ಕೆ ಮಾಡಲಾಗಿದೆ. ಮುಂಬೈನಲ್ಲಿ ನಡೆದ 66ನೇ ವಾರ್ಷಿಕ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

- HDFC ಬ್ಯಾಂಕ್ ನ ಅಧ್ಯಕ್ಷ ಮತ್ತು ಸಿಇಒ ಆಗಿರುವ ಆದಿತ್ಯ ಪುರಿ ಅವರನ್ನು ಈ ಸಂಘಟನೆಯ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ನ ಅಧ್ಯಕ್ಷ ಪ್ರತಿಪ್ ಚೌಧರಿ ಸಂಘಟನೆಯ ಗೌರವನ್ವಿತ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

**"ಭಾರತೀಯ ಬ್ಯಾಂಕ್ ಸಂಘಟನೆ**:

- ಭಾರತೀಯ ಬ್ಯಾಂಕ್ ಸಂಘಟನೆಯನ್ನು ಸೆಪ್ಟೆಂಬರ್ 26, 1946 ರಲ್ಲಿ ಸ್ಥಾಪಿಸಲಾಗಿದೆ. ಸಂಘಟನೆಯ ಪ್ರಧಾನ ಕಚೇರಿ ಮುಂಬೈನಲ್ಲಿದೆ. ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ಈ ಸಂಘಟನೆಯನ್ನು ಹುಟ್ಟುಹಾಕಿವೆ.
- ಪ್ರಸ್ತುತ ಈ ಸಂಘಟನೆ ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ 173 ಬ್ಯಾಂಕ್ ಗಳನ್ನು ಪ್ರತಿನಿಧಿಸುತ್ತಿದೆ.
- ಬ್ಯಾಂಕ್ ಗಳ ನಡುವೆ ಪರಸ್ಪರ ಸಹಕಾರದ ಮೂಲಕ ಬ್ಯಾಂಕ್ ವಲಯವನ್ನು ಬಲಪಡಿಸಿ, ಅಭಿವೃದ್ದಿಪಡಿಸುವುದು ಇದರ ಗುರಿ.
- ಈ ಸಂಘಟನೆಯ ನಿರ್ವಹಣೆಗಾಗಿ ಕಾರ್ಯಕಾರಿ ಮಂಡಳಿಯನ್ನು ರಚಿಸಲಾಗಿದ್ದು, ಮಂಡಳಿಯು ಒಬ್ಬ ಅಧ್ಯಕ್ಷ, ಮೂವರು ಉಪಾಧ್ಯಕ್ಷರನ್ನು ಹಾಗೂ 23 ಸದಸ್ಯರನ್ನು ಒಳಗೊಂಡಿದೆ.

**WAN-INFRA ಅಧ್ಯಕ್ಷರಾಗಿ ಥಾಮಸ್ ಬ್ರುನೆಗರ್ಡ್ ಆಯ್ಕೆ**

ಸ್ವೀಡನ್ ನ "ಸ್ಟಾಂಪೆನ್ ಮೀಡಿಯಾ ಗ್ರೂಫ್ಸ್" ನ ಅಧ್ಯಕ್ಷರಾದ "ಥಾಮಸ್ ಬ್ರುನೆಗರ್ಡ್" ಅವರನ್ನು "ವರ್ಲ್ಡ್ ಅಸೋಸಿಯೇಶನ್ ಆಫ್ ನ್ಯೂಸ್ ಪೇಪರ್ ಅಂಡ್ ನ್ಯೂಸ್ ಪಬ್ಲಿಶರ್ಸ್ (World Association of Newspaper and News Publishers (WAN-INFRA))" ನ ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಗಿದೆ.

- ಕೇರಳ ಮೂಲದ "ಮಲಯಾಳಂ ಮನೋರಮಾ" ಪತ್ರಿಕೆಯ ಜಕೋಬ್ ಮ್ಯಾಥ್ಯೂ ರವರ ಉತ್ತರಾಧಿಕಾರಿಯಾಗಿ "ಥಾಮಸ್ ಬ್ರುನೆಗರ್ಡ್" ರವರು ನೇಮಕಗೊಂಡಿದ್ದಾರೆ. ಬ್ರುನೆಗರ್ಡ್ ಅವರು ಮುಂದಿನ ಎರಡು ವರ್ಷಗಳ ಕಾಲ ಅಧ್ಯಕ್ಷ ಸ್ಥಾನದಲ್ಲಿ ಕಾರ್ಯನಿರ್ವಹಿಸುವರು.
- ಇತ್ತೀಚೆಗೆ ಬ್ಯಾಂಕಾಕ್ ನಲ್ಲಿ ಆಯೋಜಿಸಲಾಗಿದ್ದ 65 ನೇ ವರ್ಲ್ಡ್ ನ್ಯೂಸ್ ಪೇಪರ್ ಕಾಂಗ್ರೆಸ್, 20 ನೇ ವರ್ಲ್ಡ್ ಎಡಿಟರ್ಸ್ ಫೋರಂ ಮತ್ತು 23 ನೇ ವರ್ಲ್ಡ್ ಅಡ್ವರ್ಟೈಸಿಂಗ್ ಫೋರಂ ವೇಳೆ ಥಾಮಸ್ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಗಿದೆ.

**WAN-INFRA:**

- WAN-INFRA ಜಾಗತಿಕ ಸುದ್ದಿ ಪತ್ರಿಕೆಗಳ ಒಕ್ಕೂಟವಾಗಿದ್ದು, ಪ್ಯಾರಿಸ್, ಫ್ರಾನ್ಸ್, ಡರ್ಮಸ್ಟಡ್ ಮತ್ತು ಜರ್ಮನಿಯಲ್ಲಿ ಕಚೇರಿಯನ್ನು ಹೊಂದಿದೆ. ಸಿಂಗಾಪುರ ಮತ್ತು ಭಾರತದಲ್ಲಿ ಇದರ ಉಪ ಕಚೇರಿ ಕಾರ್ಯನಿರ್ವಹಿಸುತ್ತಿವೆ.

ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವುದು, ಗುಣಮಟ್ಟದ ಪತ್ರಿಕೋದ್ಯಮವನ್ನು ಪ್ರೋತ್ಸಾಹಿಸುವುದು ಮತ್ತು ಸಂಪಾದಕೀಯ ಸಮಗ್ರತೆಯನ್ನು ಸಾಧಿಸುವುದು ಇದರ ಮುಖ್ಯ ಧ್ಯೇಯವಾಗಿದೆ

**ವಿಶ್ವದ ಹಿರಿಯಜ್ಜ "ಜರೋಮನ್ ಕಿಮುರಾ" ನಿಧನ**

ವಿಶ್ವದ ಹಿರಿಯ ವ್ಯಕ್ತಿ ಎನಿಸಿದ್ದ ಜಪಾನಿನ "ಜರೋಮನ್ ಕಿಮುರಾ" ನಿಧನರಾದರು. ಕಿಮುರಾ ಅವರಿಗೆ 116 ವರ್ಷ ವಯಸ್ಸಾಗಿತ್ತು. ಕಿಮುರಾ ವಿಶ್ವದ ಹಿರಿಯ ವ್ಯಕ್ತಿ ಎಂದು ಗಿನ್ನಿಸ್ ದಾಖಲೆಗೂ ಇವರ ಹೆಸರನ್ನು ಸೇರಿಸಲಾಗಿತ್ತು. ಇದರ ಜೊತೆಗೆ ಅವರು 19 ನೇ ಶತಮಾನದಲ್ಲಿ ಹುಟ್ಟಿ ಇಲ್ಲಿಯವರೆಗೂ ಬದುಕಿದ್ದ ವಿಶ್ವದ ಏಕೈಕ ಪುರುಷ ಸಹ ಆಗಿದ್ದರು.

- ಏಪ್ರಿಲ್ 19,1987 ಕಿಮುರಾ ಅವರ ಜನ್ಮ ದಿನಾಂಕ. ಡಿಸೆಂಬರ್ 28, 2012 ರಂದು ಅವರು ವಿಶ್ವದ ಹಿರಿಯ ವ್ಯಕ್ತಿ ಎನಿಸಿಕೊಂಡರು. ಆಗ ಅವರ ವಯಸ್ಸು 115 ವರ್ಷ, 253 ದಿನವಾಗಿತ್ತು. ಇದಕ್ಕೂ ಮುಂಚೆ ಕ್ರಿಶ್ಚಿಯನ್ ಮೊರ್ಟೆನ್ ಸನ್ ಎಂಬುವವರು ವಿಶ್ವದ ಹಿರಿಯ ವ್ಯಕ್ತಿ ಎನಿಸಿಕೊಂಡಿದ್ದರು.

- ಸದ್ಯ ಜಪಾನ್ ನವರೇ ಆದ ಮಿಸೊ ಒಕವಾ (Misao Okawa) ವಿಶ್ವದ ಜೀವಂತ ಹಿರಿಯರು ಎನ್ನಲಾಗಿದೆ. ಮಾರ್ಚ್ 8, 1898 ರಲ್ಲಿ ಜನಸಿರುವ ಒಕವಾ ವಿಶ್ವದ ಹಿರಿಯ ಮಹಿಳೆ ಸಹ ಆಗಿದ್ದಾರೆ.

**ಇರಾನ್ ಅಧ್ಯಕ್ಷ ಚುನಾವಣೆ: ಹಸನ್ ರೋಹನಿ ಗೆ ಗೆಲುವು**

ಇರಾನ್ ನ ಅಧ್ಯಕ್ಷ ಸ್ಥಾನಕ್ಕೆ ಇತ್ತೀಚೆಗೆ ನಡೆದ ಚುನಾವಣೆ ಫಲಿತಾಂಶ ಹೊರಬಿದ್ದಿದ್ದು, ಸೌಮ್ಯವಾದಿ ಮುಖಂಡ ಹಸನ್ ರೋಹನಿ ಜಯಭೇರಿ ಬಾರಿಸಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ.

- ಒಟ್ಟು ಮತದಾನದಲ್ಲಿ ರೋಹನಿ ಅವರು ಶೇ 50.68 ರಷ್ಟು ಮತಗಳನ್ನು ಪಡೆದರೆ ಅವರ ಪ್ರತಿಸ್ಪರ್ಧಿ ಮೊಹಮ್ಮದ್ ಬಾಕ್ವೇರ್ ಖ್ವಾಲಿಬಾಫ್ ಅವರು ಶೇ 16.58 ರಷ್ಟು ಮತಗಳನಷ್ಟೇ ಪಡೆದರು.
- ಸೌಮ್ಯವಾದಿ ಗುಂಪಿನ ಮತ್ತೊಬ್ಬ ಅಭ್ಯರ್ಥಿ ಮೊಹಮ್ಮದ್ ರೆಜಾ ಆರಿಫ್ ಅವರು ಮಾಜಿ ಸುಧಾರಣವಾದಿ ಅಧ್ಯಕ್ಷ ಮೊಹಮ್ಮದ್ ಖಟಾಮಿ ಅವರ ಮನವಿಯಂತೆ ಸ್ಪರ್ಧೆಯಿಂದ ಹಿಂದೆ ಸರಿದು ಹಸನ್ ಅವರನ್ನು ಬೆಂಬಲಿಸಿದ್ದರು. ಆದ ಕಾರಣ ಹಸೇನ್ ಗೆಲುವಿನ ಹಾದಿ ಮತ್ತಷ್ಟು ಸುಗಮವಾಗಿತ್ತು.
- ಹಸೇನ್ ಅವರು ಮಹಮ್ಮೂದ್ ಅಹ್ಮದಿನೆಜಾದ್ ಅವರ ಉತ್ತರಾಧಿಕಾರಿಯಾಗಿ ಶೀಘ್ರದಲ್ಲೇ ಅಧಿಕಾರ ಸ್ವೀಕರಿಸಲಿದ್ದಾರೆ.

**ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷರಾಗಿ "ಜಾನ್ ಡ್ಬ್ಲೂ ಆಶೆ (John W Ashe)" ಆಯ್ಕೆ**

ವಿಶ್ವಸಂಸ್ಥೆಯ ಸಾಮಾನ್ಯ ಸಭೆ ತನ್ನ 68 ನೇ ಅಧಿವೇಶನದ ಅಧ್ಯಕ್ಷರಾಗಿ "ಆಂಟಿಗುವಾ ಮತ್ತು ಬರ್ಮುಡಾ"ದ ವಿಶ್ವಸಂಸ್ಥೆಯ ಖಾಯಂ ಪ್ರತಿನಿಧಿಯಾಗಿದ್ದ "ಜಾನ್ ಡ್ಬ್ಲೂ ಆಶೆ" ಅವರನ್ನು ಆಯ್ಕೆಮಾಡಲಾಗಿದೆ. ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮಾತನಾಡಿದ ಆಶೆ ಅವರು ತಮ್ಮ ಅಧಿಕಾರ ಅವಧಿಯಲ್ಲಿ ವಿಶ್ವದ ಸುಸ್ಥಿರ ಅಭಿವೃದ್ಧಿಗಾಗಿ ಅಗತ್ಯವಿರುವ ಕ್ರಮವನ್ನು ವಹಿಸಲು ಸಿದ್ಧವಿರುವುದಾಗಿ ಹೇಳಿದ್ದಾರೆ.

**ಜಾನ್ ಡ್ಬ್ಲೂ ಆಶೆ:**

- ಜಾನ್ ಡ್ಬ್ಲೂ ಆಶೆ ಅವರು 1995 ರಿಂದ 2004 ರವರೆಗೆ "ಆಂಟಿಗುವಾ ಮತ್ತು ಬರ್ಮುಡಾ"ದ ವಿಶ್ವ ಸಂಸ್ಥೆಯ ಖಾಯಂ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ್ದರು.
- ಮೇ 3, 2004 ರಿಂದ "ಆಂಟಿಗುವಾ ಮತ್ತು ಬರ್ಮುಡಾ"ದ ವಿಶ್ವಸಂಸ್ಥೆಯ ರಾಯಭಾರಿಯಾಗಿ ನೇಮಕಗೊಂಡಿದ್ದಾರೆ.
- ಆಶೆ ಅವರು ಆಂಟಿಗುವಾದ ವಿಶ್ವ ವಾಣಿಜ್ಯ ಸಂಸ್ಥೆಯ ರಾಯಭಾರಿ ಸಹ ಆಗಿದ್ದು, ಸುಸ್ಥಿರ ಅಭಿವೃದ್ಧಿ ಮಿಷನ್ ನ ಹೊಣೆಗಾರಿಕೆಯನ್ನು ಹೊತ್ತಿದ್ದಾರೆ.

**68 ನೇ ಅಧಿವೇಶನ:**

- ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 68 ನೇ ಅಧಿವೇಶನ ಸೆಪ್ಟೆಂಬರ್ 2013 ರಿಂದ ಆರಂಭಗೊಳ್ಳಲಿದೆ.

**ಎಸ್.ಕೆ.ರಾಯ್ ಜೀವ ವಿಮಾ ನಿಗಮ (LIC)ದ ನೂತನ ಅಧ್ಯಕ್ಷರು**

ಭಾರತೀಯ ಜೀವ ವಿಮಾ ನಿಗಮದ ನೂತನ ಅಧ್ಯಕ್ಷರನ್ನಾಗಿ ಎಸ್.ಕೆ.ರಾಯ್ ರವರನ್ನು ಸರ್ಕಾರ ನೇಮಕ ಮಾಡಿದೆ. ರಾಯ್ ಅವರು ಮೇ 31, 2013 ರಂದು LIC ಯ ವ್ಯವಸ್ಥಾಪಕ ನಿರ್ದಶಕರಾಗಿ ನೇಮಕಗೊಂಡಿದ್ದರು. LIC ಯ ಅಧ್ಯಕ್ಷರಾಗಿದ್ದ ಡಿ.ಕೆ.ಮಲ್ಹೋತ್ರ ಅವರು ಇತ್ತೀಚೆಗೆ ನಿವೃತ್ತಿ ಹೊಂದಿದ ಬಳಿಕ ಥಾಮಸ್ ಮ್ಯಾಥ್ಯೂ ಅವರನ್ನು ಹಂಗಾಮಿ ಅಧ್ಯಕ್ಷರಾಗಿ ಸರ್ಕಾರ ನೇಮಕ ಮಾಡಿತ್ತು.

**ಎಸ್.ಕೆ.ರಾಯ್:**

- 1981 ರಲ್ಲಿ LIC ಗೆ ಸೇರ್ಪಡೆಗೊಂಡ ರಾಯ್ ಅವರು ಕಂಪನಿಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

- ನಿಗಮದಲ್ಲಿ ಏರಿಯಾ ಮ್ಯಾನೇಜರ್, ಹೌಸಿಂಗ್ ಫೈನಾನ್ಸ್ ವಿಭಾಗದ ಕಾರ್ಯದರ್ಶಿಯಾಗಿ ಮತ್ತು ವಲಯ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಅನುಭವವನ್ನು ರಾಯ್ ಹೊಂದಿದ್ದಾರೆ.
- 2009 ರಿಂದ 2011 ರ ವರೆಗೆ ಉತ್ತರ ಕೇಂದ್ರ ವಲಯ ಮತ್ತು 2011 ರಿಂದ 2013 ರಿಂದ ಪೂರ್ವ ವಲಯದ ಪ್ರಾದೇಶಿಕ ವ್ಯವಸ್ಥಾಪಕರಾಗಿ ರಾಯ್ ಕಾರ್ಯನಿರ್ವಹಿಸಿದ್ದಾರೆ.

**ಭಾರತೀಯ ಜೀವ ವಿಮಾ ನಿಗಮ:**

- ಭಾರತೀಯ ಜೀವ ವಿಮಾ ನಿಗಮ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿದ್ದು, ಭಾರತ ಸರ್ಕಾರ ಶೇ.100 ರಷ್ಟು ಪಾಲನ್ನು ಹೊಂದಿದೆ.
- 256 ಕ್ಕೂ ಹೆಚ್ಚು ಖಾಸಗಿ ವಿಮಾ ಕಂಪನಿಗಳನ್ನು ವಿಲೀನಗೊಳಿಸುವ ಮೂಲಕ **ಸೆಪ್ಟೆಂಬರ್ 1, 1956** ರಲ್ಲಿ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು.
- ಭಾರತೀಯ ಜೀವ ವಿಮಾ ನಿಗಮದ ಕೇಂದ್ರ ಕಚೇರಿ **ಮುಂಬೈನಲ್ಲಿದೆ**. ಸಂಸ್ಥೆಯೂ ದೇಶದಾದ್ಯಂತ 8 ಪ್ರಾದೇಶಿಕ ಕಚೇರಿಗಳನ್ನು ಹೊಂದಿದೆ.

**ಅಮೆರಿಕಾದ "ಫೆಡರಲ್ ಬ್ಯೂರೋ ಆಫ್ ಇನ್ ವೆಸ್ಟಿಗೇಶನ್ (FBI)" ಗೆ "ಜೇಮ್ಸ್ ಕೊಮೆ" ನಾಮನಿರ್ದೇಶನ**

ಅಮೆರಿಕಾದ ಪ್ರತಿಷ್ಠಿತ ತನಿಖಾ ಇಲಾಖೆ "ಫೆಡರಲ್ ಬ್ಯೂರೋ ಆಫ್ ಇನ್ ವೆಸ್ಟಿಗೇಶನ್" ನ ನೂತನ ನಿರ್ದೇಶಕ ಸ್ಥಾನಕ್ಕೆ "ಕೇಮ್ಸ್ ಕೊಮೆ" ಅವರನ್ನು ಅಧ್ಯಕ್ಷ ಬರಾಕ್ ಒಬಾಮ ನಾಮನಿರ್ದೇಶನ ಮಾಡಿದ್ದಾರೆ. ಫೆಡರಲ್ ಪ್ರಾಸಿಕ್ಯೂಟರ್ ಆದ ಜೇಮ್ಸ್ ರವರು ಜಾರ್ಜ್ ಬುಷ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನ್ಯಾಯ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

- ಜೇಮ್ಸ್ ರವರ ನೇಮಕಾತಿ ಅಮೆರಿಕಾದ ಸೆನೆಟ್ ತೀರ್ಮಾನಕ್ಕೆ ಒಳಪಟ್ಟಿದ್ದು, ಸೆನೆಟ್ ಒಪ್ಪಿದರೆ ಮಾತ್ರ FBI ನ ನಿರ್ದೇಶಕರಾಗಿ ನೇಮಕಗೊಳ್ಳಲಿದ್ದಾರೆ.
- ಪ್ರಸ್ತುತ ಈ ಹುದ್ದೆಯಲ್ಲಿ ರಾಬರ್ಟ್ ಮುಲ್ಲೆರ್ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ರಾಬರ್ಟ್ ಅವರು 2001 ರಲ್ಲಿ ಈ ಹುದ್ದೆಗೆ ನೇಮಕಗೊಂಡಿದ್ದರು. ಇವರ 12 ವರ್ಷದ ಅಧಿಕಾರ ಅವಧಿ ಸದ್ಯದಲ್ಲೇ ಮುಗಿಯಲ್ಲಿರುವ ಕಾರಣ ನಿರ್ದೇಶಕ ಸ್ಥಾನಕ್ಕೆ ಆಯ್ಕೆ ಪ್ರಕ್ರಿಯೆ ಆರಂಭಗೊಂಡಿದೆ.

**ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆಯ ನಿರ್ದೇಶಕರಾಗಿ: ಕೃಷ್ಣ ಚೌಧುರಿ**

ಹಿರಿಯ ಐಪಿಎಸ್ ಅಧಿಕಾರಿ ಶ್ರೀ ಕೃಷ್ಣ ಚೌಧುರಿ, ಅವರನ್ನು ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆ (National Disaster Response Force) ಯ ನಿರ್ದೇಶಕರಾಗಿ ನೇಮಕ ಮಾಡಲಾಗಿದೆ. ಚೌಧುರಿ ಅವರು 2017 ರ ವರೆಗೆ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ.

**ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆ**:

- ಪ್ರಕೃತಿ ಮತ್ತು ಮಾನವ ಪ್ರೇರಿತ ವಿಕೋಪಗಳ ಸಂದರ್ಭದಲ್ಲಿ ಜನರ ತುರ್ತು ನೆರವಿಗೆ ಧಾವಿಸುವ ವಿಶೇಷ ಪಡೆಯನ್ನು ಸ್ಥಾಪಿಸುವ ಉದ್ದೇಶದಿಂದ ಭಾರತ ಸರ್ಕಾರ ಡಿಸೆಂಬರ್ 26, 2005 ರಂದು "ವಿಪತ್ತು ನಿರ್ವಹಣಾ ಕಾಯಿದೆ" ಯನ್ನು ಜಾರಿಗೊಳಿಸಿತು.

- ಈ ಕಾಯಿದೆಯ ಸೆಕ್ಷನ್ 44(i) ರಡಿ "ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆ"ಯನ್ನು ಸ್ಥಾಪಿಸಲು ಅವಕಾಶ ನೀಡಲಾಗಿದ್ದು, ಅದರಂತೆ ಈ ಪಡೆಯನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಈ ಪಡೆಯೂ ಹತ್ತು ಬೆಟಾಲಿಯನ್ ಗಳನ್ನು ಹೊಂದಿದೆ. ಇವುಗಳಲ್ಲಿ BSF, CRPF, CISF ಮತ್ತು ITBP ಯ ತಲಾ ಎರಡು ತುಕಡಿಗಳು ಸೇವೆ ಸಲ್ಲಿಸುತ್ತಿವೆ.
- ರಾಷ್ಟ್ರೀಯ ವಿಪತ್ತು ಸ್ಪಂದನ ಪಡೆ"ಗೆ ತರಬೇತಿ ಹಾಗೂ ನಿರ್ವಹಣೆಯನ್ನು "ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ" ನೋಡಿಕೊಳ್ಳುತ್ತದೆ. <u>ಮಾನ್ಯ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ. ಇದು ಕೇಂದ್ರ ಗೃಹ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತದೆ.</u>

**ಪ್ರಸ್ತುತ ಈ ಪಡೆಗಳು ಎಲ್ಲಿ ಕಾರ್ಯನಿರ್ವಹಿಸುತ್ತಿವೆ?**

- ದೇಶದ ೯ ವಿವಿಧ ಸ್ಥಳಗಳಲ್ಲಿ ಈ ಪಡೆಗಳನ್ನು ಸ್ಥಾಪಿಸಲಾಗಿದೆ. ಆಂಧ್ರ ಪ್ರದೇಶ ಮತ್ತು ಬಿಹಾರದಲ್ಲಿ ಈ ಪಡೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಪ್ರಗತಿಯಲ್ಲಿದೆ. ಕರ್ನಾಟಕದ ಮೈಸೂರಿನಲ್ಲಿ ಈ ಪಡೆ ಕಾರ್ಯರಂಭ ಮಾಡಲಿರುವುದಾಗಿ ಹೇಳಲಾಗಿದೆ ಆದರೆ ಹೆಚ್ಚಿನ ಮಾಹಿತಿ ಇಲ್ಲ.

**<u>ಆಸ್ಟ್ರೇಲಿಯಾದ ನೂತನ ಪ್ರಧಾನಿಯಾಗಿ "ಕೇವಿನ್ ರುಡ್ "ಪ್ರಮಾಣ ವಚನ ಸ್ವೀಕಾರ</u>**

ಮೂರು ವರ್ಷಗಳ ಹಿಂದೆ ಆಸ್ಟ್ರೇಲಿಯಾದ ಮೊದಲ ಮಹಿಳಾ ಪ್ರಧಾನಿ ಎನಿಸಿದ್ದ ಜೂಲಿಯನ್ ಗಿಲ್ಲಾರ್ಡ್ ಬಂಡಾಯದಿಂದಾಗಿ ಲೇಬರ್ ಪಾರ್ಟಿಯ ಅಧ್ಯಕ್ಷ ಸ್ಥಾನದಿಂದ ವಜಾಗೊಂಡಿದ್ದ ಮಾಜಿ ಪ್ರಧಾನಿ ಕೇವಿನ್ ರುಡ್ ಮತ್ತೆ ಪಕ್ಷದ ನಾಯಕತ್ವ ಚುಕ್ಕಾಣಿ ಹಿಡಿಯುವುದರ ಜೊತೆಗೆ ಪ್ರಧಾನಿಯಾಗಿ ಆಯ್ಕೆಯಾದರು. ಇತ್ತೀಚೆಗೆ ನಡೆದ ಮತದಾನದಲ್ಲಿ ಕೇವಿನ್ ರುಡ್ 57 ಮತಗಳನ್ನು ಗಳಿಸಿದರೆ, ಗಿಲ್ಲಾರ್ಡ್ ಅವರಿಗೆ 45 ಮತಗಳ ಮಾತ್ರ ಚಲಾಯಿಸಲ್ಪಟ್ಟವು. ಆಸ್ಟ್ರೇಲಿಯಾದ ಗವರ್ನರ್ ಜನರಲ್ ಕ್ವೆಂಟಿನ್ ಬ್ರೈಸ್ ಅವರು ರುಡ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಇದೇ ವೇಳೆ ಅಂಥೋನಿ ಅಲ್ಬೆನಿಸ್ ಅವರು ಉಪ ಪ್ರಧಾನಿಯಾಗಿ ಕ್ರಿಸ್ ಬೊವೆನ್ ಅವರು ಸರ್ಕಾರದ ಖಚಾಂಚಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

**<u>ಕೇವಿನ್ ರುಡ್:</u>**

- ಕೇವಿನ್ ರುಡ್ ಅವರು ಲೇಬರ್ ಪಕ್ಷದ ಪ್ರಭಾವಿ ನಾಯಕರು. ಪ್ರಸ್ತುತ ಆಸ್ಟ್ರೇಲಿಯಾದ 26 ನೇ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿರುವ ಅವರು ಎರಡನೇ ಬಾರಿಗೆ ಈ ಹುದ್ದೆಯನ್ನು ಅಲಂಕರಿಸಿದ್ದಾರೆ.
- ಈ ಹಿಂದೆ 2007 ರಿಂದ 2010 ರ ವರೆಗೆ ಆಸ್ಟ್ರೇಲಿಯಾದ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದರು. ಜೊತೆಗೆ 2006 ರಿಂದ 2010 ರ ವರೆಗೆ ಲೇಬರ್ ಪಕ್ಷದ ನಾಯಕರಾಗಿದ್ದರು.
- 1949 ರಲ್ಲಿ ಎರಡನೇ ಬಾರಿಗೆ ಪ್ರಧಾನಿಯಾಗಿ ಆಯ್ಕೆಯಾಗಿದ್ದ ರೊಬರ್ಟ್ ಮೆಂಝೀಸ್ ಅವರ ನಂತರ ಈ ಹುದ್ದೆಯನ್ನು ಎರಡನೇ ಬಾರಿಗೆ ಅಲಂಕರಿಸಿರುವ ಎರಡನೇ ವ್ಯಕ್ತಿ ಕೇವಿನ್ ರುಡ್.

**<u>ಫೋರ್ಬ್ಸ್ ಪ್ರಭಾವಿ ತಾರೆಗಳ ಪಟ್ಟಿ (Powerful Celebrities): ಓಪ್ರಾ ವಿನ್ ಫ್ರೇ ನಂ.1</u>**

ಫೋರ್ಬ್ಸ್ ಪ್ರಭಾವಿ ತಾರೆಗಳ ಪಟ್ಟಿಯನ್ನು ಬಿಡುಗಡೆಗೊಳಿಸಲಾಗಿದ್ದು, ಮಾಧ್ಯಮ ಸಂಸ್ಥೆ ಒಡತಿ, ನಿರೂಪಕಿ, ನಟಿ ಹಾಗೂ ನಿರ್ಮಾಪಕಿ ಓಪ್ರಾ ವಿನ್ ಫ್ರೇ (Oprah Winfrey) ಅವರು ಪ್ರಭಾವಿ ತಾರೆಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿದ್ದಾರೆ. ಎರಡನೇ ಸ್ಥಾನದಲ್ಲಿ ಗಾಯಕಿ ಲೇಡಿ ಗಾಗ ಮತ್ತು

ಮೂರನೇ ಸ್ಥಾನದಲ್ಲಿ ನಿರ್ದೇಶಕ ಹಾಗೂ ನಿರ್ಮಾಪಕ ಸ್ಟೀವೆನ್ ಸ್ಪೀಲ್ ಬರ್ಗ್ ಅವರು ಕಾಣಿಸಿಕೊಂಡಿದ್ದಾರೆ. ಗಾಯಕಿಯರಾದ ಬೆಯೊನ್ಸ್ ಮತ್ತು ಮಡೋನಾ ಕ್ರಮವಾಗಿ 4 ಮತ್ತು 5 ನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ.

- ಓಪ್ರಾ ವಿನ್ ಫ್ರೇ ಅವರು ಈ ಹಿಂದೆ ನಾಲ್ಕು ಬಾರಿ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಅಲಂಕರಿಸಿದ್ದರು. 1999 ರಿಂದ ಬಿಡುಗಡೆಗೊಳಿಸಲಾಗುತ್ತಿರುವ ಈ ಪಟ್ಟಿಯಲ್ಲಿ ಪ್ರತಿ ವರ್ಷ ಸ್ಥಾನ ಪಡೆಯುತ್ತಿರುವ ಮೂವರು ತಾರೆಯರಲ್ಲಿ ಓಪ್ರಾ ಕೂಡ ಒಬ್ಬರು. ರೇಡಿಯೋ ಡಿಜೆ ಹೋವಾರ್ಡ್ ಸ್ಟರ್ನ್ ಮತ್ತು ನಿರ್ದೇಶಕ ಸ್ಟೀವೆನ್ ಸ್ಪೀಲ್ ಬರ್ಗ್ ಪ್ರತಿ ವರ್ಷ ಈ ಪಟ್ಟಿಯಲ್ಲಿ ಸ್ಥಾನ ಪಡೆಯುತ್ತಿರುವ ಇನ್ನಿಬ್ಬರು ತಾರೆಯರು.
- 2012 ರಲ್ಲಿ ಜೆನ್ನಿಫರ್ ಲೊಫೆಝ್ ಅವರು ಮೊದಲ ಸ್ಥಾನವನ್ನು ಅಲಂಕರಿಸಿದ್ದರು.

**ಸುಪ್ರೀಂಕೋರ್ಟ್ ಮುಖ್ಯನ್ಯಾಯಾಧೀಶರಾಗಿ ಪಿ.ಸದಾಶಿವಂ ನೇಮಕ ಬಹುತೇಕ ಖಚಿತ**

ಭಾರತದ 40 ನೇ ಮುಖ್ಯ ನ್ಯಾಯಾಧೀಶರಾಗಿ ಸುಪ್ರೀಂಕೋರ್ಟ್ ನ ನ್ಯಾಯಾಧೀಶ ಪಿ.ಸದಾಶಿವಂ ಅವರು ನೇಮಕಗೊಳ್ಳುವುದು ಬಹುತೇಕ ಖಚಿತವಾಗಿದೆ. ಜುಲೈ 18 ರಂದು ಹಾಲಿ ಮುಖ್ಯನ್ಯಾಯಮೂರ್ತಿಗಳಾದ ಅಲ್ತಮಸ್ ಕಬೀರ್ ಅವರ ಅವಧಿ ಕೊನೆಗೊಳ್ಳುವ ಕಾರಣ ಸದಾಶಿವಂ ಅವರು ಮುಂದಿನ ಮುಖ್ಯನ್ಯಾಯಾಧೀಶರನ್ನಾಗಿ ನೇಮಕವಾಗಲಿದ್ದಾರೆ. ಅಲ್ತಮಸ್ ಕಬೀರ್ ಅವರು ಕಳೆದ ಸೆಪ್ಟೆಂಬರ್ 29 ರಂದು ಮುಖ್ಯನ್ಯಾಯಾಧೀಶರಾಗಿ ಅಧಿಕಾರ ಸ್ವೀಕರಿಸಿ ಒಂಬತ್ತು ತಿಂಗಳ ಕಾಲ ಸೇವೆಸಲ್ಲಿಸಿದ್ದಾರೆ.

- ಅಧಿಕೃತ ಮಾಹಿತಿಗಳ ಪ್ರಕಾರ ಸುಪ್ರೀಂಕೋರ್ಟ್ ನ ಮುಖ್ಯ ನ್ಯಾಯಮೂರ್ತಿಗಳಾಗಿ ಪಿ.ಸದಾಶಿವಂ ಅವರನ್ನು ನೇಮಕ ಮಾಡಲು ರಾಷ್ಟ್ರಪತಿಗಳು ಸಮ್ಮತಿ ಸೂಚಿಸಿದ್ದಾರೆ ಎನ್ನಲಾಗಿದೆ.

**ಸದಾಶಿವಂ**:

- 64 ವರ್ಷದ ಸದಾಶಿವಂ ಅವರು 1996 ರಲ್ಲಿ ಮದ್ರಾಸ್ ಹೈಕೋರ್ಟ್ ನ ಖಾಯಂ ಪೀಠಕ್ಕೆ ಸೇರ್ಪಡೆಗೊಂಡರು.
- ಏಪ್ರಿಲ್ 2007 ರಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಗೆ ಇವರನ್ನು ವರ್ಗಾಯಿಸಲಾಯಿತು.
- ಸದಾಶಿವಂ ಅವರು ಸುಪ್ರೀಂಕೋರ್ಟ್ ನ ನ್ಯಾಯಾಧೀಶರಾಗಿ ಆಗಸ್ಟ್ 21, 2007 ರಂದು ನೇಮಕಗೊಂಡರು.

## ಪ್ರಶಸ್ತಿಗಳು

**"ನ್ಯಾಷನಲ್ ಸ್ಪೆಲ್ಲಿಂಗ್ ಬೀ" ಸ್ಪರ್ಧೆ: ಭಾರತೀಯ ಮೂಲದ "ಅರವಿಂದ್ ಮಹಾನ್ ಕಲಿ"ಗೆ ಪ್ರಶಸ್ತಿ**

ವಿದ್ಯಾರ್ಥಿಗಳ ಶಬ್ದಜ್ಞಾನವನ್ನು ಪರೀಕ್ಷಿಸಲು ನಡೆಸಲಾಗುವ "ಸ್ಪೆಲ್ಲಿಂಗ್ ಬೀ" ಸ್ಪರ್ಧೆಯಲ್ಲಿ ಭಾರತೀಯ ಮೂಲದ ಅಮೆರಿಕನ್ ವಿದ್ಯಾರ್ಥಿ 13 ವರ್ಷದ "ಅರವಿಂದ್ ಮಹಾನ್ ಕಲಿ" ರವರು ವಿಜೇತರನಾಗಿದ್ದಾನೆ. ಈ ಮೂಲಕ ಸತತ ಆರನೇ ವರ್ಷವೂ ಈ ಪ್ರತಿಷ್ಠಿತ ಪ್ರಶಸ್ತಿ ಭಾರತೀಯರ ಪಾಲಾಗಿದೆ.

- ನ್ಯೂಯಾರ್ಕ್ ನಿವಾಸಿ ಅರವಿಂದ್ ರವರಿಗೆ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ "KNAIDAL" ಎಂಬ ಪದದ ಸ್ಪೆಲ್ಲಿಂಗ್ ನ್ನು ಕೇಳಲಾಯಿತು. "Knaidal" ಒಂದು ಜರ್ಮನ್ ಮೂಲದ ಪದವಾಗಿದ್ದು, ನಾದಿದ ಮೈದಾದ ಸಣ್ಣ ಉಂಡೆ ಎಂಬ ಅರ್ಥವನ್ನು ಹೊಂದಿದೆ. ಅರವಿಂದ್ ರವರು ಈ ಪದದ ಸ್ಪೆಲ್ಲಿಂಗ್ ನ್ನು ಸರಿಯಾಗಿ ಹೇಳುವ ಮೂಲಕ ಪ್ರಶಸ್ತಿಗೆ ಪಾತ್ರರಾದರು. ವಿಶೇಷವೆಂದರೆ ಕಳೆದ ನಾಲ್ಕು ಬಾರಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಅರವಿಂದ್ ಜರ್ಮನ್ ಮೂಲದ ಪದಗಳ ಸ್ಪೆಲ್ಲಿಂಗ್ ನ್ನು ಸರಿಯಾಗಿ ಹೇಳದೇ ಸೋಲನ್ನು ಅನುಭವಿಸಿದ್ದ.
- ಭಾರತ ಮೂಲದವರೇ ಆದ ಶಿವಕುಮಾರ್ 2 ನೇ ಸ್ಥಾನ ಹಾಗೂ ಶ್ರೀರಾಮ್ ಹತ್ಕಾರ್ 3 ನೇ ಸ್ಥಾನ ಪಡೆದುಕೊಂಡರು. ಈ ಮೂಲಕ ಸ್ಪರ್ಧೆಯ ಎಲ್ಲಾ ಪ್ರಶಸ್ತಿಗಳು ಭಾರತದವರ ಪಾಲಾಗಿದ್ದು ವಿಸ್ಮಯವೇ ಸರಿ.
- 1925 ರಿಂದ ನಡೆಸಲಾಗುತ್ತಿರುವ "ರಾಷ್ಟ್ರೀಯ ಸ್ಪೆಲ್ಲಿಂಗ್ ಬೀ" ಸ್ಪರ್ಧೆಯಲ್ಲಿ 2008 ರಲ್ಲಿ ಸಮೀರ್ ಮಿಶ್ರಾ, 2009 ರಲ್ಲಿ ಕಾವ್ಯ ಶಿವ ಶಂಕರ್, 2010 ರಲ್ಲಿ ಅನಾಮಿಕ ವೀರಮಣಿ, 2011 ರಲ್ಲಿ ಸುಕನ್ಯಾ ರಾವ್ ಮತ್ತು 2012 ರಲ್ಲಿ ಸ್ನಿಗ್ಧ ನಂದಿಪತಿ ರವರು ವಿಜೇತರಾಗಿದ್ದ ಭಾರತೀಯರೆನಿಸಿದ್ದರು.

**ISRO ದಿಂದ ಪ್ರೊಫೆಸರ್ ಸತೀಶ್ ಧವನ್ ಫೆಲೋಶಿಪ್**

ಬಾಹ್ಯಕಾಶ ಇಲಾಖೆ/ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಇದೇ ಮೊದಲ ಬಾರಿಗೆ "ಗ್ರ್ಯಾಜುಯೆಟ್ ಏರೋಸ್ಪೇಸ್ ಲ್ಯಾಬೋರೆಟರಿಸ್ ಆಫ್ ದಿ ಕ್ಯಾಲಿಫೋರ್ನಿಯಾ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ"ಯಲ್ಲಿ ಪ್ರೊಫೆಸರ್ ಸತೀಶ್ ಧವನ್ ರವರ ಸ್ಮರಣಾರ್ಥ ಫೆಲೋಶಿಪ್ ಅನ್ನು ಸ್ಥಾಪಿಸಿದೆ. ಪ್ರೊಫೆಸರ್ ಸತೀಶ್ ಧವನ್ ರವರು 1972-84 ರವರೆಗೆ ಇಸ್ರೋದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

- ಪ್ರೊ.ಸತೀಶ್ ಧವನ್ ರವರು 1951 ರಲ್ಲಿ "ಗ್ರ್ಯಾಜುಯೆಟ್ ಏರೋಸ್ಪೇಸ್ ಲ್ಯಾಬೋರೆಟರಿಸ್ ಆಫ್ ದಿ ಕ್ಯಾಲಿಫೋರ್ನಿಯಾ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ಯಿಂದ ಏರೋಸ್ಪೇಸ್ ನಲ್ಲಿ Ph.D ಪದವಿಯನ್ನು ಪಡೆದಿದ್ದರು. 1971-72 ರಲ್ಲಿ ಇದೇ ಸಂಸ್ಥೆಯಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು.
- ಸತೀಶ್ ಧವನ್ ರವರು ಇಸ್ರೋದ ರೂವಾರಿ ಅಷ್ಟೇ ಅಲ್ಲದೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗಳಿಸಿದ್ದ ಸಂಶೋಧಕ ಮತ್ತು ಶಿಕ್ಷಕ ಸಹ ಆಗಿದ್ದರು. ಭಾರತ ಸರ್ಕಾರ ಅವರಿಗೆ 1981 ರಲ್ಲಿ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.
- ಈ ಕಾರ್ಯಕ್ರಮದಡಿ ತಿರುವನಂತಪುರಂ "ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿ" ಯಿಂದ ಪ್ರತಿ ವರ್ಷ ಉತ್ತಮ ಶೈಕ್ಷಣಿಕ ಪ್ರಗತಿಯಿಂದ ಹೊರಬರುವ ಒಬ್ಬ ವಿದ್ಯಾರ್ಥಿಗೆ "ಗ್ರ್ಯಾಜುಯೆಟ್ ಏರೋಸ್ಪೇಸ್ ಲ್ಯಾಬೋರೆಟರಿಸ್ ಆಫ್ ದಿ ಕ್ಯಾಲಿಫೋರ್ನಿಯಾ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ"' ದಲ್ಲಿ ಬಾಹ್ಯಕಾಶ ವಿಷಯದಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡಲು ಫೆಲೊಶಿಪ್ ನೀಡಲಾಗುವುದು.

**ಲೇಖಕಿ ಎ.ಎಂ.ಹೋಮ್ಸ್ ಗೆ "ಮಹಿಳಾ ಕಾದಂಬರಿ ಪ್ರಶಸ್ತಿ (Woman's Fiction Prize)"**

ಅಮೆರಿಕಾದ ಪ್ರಸಿದ್ದ ಕಾದಂಬರಿಗಾರ್ತಿ "ಎ.ಎಂ.ಹೋಮ್ಸ್ (A M Homes)" ರವರನ್ನು ಈ ಬಾರಿಯ ಪ್ರತಿಷ್ಠಿತ ಮಹಿಳಾ ಕಾದಂಬರಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಹಾಲಿವುಡ್ ನಟಿ "ಮಿಲಿಂಡಾ ರಿಚರ್ಡಸನ್" ನೇತೃತ್ವದ ಆಯ್ಕೆ ಸಮಿತಿಯು ಹೋಮ್ಸ್ ರವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಿದೆ.

- ಹೋಮ್ಸ್ ರವರ "ಮೆ ವಿ ಬಿ ಫರ್ ಗೀವನ್ (May We Be Forgiven)" ಕಾದಂಬರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಇದು ಹೋಮ್ಸ್ ಅವರ ಆರನೇ ಕಾದಂಬರಿ. ಖ್ಯಾತ ಲೇಖಕಿ "ಹಿಲರಿ ಮಂಟೆಲ್" ಮತ್ತು ಇತರೆ ಮೂವರು ಲೇಖಕಿಯರನ್ನು ಹಿಂದಿಕ್ಕಿ ಹೋಮ್ಸ್ ಈ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. "ಮೆ ವಿ ಬಿ ಫರ್ ಗೀವನ್" ಸಹೋದರರಿಬ್ಬರ ಕುರಿತಾದ ಹಾಸ್ಯಭರಿತ ಕಾದಂಬರಿ.

**"ಮಹಿಳಾ ಕಾದಂಬರಿ ಪ್ರಶಸ್ತಿ"**:

- "ಮಹಿಳಾ ಕಾದಂಬರಿ ಪ್ರಶಸ್ತಿ" ಅಥವಾ "ಆರೆಂಜ್ ಪ್ರೈಜ್ ಫಾರ್ ಫಿಕ್ಶನ್ (Orange Prize for Fiction)" ಎಂತಲೂ ಕರೆಯಲಾಗುವ ಈ ಪ್ರಶಸ್ತಿಯನ್ನು 1996 ರಿಂದ ವಾರ್ಷಿಕವಾಗಿ ನೀಡಲಾಗುತ್ತಿದೆ. 1996 ರಲ್ಲಿ ಲೇಖಕಿ "ಹೆಲೆನ್ ಡೆಲ್ಮೊರೆ" ಈ ಪ್ರಶಸ್ತಿ ಪಡೆದ ಮೊದಲ ಲೇಖಕಿ.
- ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸುವ ಮಹಿಳೆಯರನ್ನು ಗೌರವಿಸುವ ಸಲುವಾಗಿ ಸ್ಥಾಪಿಸಿಲಾಗಿರುವ ಈ ಪ್ರಶಸ್ತಿಯನ್ನು ಇಂಗ್ಲೀಷ್ ನಲ್ಲಿ ರಚಿಸಲಾದ ಪೂರ್ಣ ಪ್ರಮಾಣದ ಕಾದಂಬರಿಗೆ ನೀಡಲಾಗುವುದು.
- ಪ್ರಶಸ್ತಿಯು $45,000 ನಗದು ಹಾಗೂ ಕಂಚಿನ ಪ್ರತಿಮೆಯನ್ನು ಒಳಗೊಂಡಿದೆ.

**ಐರಿಷ್ ಸಾಹಿತಿ "ಕೆವಿನ್ ಬಾರ್ರಿ" ಗೆ ಡಬ್ಲಿನ್ ಸಾಹಿತ್ಯ (Dublin Literature)ಪ್ರಶಸ್ತಿ**

ಐರಿಷ್ ಲೇಖಕ "ಕೆವಿನ್ ಬಾರ್ರಿ" ಅವರ ಪ್ರಥಮ ಕಾದಂಬರಿ "ಸಿಟಿ ಆಫ್ ಬೊಹೆನ್ (City of Bohane)" "ಅಂತರರಾಷ್ಟ್ರೀಯ IMPAC ಡಬ್ಲಿನ್ ಸಾಹಿತ್ಯ" ಪ್ರಶಸ್ತಿಯನ್ನು ಪಡೆದುಕೊಂಡಿದೆ. 44 ದೇಶಗಳಿಂದ ನಾಮಾಂಕಿತಗೊಂಡಿದ್ದ, 153 ಲೇಖಕರನ್ನು ಹಿಂದಿಕ್ಕಿ ಕೆವಿನ್ ಬಾರ್ರಿ ಅವರು ಈ ಪ್ರತಿಷ್ಠಿತ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದ್ದಾರೆ.

**ಕೆವಿನ್ ಬಾರ್ರಿ**:

- ಕೆವಿನ್ ಬಾರ್ರಿ ಐರಿಷ್ ನ ಉದಯೋನ್ಮುಖ ಲೇಖಕ. ಮೂಲತಃ ಲೆಮಿರಿಕ್ ನವರಾದ ಇವರು ಸದ್ಯ ಸ್ಲಿಗೊ ನಗರದಲ್ಲಿ ವಾಸವಾಗಿದ್ದಾರೆ.
- "ಸಿಟಿ ಆಫ್ ಬೊಹೆನ್" ಇವರ ಪ್ರಥಮ ಕಾದಂಬರಿ. "ದೇರ್ ಆರ್ ಲಿಟ್ಲ್ ಕಿಂಗ್ ಡಮ್ಸ್ (2007)" ಮತ್ತು "ಡಾರ್ಕ್ ಲೈಸ್ ದ ಐಲ್ಯಾಂಡ್ (2012)" ಇವು ಕೆವಿನ್ ಅವರ ಎರಡು ಸಣ್ಣ ಕತೆಗಳ ಸಂಕಲನ.

**IMPAC ಡಬ್ಲಿನ್ ಸಾಹಿತ್ಯ ಪ್ರಶಸ್ತಿ**:

- ಇಂಗ್ಲೀಷ್ ಅಥವಾ ಇಂಗ್ಲೀಷ್ ಗೆ ಭಾಷಾಂತರಗೊಂಡ ಕಾದಂಬರಿಗಳಿಗೆ ನೀಡಲಾಗುವು ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಡಬ್ಲಿನ್ ಲೈಬ್ರರಿ ನೀಡುತ್ತಿದೆ.
- ವಿಶ್ವದ ಪ್ರಮುಖ ನಗರಗಳಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳ ಮೂಲಕ ನಾಮಾ ನಿರ್ದೇಶನಗೊಂಡ ಪುಸ್ತಕಗಳನ್ನು ಮಾತ್ರ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ.

- ವಾರ್ಷಿಕವಾಗಿ ನೀಡಲಾಗುವ ಈ ಪ್ರಶಸ್ತಿಯು 100000 ಯುರೋ ನಗದನ್ನು ಒಳಗೊಂಡಿರುತ್ತದೆ. ಒಂದು ವೇಳೆ ಭಾಷಾಂತರಗೊಂಡ ಕಾದಂಬರಿಯಾದರೇ ಮೂಲ ಲೇಖಕರಿಗೆ 75,000 ಯುರೋ ಮತ್ತು ಭಾಷಾಂತರ ಮಾಡಿದವರಿಗೆ 25,000 ಯುರೋ ನೀಡಲಾಗುತ್ತದೆ.

**ಆಹಾರ ಮತ್ತು ಕೃಷಿ ಸಂಘಟನೆ (FAO) ಪ್ರಶಸ್ತಿ ಪ್ರಕಟ**

ವಿಶ್ವಸಂಸ್ಥೆಯ ವಿಶೇಷ ಪ್ರತಿನಿಧಿಯಾದ "ಆಹಾರ ಮತ್ತು ಕೃಷಿ ಸಂಘಟನೆ (Food and Agriculture Organisation)" ಹಸಿವು ಮತ್ತು ಬಡತನ ನಿವಾರಣೆಗೆ ಶ್ರಮಿಸುವ ಸಂಸ್ಥೆಗಳಿಗೆ ನೀಡಲಾಗುವ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಜೂನ್ 15 ರಂದು ರೋಮ್ ನಲ್ಲಿ ನಡೆಯಲಿರುವ 38 ನೇ FAO ಸಮ್ಮೇಳನದಂದು ಈ ಪ್ರಶಸ್ತಿಗಳನ್ನು ವಿತರಿಸಲಾಗುವುದು. ಭಾರತದ NGO ಸಂಸ್ಥೆಯಾದ "ಸೇವಾ" ಸಹ ಈ ಬಾರಿ ಪ್ರಶಸ್ತಿಗೆ ಭಾಜನವಾಗಿದೆ.

- **ಜಾಕಸ್ ದಿಯುಫ್ ಪ್ರಶಸ್ತಿ (Jacques Diouf Award)**: ಈ ಬಾರಿಯ ಜಾಕಸ್ ದಿಯುಫ್ ಪ್ರಶಸ್ತಿಯನ್ನು "ಯುರೋಪಿಯನ್ ಒಕ್ಕೂಟ (European Union)" ಮತ್ತು ಭಾರತದ NGO ಸಂಸ್ಥೆಯಾದ "ಸೇವಾ (Self Employment Woman's Association (SEVA))" ಸಂಸ್ಥೆ ಜಂಟಿಯಾಗಿ ಪಡೆದುಕೊಂಡಿವೆ. ಯುರೋಪಿಯನ್ ಒಕ್ಕೂಟ ಆರಂಭಿಸಿರುವ "EU Food Facility" ಎಂಬ ವಿನೂತನ ಕಾರ್ಯಕ್ರಮಕ್ಕೆ ಈ ಪ್ರಶಸ್ತಿಯನ್ನು ನೀಡಲಾಗಿದೆ. EU Food Facility ಕಾರ್ಯಕ್ರಮವೂ ಸಣ್ಣ ರೈತರ ಜಮೀನಿನಲ್ಲಿ ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ 49 ದೇಶಗಳ ಸುಮಾರು 59 ಮಿಲಿಯನ್ ಜನರ ಜೀವನ ಮಟ್ಟವನ್ನು ಸುಧಾರಿಸಲು ಪ್ರಮುಖ ಪಾತ್ರವಹಿಸಿದೆ.

  **ಸೇವಾ ಸಂಸ್ಥೆ**:1972 ರಿಂದ ಕಾರ್ಯನಿರತವಾಗಿರುವ ಸೇವಾ ಸಂಸ್ಥೆಯು, ಗ್ರಾಮೀಣ ಬಡ ಮಹಿಳೆಯರಿಗೆ ಸ್ವಉದ್ಯೋಗ ಅವಕಾಶ ಕಲ್ಪಿಸುವ ಮೂಲಕ ಮಹಿಳೆಯರ ಜೀವನವನ್ನು ಹಸಿರಾಗಿಸುವಲ್ಲಿ ಅತ್ಯಂತ ಯಶಸ್ಸು ಕಂಡಿದೆ. ಸ್ವಉದ್ಯೋಗ ಸೃಷ್ಟಿ ಮೂಲಕ ಬಡತನ ಮತ್ತು ಹಸಿವು ನಿವಾರಣೆಗೆ ಈ ಸಂಸ್ಥೆ ನೀಡಿರುವ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಮಹಿಳಾ ಹಕ್ಕು ಹೋರಾಟಗಾರ್ತಿ "ಇಳಾ ಭಟ್" ಈ ಸಂಸ್ಥೆಯ ಸ್ಥಾಪಕಿ.
- **"ಬೊಯರ್ಮ ಪ್ರಶಸ್ತಿ (Boerma Award)":** ಕೃಷಿ, ಆಹಾರ ಭದ್ರತೆ ಮತ್ತು ಬಡತನ ನಿವಾರಣೆ ಮೂಲಕ ಸಹಸ್ರಮಾನದ ಅಭಿವೃದ್ಧಿ ಗುರಿ (Millennium Development Goal)ಯನ್ನು ತಲುಪಲು ಶ್ರಮಿಸುವ ಪತ್ರಕರ್ತ/ಪತ್ರಕರ್ತರಿಗೆ ಎರಡು ವರ್ಷಗಳಿಗೊಮ್ಮೆ ನೀಡಲಾಗುವ ಈ ಪ್ರಶಸ್ತಿಗೆ " ದಿ ಗಾರ್ಡಿಯನ್ (The Gaurdian)" ಪತ್ರಿಕೆಯ ಜಾಗತಿಕ ಅಭಿವೃದ್ಧಿ ತಂಡಕ್ಕೆ ನೀಡಲಾಗಿದೆ.
- **"ಎಡೌಡ ಸೌಮ ಪ್ರಶಸ್ತಿ (Edourd Saouma Award)":** FAO ತಾಂತ್ರಿಕ ಸಹಕಾರ ಕಾರ್ಯಕ್ರಮದಡಿ ಜಾರಿಗೊಳಿಸಲಾಗುವ ಯೋಜನೆಯನ್ನು ಸಮರ್ಪಕವಾಗಿ ಅನುಷ್ಟಾನಗೊಳಿಸುವ ಸಂಸ್ಥೆಗೆ ನೀಡಲಾಗುವ ಈ ಪ್ರಶಸ್ತಿಯನ್ನು "ಕೀನ್ಯಾದ ಅರಣ್ಯ ಸೇವೆಗೆ" ನೀಡಲಾಗಿದೆ. ಪೂರ್ವ ಆಫ್ರಿಕಾದಲ್ಲಿ ಅತಿ ದೊಡ್ಡ ಅರಣ್ಯವೆನಿಸಿರುವ "ಮೌ ಅರಣ್ಯ" ದಲ್ಲಿ ಸುಸ್ಥಿರ ಜೀವನೋಪಾಯ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿದಕ್ಕಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- **"ಮಾರ್ಗರಿಟ ಲಿಝುರ್ರಗ ಮೆಡಲ್ (Margarita Lizarraga Medal) 2012-13":** ಮಧ್ಯ ಅಮೆರಿಕಾ ರಾಷ್ಟ್ರಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ "ನೀತಿ ಸಂಹಿತೆ" ಜಾರಿಗೊಳಿಸುವ ಮೂಲಕ ಸುಸ್ಥಿರ ಮೀನುಗಾರಿಕೆ ಮತ್ತು ಮತ್ಸ್ಯೋದ್ಯಮ ಅಭಿವೃದ್ಧಿಗೆ ಶ್ರಮಿಸಿದ "The organization del Sector Pesquero y Acuicola del Istmo Centroamericano" ಸಂಸ್ಥೆಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ.

**ಆಹಾರ ಮತ್ತು ಕೃಷಿ ಸಂಘಟನೆ :**

- ಆಹಾರ ಮತ್ತು ಕೃಷಿ ಸಂಘಟನೆ ವಿಶ್ವಸಂಸ್ಥೆಯ ವಿಶೇಷ ಪ್ರತಿನಿಧಿಯಾಗಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಹಸಿವನ್ನು ನೀಗಿಸಲು ಪ್ರಯತ್ನ ನಡೆಸುತ್ತಿದೆ. ಕೃಷಿ, ಅರಣ್ಯ ಮತ್ತು ಮೀನುಗಾರಿಕೆ ಉದ್ಯೋಗವನ್ನು ಆಧುನೀಕರಣಗೊಳಿಸಿ ಅಭಿವೃದ್ಧಿಪಡಿಸುತ್ತಿದೆ. ಈ ಮೂಲಕ ಎಲ್ಲರಿಗೂ ಉತ್ತಮ ಪೌಷ್ಠಿಕಾಂಶ ಮತ್ತು ಆಹಾರ ಭದ್ರತೆಯನ್ನು ಒದಗಿಸುವ ಭರವಸೆ ನೀಡುತ್ತಿದೆ.
- FAO ಅನ್ನು 1945 ರ ಅಕ್ಟೋಬರ್ 15 ರಂದು ಕೆನಡಾದ ಕ್ಯುಬೆಕ್ ನಗರದಲ್ಲಿ ಸ್ಥಾಪಿಸಲಾಯಿತು. ನಂತರ 1951 ರಲ್ಲಿ ಇದರ ಪ್ರಧಾನ ಕಚೇರಿಯನ್ನು ವಾಷಿಂಗ್ಟನ್ ಡಿಸಿ ಯಿಂದ ಇಟಲಿಯ ರೋಮ್ ಗೆ ಸ್ಥಳಾಂತರಿಸಲಾಯಿತು.

ಪ್ರಸ್ತುತ ಈ ಸಂಘಟನೆಯು 191 ಸದಸ್ಯ ರಾಷ್ಟ್ರಗಳನ್ನು ಹೊಂದಿದೆ

**ಸಾರ್ಕ್ (SAARC) ಚಲನಚಿತ್ರೋತ್ಸವ : ಭಾರತಕ್ಕೆ ಮೂರು ಪ್ರಶಸ್ತಿ**

ಕೊಲೊಂಬೊದಲ್ಲಿ ಇತ್ತೀಚೆಗೆ ನಡೆದ 3ನೇ ಸಾರ್ಕ್ ಚಲನಚಿತ್ರೋತ್ಸವದಲ್ಲಿ ಭಾರತ ಮೂರು ವಿಭಾಗಗಳಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಅತ್ಯುತ್ತಮ ಚಿತ್ರ, ಉತ್ತಮ ನಿರ್ದೇಶಕ ಮತ್ತು ಆಯ್ಕೆಗಾರರ ಪ್ರಶಂಸನೀಯ ವಿಭಾಗದಲ್ಲಿ ಭಾರತ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

**ಪ್ರಶಸ್ತಿ ವಿವರ**:

- ಅತ್ಯುತ್ತಮ ಚಿತ್ರ: "ಪಾನ್ ಸಿಂಗ್ ತೊಮರ್"
- ಅತ್ಯುತ್ತಮ ನಿರ್ದೇಶಕ: ಟಿಗ್ ಮನ್ನು ಧೂಲಿಯಾ
- ಆಯ್ಕೆಗಾರರ ಪ್ರಶಂಸೆ: ಕೌಶಲ್ ಓಜಾ (ಆಪ್ಟರ್ ಗ್ಲೊ ಕಿರುಚಿತ್ರಕ್ಕಾಗಿ)

ಸಾರ್ಕ್ ಸದಸ್ಯ ರಾಷ್ಟ್ರಗಳಾದ ಬಾಂಗ್ಲಾದೇಶ, ಭೂತಾನ್, ಭಾರತ, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ ಸಿನಿಮಾಗಳು ಮತ್ತು ಕಿರುಚಿತ್ರಗಳು ಪ್ರಶಸ್ತಿಯ ಅಂಗಳದಲ್ಲಿ ಇದ್ದವು.

**"ಹ್ಯೂಗೋ ಷಾವೇಝ್" ಪತ್ರಿಕೋದ್ಯಮ ಪ್ರಶಸ್ತಿ-2013**

ವೆನುಜುವೆಲಾದ ಮಾಜಿ ಅಧ್ಯಕ್ಷ "ಹ್ಯೂಗೋ ಷಾವೇಝ್" ಅವರಿಗೆ ಮರಣೋತ್ತರವಾಗಿ "ಸೈಮನ್ ಬೊಲಿವರ್ ನ್ಯಾಷನಲ್ ಆವಾರ್ಡ್ ಆಫ್ ಜರ್ನಲಿಸಂ-2013 (Simon Bolivar National Award of Journalism-2013)" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

- ವೆನುಜುವೆಲಾದ ಅಧ್ಯಕ್ಷರಾಗಿ "ಹ್ಯೂಗೋ ಷಾವೇಝ್" ಮಾರ್ಚ್ 5, 2013 ರಂದು ದೀರ್ಘಕಾಲದ ಕ್ಯಾನ್ಸರ್ ರೋಗದ ಕಾರಣ ವಿಧಿವಶರಾದರು.
- ಷಾವೇಝ್ ಅವರು ವಿಶ್ವದ ತುಳಿತಕ್ಕೊಳಗಾದವರ ಪರವಾಗಿ ಧ್ವನಿಗೂಡಿಸಿದ್ದರು ಮತ್ತು ಮಾಧ್ಯಮಗಳಲ್ಲಿ ಪ್ರಕಟವಾಗುವ ಸುಳ್ಳು ಸುದ್ದಿಗಳ ವಿರುದ್ಧ ಹೋರಾಟ ನಡೆಸಿದ್ದನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಿರುವುದಾಗಿ ಆಯ್ಕೆ ಸಮಿತಿ ತಿಳಿಸಿದೆ.

**ಶಾಂಘೈ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ: ರಷ್ಯಾದ "ದಿ ಮೇಜರ್" ಚಿತ್ರಕ್ಕೆ ಉತ್ತಮ ಚಿತ್ರ ಪ್ರಶಸ್ತಿ**

ಶಾಂಘೈ ಅಂತರರಾಷ್ಟ್ರೀಯ ಚಲನಚಿತ್ರೋತ್ಸವನ್ನು ಜೂನ್ 18 ರಿಂದ ಜೂನ್ 23 ರವರೆಗೆ ಶಾಂಘೈನಲ್ಲಿ ಆಯೋಜಿಸಲಾಗಿತ್ತು. ಒಂಬತ್ತು ದಿನಗಳ ಕಾಲ ಅದ್ದೂರಿಯಾಗಿ ನಡೆದ ಈ ಚಿತ್ರೋತ್ಸವದಲ್ಲಿ 112 ದೇಶಗಳ ಸುಮಾರು 1665 ಸಿನಿಮಾಗಳನ್ನು ಪ್ರದರ್ಶಿಸಲಾಯಿತು. ಆಸ್ಕರ್ ಪ್ರಶಸ್ತಿ ವಿಜೇತ ನಿರ್ದೇಶಕ "ಟಾಮ್ ಹೂಪರ್" ರವರ ನೇತೃತ್ವದ ಆಯ್ಕೆ ಸಮಿತಿ ಆಯ್ಕೆ ಮಾಡಿದ ಪ್ರಶಸ್ತಿಗಳ ವಿವರ ಇಲ್ಲಿದೆ.

- **ಅತ್ಯುತ್ತಮ ಚಿತ್ರಕ್ಕೆ ನೀಡುವ "ಗೋಲ್ಡನ್ ಗೊಬ್ಲೆಟ್" ಪ್ರಶಸ್ತಿ**: ರಷ್ಯಾದ "ದಿ ಮೇಜರ್"
- **ಅತ್ಯುತ್ತಮ ನಿರ್ದೇಶಕ:** ಯೂರಿ ಬೈಕೆವ್ (ದಿ ಮೇಜರ್)
- **ಅತ್ಯುತ್ತಮ ಚಿತ್ರಕಥೆ, ಸಿನಿಮಾಟೊಗ್ರಾಫಿ ಮತ್ತು ಆಯ್ಕೆಗಾರರ ಚಿತ್ರ:** ಸ್ವೀಡನ್ ನ "ರಿಲೆಯನ್ಸ್" ಚಿತ್ರ
- **ಗೋಲ್ಡನ್ ಗೊಬ್ಲೆಟ್ ಅತ್ಯುತ್ತಮ ನಟ:** ಹಾಂಕಾಂಗ್ ನ ನಟ "ನಿಕ್ ಚೆಯುಂಗ್ಸ (ಚಿತ್ರ: ಅನ್ ಬೀಟೆಬಲ್ )"
- **ಅತ್ಯುತ್ತಮ ನಟಿ:** ಮಲೇಷಿಯಾದ 10 ವರ್ಷದ ಬಾಲೆ ಕ್ರಿಸ್ಟಲ್ ಲೀ ಪಡೆದುಕೊಂಡರು. ಈ ಪ್ರಶಸ್ತಿಯನ್ನು ಪಡೆದುಕೊಂಡ ಅತ್ಯಂತ ಕಿರಿಯ ನಟಿ ಎನಿಸಿದರು.

**ಶಾಂಘೈ ಅಂತರರಾಷ್ಟ್ರೀಯ ಚಲಚಿತ್ರೋತ್ಸವ**:

- ಟೋಕಿಯೊ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ನಂತರ ಏಷ್ಯಾದಲ್ಲಿ ಅತಿ ದೊಡ್ಡ ಚಲನಚಿತ್ರೋತ್ಸವೆಂದರೆ ಶಾಂಘೈ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ.
- ಪ್ರಥಮ ಬಾರಿಗೆ ಈ ಚಿತ್ರೋತ್ಸವವನ್ನು ಅಕ್ಟೋಬರ್ 1993 ರಲ್ಲಿ ಆಯೋಜಿಸಲಾಯಿತು. ಅಂದಿನಿಂದ ಎರಡು ವರ್ಷಕ್ಕೊಮ್ಮೆ 2001 ರಿಂದ ಆಯೋಜಿಸಿಕೊಂಡು ಬರಲಾಗುತ್ತಿದೆ. 2003 ರಲ್ಲಿ ಸಾರ್ಸ್ ರೋಗ ವಿಶ್ವದಲ್ಲೆಡೆ ಪಸರಿಸಿದ ಕಾರಣ ಈ ಚಿತ್ರೋತ್ಸವವನ್ನು ಆಯೋಜಿಸಿರಲ್ಲಿಲ್ಲ.

**"ಸಂಜೀವ್ ಗೊಯೆಂಕಾ"ಗೆ "2013 ಇಂಡಿಯನ್ ಬ್ಯುಸಿನೆಸ್ ಲೀಡರ್ ಆಫ್ ದಿ ಇಯರ್" ಪ್ರಶಸ್ತಿ**

ಗೊಯೆಂಕಾ ಗ್ರೂಪ್ಸ್ ನ ಮುಖ್ಯಸ್ಥರಾದ "ಸಂಜೀವ್ ಗೊಯೆಂಕಾ" ರವರನ್ನು 2013 ನೇ ಸಾಲಿನ "ಇಂಡಿಯನ್ ಬ್ಯುಸಿನೆಸ್ ಲೀಡರ್ ಆಫ್ ದಿ ಇಯರ್ (Business Leader of the Year)" ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಯುನೈಟೆಡ್ ಕಿಂಗ್ ಡಮ್ ನ ಬೆಲ್ ಪಸ್ಟ್ ನಲ್ಲಿ ನಡೆದ ಜಾಗತಿಕ ಭಾರತ ಉದ್ಯಮಿಗಳ ಸಭೆಯಲ್ಲಿ ವಾಣಿಜ್ಯ ಮತ್ತು ಕೈಗಾರಿಕ ಸಚಿವ ಆನಂದ್ ಶರ್ಮಾ ಅವರು ಗೊಯೆಂಕಾ ಅವರಿಗೆ ಈ ಪ್ರಶಸ್ತಿಯನ್ನು ವಿತರಿಸಿದರು.

- ಜಾಗತಿಕ ಭಾರತ ಉದ್ಯಮಗಳ ಸಭೆಯು ಭಾರತೀಯ ಉದ್ಯಮಿಗಳು ಮತ್ತು ಜಗತ್ತಿನ ಅಗ್ರಗಣ್ಯ ಉದ್ಯಮಿಗಳ ನಡುವಣ ಸಹಕಾರಕ್ಕಾಗಿ ಪ್ರಬಲ ವೇದಿಕೆಯನ್ನು ರಚಿಸುವ ಉದ್ದೇಶವನ್ನು ಹೊಂದಿದೆ.
- ಉದ್ಯಮ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದವರನ್ನು ಗೌರವಿಸುವ ಸಲುವಾಗಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.
- ಸಂಜೀವ್ ಗೊಯೆಂಕಾ ಅವರು ಪ್ರಸಿದ್ದ ಗೊಯೆಂಕಾ ಗ್ರೂಪ್ಸ್ ನ ಮುಖ್ಯಸ್ಥರಾಗಿದ್ದು, ರೂ 14,000 ಕೋಟಿ ಆಸ್ತಿಯ ಒಡೆಯರಾಗಿದ್ದಾರೆ. ಗಣಿಗಾರಿಕೆ, ವಿದ್ಯುತ್ ಉತ್ಪಾದನೆ, ಸಂಗೀತ ಮತ್ತು ಮನರಂಜನೆ ಸೇರಿದಂತೆ ಹಲವು ವಲಯಗಳಲ್ಲಿ ಗೊಯೆಂಕಾ ಗ್ರೂಪ್ಸ್ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದೆ.
- 2012 ನೇ ಸಾಲಿನ ಈ ಪ್ರತಿಷ್ಠಿತ ಪ್ರಶಸ್ತಿಗೆ ವೇದಾಂತ ಗ್ರೂಪ್ಸ್ ನ ಅನಿಲ್ ಅಗರವಾಲ್ ಈ ಪ್ರಶಸ್ತಿಗೆ ಭಾಜನರಾಗಿದ್ದರು.

**ವಿಶ್ವಸಂಸ್ಥೆ ಸಾರ್ವಜನಿಕ ಸೇವಾ ಪ್ರಶಸ್ತಿ ಪ್ರಕಟ: ಭಾರತದ ಮೂರು ಯೋಜನೆಗಳಿಗೆ ಈ ಬಾರಿ ಪ್ರಶಸ್ತಿ**

ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನದ ಅಂಗವಾಗಿ ನೀಡಲಾಗುವ ಸಾರ್ವಜನಿಕ ಸೇವಾ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, ಭಾರತ ಮೂರು ಜನಪರ ಯೋಜನೆಗಳು ಈ ಪ್ರಶಸ್ತಿಗೆ ಭಾಜನವಾಗಿವೆ. ಸಾರ್ವಜನಿಕ ಸೇವಾ ವಲಯದಲ್ಲಿ ಅತ್ಯುತ್ತಮ ಸೇವೆ ನೀಡಿರುವುದನ್ನು ಗುರುತಿಸಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ವಿಶ್ವಸಂಸ್ಥೆ ನೀಡುತ್ತಿದೆ.

**ಪ್ರಶಸ್ತಿ ಪಡೆದ ಯೋಜನೆಗಳು**:

- **ಕೇರಳದ ಸಮೂಹ ಸಂಪರ್ಕ ಕಾರ್ಯಕ್ರಮ**: ಕೇರಳ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರು ಆರಂಭಿಸಿರುವ ಸಮೂಹ ಸಂಪರ್ಕ (Mass Contact) ಕಾರ್ಯಕ್ರಮ ವಿಶ್ವದ ಗಮನ ಸೆಳೆದಿದ್ದು, ಈ ಪ್ರಶಸ್ತಿಗೆ ಪಾತ್ರವಾಗಿದೆ. ಈ ಕಾರ್ಯಕ್ರಮದಡಿ ಮುಖ್ಯಮಂತ್ರಿಗಳು ಪ್ರತಿ ನಗರಗಳಿಗೆ ಭೇಟಿ ನೀಡಿ ಜನರ ಮಧ್ಯೆ ಬೆರೆತು ಅವರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ನೀಡುತ್ತಿದ್ದಾರೆ. ಜನರು ಮತ್ತು ಸರ್ಕಾರದ ನಡುವೆ ನೇರವಾಗಿ ಸಂಪರ್ಕ ಬೆಳೆಸಿ ಮಧ್ಯವರ್ತಿಗಳ ಹಾವಳಿ ಮತ್ತು ಲಂಚಗುಳಿತನಕ್ಕೆ ಕಡಿವಾಣ ಹಾಕುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ.
- **ಜಾರ್ಖಂಡ್ ನ ಧನಾಬಾದ್ ಜಿಲ್ಲೆಯ "ಸ್ವಾವಲಂಭನ" ಯೋಜನೆ:** ಪಿಂಚಣಿ ವ್ಯವಸ್ಥೆಯನ್ನು ಗಣಕೀಕೃತಗೊಳಿಸಿ ಪಿಂಚಣಿಯನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾಯಿಸುವ ಮೂಲಕ ಸಾರ್ವಜನಿಕ ಸ್ನೇಹಿ ಯೋಜನೆ ಎನಿಸಿಕೊಂಡಿದೆ.
- **ಮಧ್ಯಪ್ರದೇಶದ "ಗ್ರಾಮೀಣ ಹಾತ್ ಕಾರ್ಯಕ್ರಮ":** ಮಧ್ಯಪ್ರದೇಶದ ಗೃಹ ಮತ್ತು ಗ್ರಾಮೀಣ ಕೈಗಾರಿಕೆ ಇಲಾಖೆ ಜಾರಿಗೊಳಿಸಿರುವ ಈ ಯೋಜನೆಯಡಿ ಮಹಿಳಾ ಸ್ವ-ಸಹಾಯ ಗುಂಪುಗಳನ್ನು ರಚಿಸಿ, ಮಹಿಳೆಯರೇ ಮಾರುಕಟ್ಟೆಗಳನ್ನು (ಹಾತ್) ನಿರ್ವಹಿಸುತ್ತಿದ್ದಾರೆ. ಈ ಯೋಜನೆಯ ಮೂಲಕ ಮಹಿಳೆಯರು ನಿರ್ವಹಣಾ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದಲ್ಲದೇ, ವೈಯಕ್ತಿಕವಾಗಿ ವ್ಯವಹಾರಗಳನ್ನು ನಿಭಾಯಿಸಿಕೊಂಡು ಜೀವನವನ್ನು ಉತ್ತಮ ಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

**"ಡಾ.ವಿಲಿಯಂ ದಾರ್" ಗೆ: 2013 ನೇ ಸಾಲಿನ ಎಂ ಎಸ್ ಸ್ವಾಮಿನಾಥನ್ ಕೃಷಿ ನಾಯಕತ್ವ ಪ್ರಶಸ್ತಿ**

ಖ್ಯಾತ ಕೃಷಿ ವಿಜ್ಞಾನಿ, "ಇಂಟರ್ ನ್ಯಾಷನಲ್ ಕ್ರಾಪ್ ರಿಸರ್ಚ್ ಇನ್ ಸ್ಟಿಟ್ಯೂಟ್ ಫಾರ್ ಸೆಮಿ-ಏರಿಡ್ ಟ್ರಾಫಿಕ್ಸ್ (ಇಕ್ರಿಸ್ಯಾಟ್)" ನ ನಿರ್ದೇಶಕ ಡಾ.ವಿಲಿಯಂ ದಾರ್ ಅವರಿಗೆ 2013 ನೇ ಎಂ ಎಸ್ ಸ್ವಾಮಿನಾಥನ್ ಕೃಷಿ ನಾಯಕತ್ವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

- ಬೋಧಕರಾಗಿ ಹಾಗೂ ವಿಜ್ಞಾನಿಯಾಗಿ ಕೃಷಿ ಕ್ಷೇತ್ರಕ್ಕೆ ದಾರ್ ಅವರು ನೀಡಿರುವ ಅಪಾರ ಸೇವೆಯನ್ನು ಗಮನಿಸಿ "ಟ್ರಸ್ಟ್ ಫಾರ್ ಅಡ್ವಾನ್ಸ್ ಮೆಂಟ್ ಆಫ್ ಅಗ್ರಿಕಲ್ಚರ್ ಸೈನ್ಸ್" ದಾರ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.
- ಯೋಜನಾ ಆಯೋಗದ ಸದಸ್ಯರಾದ ಕಸ್ತೂರಿ ರಂಗನ್ ಅವರು ದಾರ್ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ವಿತರಿಸಿದರು.

**ಪ್ರಶಸ್ತಿಯ ಬಗ್ಗೆ:**

- ಭಾರತದ ಹಸಿರು ಕ್ರಾಂತಿ ಪಿತಾಮಹ ಡಾ.ಎಂ.ಎಸ್ ಸ್ವಾಮಿನಾಥನ್ ಅವರ ಹೆಸರಿನಡಿ ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ಈ "ಟ್ರಸ್ಟ್ ಫಾರ್ ಅಡ್ವಾನ್ಸ್ ಮೆಂಟ್ ಆಫ್ ಅಗ್ರಿಕಲ್ಚರ್ ಸೈನ್ಸ್ ನೀಡುತ್ತಾ ಬರುತ್ತಿದೆ". ಈ ಪ್ರಶಸ್ತಿಯನ್ನು ಭಾರತದ "ವರ್ಲ್ಡ್ ಫುಡ್ ಪ್ರೈಜ್" ಎಂದೇ ಕರೆಯಲಾಗುತ್ತದೆ.
- ಸಾಮಾನ್ಯ ವ್ಯಕ್ತಿಯ ಜೀವನದ ಮೇಲೆ ಸಕಾರಾತ್ಮಕ ಪರಿಣಾಮ ಬೀರಬಹುದಾದಂತಹ ಸಂಶೋಧನೆಯನ್ನು ಕೈಗೊಂಡ ಕೃಷಿ ವಿಜ್ಞಾನಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

- ವಿಶ್ವದ ಹಸಿರು ಕ್ರಾಂತಿ ಪಿತಾಮಹ ಮತ್ತು ಕೃಷಿ ಕ್ಷೇತ್ರದಲ್ಲಿ ನೊಬೆಲ್ ಪಡೆದಿರುವ ಏಕೈಕ ವಿಜ್ಞಾನಿ ಡಾ.ನಾರ್ಮನ್ ಬೋರ್ಲಾಗ್ ಅವರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. ಅನಂತರ ಈ ಪ್ರಶಸ್ತಿಯನ್ನು 5 ವಿಜ್ಞಾನಿಗಳಿಗೆ ನೀಡಲಾಗಿದ್ದು, ಡಾ.ವಿಲಿಯಂ ಈ ಪ್ರಶಸ್ತಿಯನ್ನು ಪಡೆದ ಏಳನೇಯವರು.

ಕರುನಾಡು ಎಗ್ಸಾಮ್ಸ್

## ಚೂರು ಪಾರು ಸುದ್ದಿಗಳು

- **IPL ಅಧ್ಯಕ್ಷ ಸ್ಥಾನಕ್ಕೆ ರಾಜೀವ್ ಶುಕ್ಲಾ ವಿದಾಯ**: ಸ್ಪಾಟ್ ಫಿಕ್ಸಿಂಗ್ ಹಗರಣದ ಹಿನ್ನಲೆಯಲ್ಲಿ ರಾಜೀವ್ ಶುಕ್ಲಾ ರವರು ಐಪಿಎಲ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಸೆಪ್ಟೆಂಬರ್ 18, 2011 ರಲ್ಲಿ ಶುಕ್ಲಾ ರವರು ಐಪಿಎಲ್ ನ ಅಧ್ಯಕ್ಷರಾಗಿ ನೇಮಕಗೊಂಡಿದ್ದರು.

- **ವಿಶ್ವದ ಏಳು ಶಿಖರ ಏರಿದ ಪ್ರೇಮಲತಾ ಅಗರವಾಲ್:** ಜೆಮ್ ಶೆಡ್ಪುರ ನಿವಾಸಿ, ಪರ್ವತಾರೋಹಿ ಪ್ರೇಮಲತಾ ಅಗರವಾಲ್ ರವರು ವಿಶ್ವದ ಏಳು ಶಿಖರಗಳನ್ನು ಏರುವ ಮೂಲಕ ಈ ಸಾಧನೆಗೈದ ಪ್ರಥಮ ಭಾರತೀಯ ಮಹಿಳೆ ಎನಿಸಿದರು. ಮೇ 23 ರಂದು ಉತ್ತರ ಅಮೆರಿಕಾದ McKinley ಶಿಖರವನ್ನು ಏರುವ ಮೂಲಕ ಅವರು ಈ ಸಾಧನೆಗೈದರು. 43 ವರ್ಷದ ಪ್ರೇಮಲತಾ ರವರು ಪದ್ಮಶ್ರೀ ಪ್ರಶಸ್ತಿಗೂ ಭಾಜನರಾಗಿದ್ದಾರೆ.

- **ಇನ್ಫೋಸಿಸ್ ಗೆ ಮತ್ತೆ ನಾರಾಯಣಮೂರ್ತಿ**: ಇನ್ಫೋಸಿಸ್ ಕಂಪನಿಯ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ರವರು ಅಚ್ಚರಿಯ ಬೆಳವಣಿಗೆಯೊಂದರಲ್ಲಿ ಮತ್ತೆ ಕಂಪನಿಗೆ ಮರಳಿದ್ದಾರೆ. ಎರಡು ವರ್ಷಗಳ ಹಿಂದೆ ಕಂಪನಿಯಿಂದ ನಿವೃತ್ತಿ ಹೊಂದಿದ್ದ ಅವರನ್ನು ಮತ್ತೆ ಸಂಸ್ಥೆಯ ಕಾರ್ಯನಿರ್ವಾಹಕ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಮೂರ್ತಿ ರವರ ಆಗಮನದಿಂದಾಗಿ ಹುದ್ದೆಗಳಲ್ಲಿ ಅಲ್ಪ ಬದಲಾವಣೆಗಳು ಆಗಿದೆ. ಹಾಲಿ ಅಧ್ಯಕ್ಷರಾಗಿದ್ದ ಕೆ.ವಿ.ಕಾಮತ್ ರವರು ಇನ್ನು ಮುಂದೆ ಸಂಸ್ಥೆಯ ಸ್ವತಂತ್ರ ನಿರ್ದೇಶಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಸಹ ಅಧ್ಯಕ್ಷರಾಗಿದ್ದ ಎಸ್.ಗೋಪಾಲಕೃಷ್ಣನ್ ರವರ ಹುದ್ದೆಯಲ್ಲೂ ಬದಲಾಗಿದ್ದು, ಗೋಪಾಲಕೃಷ್ಣನ್ ರವರು ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ಮುಂದುವರೆಯಲಿದ್ದಾರೆ.

- **ದೆಹಲಿಯಲ್ಲಿ ಅಮೋನಿಯಂ ನೈಟ್ರೇಟ್ ಬಳಕೆಗೆ ನಿಯಂತ್ರಣ**: ದೆಹಲಿಯಲ್ಲಿ ಅಮೋನಿಯಂ ನೈಟ್ರೇಟ್ ನ್ನು ಮುಕ್ತವಾಗಿ ಮಾರಾಟ ಮಾಡುವುದಕ್ಕೆ ಲೈಸೆನ್ಸ್ ಹೊಂದುವುದನ್ನು ಕಡ್ಡಾಯಗೊಳಿಸಲಾಗಿದೆ. ಅಲ್ಲದೇ ಮಾರಾಟದಾರರು ಇನ್ನು ಮುಂದೆ ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ಬಹಿರಂಗಪಡಿಸಬೇಕು. ಆದರೆ ಶಾಲಾ ಕಾಲೇಜು, ಆಸ್ಪತ್ರೆಗಳು ಮತ್ತು ಲ್ಯಾಬೋರೇಟರಿಗಳು 5 ಕೆ.ಜಿ ಗಿಂತ ಕಡಿಮೆ ಪ್ರಮಾಣದಲ್ಲಿ ಅಮೋನಿಯಂ ನೈಟ್ರೇಟ್ ನ್ನು ಹೊಂದಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ನಡೆಸಲಾಗುತ್ತಿರುವ ಬಾಂಬ್ ಸ್ಫೋಟದಲ್ಲಿ ಅಮೋನಿಯಂ ನೈಟ್ರೇಟ್ ನ್ನು ಬಳಸಲಾಗುತ್ತಿರುವ ಕಾರಣ ಸರ್ಕಾರ ಈ ಕ್ರಮವನ್ನು ಕೈಗೊಂಡಿದೆ.

- **ಭಾರತ ಮತ್ತು ಥಾಯ್ಲೆಂಡ್ ನಡುವೆ ಹೆದ್ದಾರಿ ನಿರ್ಮಾಣಕ್ಕೆ ಮಾತುಕತೆ**: ಥಾಯ್ಲೆಂಡ್ ಪ್ರವಾಸದಲ್ಲಿರುವ ಭಾರತ ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಥಾಯ್ಲೆಂಡ್ ಪ್ರಧಾನಿ "ಯಿಂಗ್ ಲಕ್ ಶಿನ್ ವಾತ್ರ" ರವರು ಭಾರತ ಮತ್ತು ಥಾಯ್ಲೆಂಡ್ ನಡುವೆ ಸಂಪರ್ಕ ಕಲ್ಪಿಸುವ 3,200 ಕಿ.ಮೀ ಉದ್ದದ ಹೆದ್ದಾರಿ ನಿರ್ಮಾಣವನ್ನು 2016 ರ ವೇಳೆಗೆ ಪೂರ್ಣಗೊಳಿಸಲು ಸಮಾಲೋಚನೆ ನಡೆಸಿದರು. ಭಾರತ ಈಗಾಗಲೇ ಮಯಾನ್ಮಾರ್ ಗೆ 500 ಮಿಲಿಯನ್ ಡಾಲರ್ ಸಾಲದ ನೆರವನ್ನು ನೀಡಿದೆ. ಈ ಸಾಲದ ಸ್ವಲ್ಪ ಭಾಗವನ್ನು ರಸ್ತೆ ನಿರ್ಮಾಣಕ್ಕೆ ಬಳಸಲಿಕೊಳ್ಳಲು ಒಪ್ಪಿಗೆ ಸೂಚಿಸಿದೆ ಎಂದು ಹೇಳಲಾಗಿದೆ. ಈ ಮಹತ್ವಕಾಂಕ್ಷಿ ಯೋಜನೆ ಇಂದೊಮ್ಮೆ ಪೂರ್ಣಗೊಂಡರೆ ಭಾರತ ಮತ್ತು ಥಾಯ್ಲೆಂಡ್ ನಡುವಿನ ವ್ಯವಹಾರದಲ್ಲಿ ಸಾಕಷ್ಟು ಅಭಿವೃದ್ಧಿ ಕಾಣಲಿದೆ.

- **ಜಾಹೀರಾತಿಗೆ ಬಿತ್ತು ಕತ್ತರಿ**: ಟಿವಿ ಚಾನೆಲ್ ಗಳಲ್ಲಿ ಮಿತಿ ಇಲ್ಲದೇ ಪ್ರಸಾರವಾಗುವ ಜಾಹೀರಾತಿಗೆ ಕಡಿವಾಣ ಹಾಕಲು TRAI ನಿರ್ಧರಿಸಿದೆ. ಗಂಟೆಗೆ ಕೇವಲ 12 ನಿಮಿಷ ಮಾತ್ರ ಜಾಹೀರಾತನ್ನು ಪ್ರಸಾರ ಮಾಡುವಂತೆ TRAI ಆದೇಶ ಹೊರಡಿಸಿದ್ದು, ಅಕ್ಟೋಬರ್ 2013 ರಿಂದ ಈ ಆದೇಶ ಜಾರಿಗೆ ಬರಲಿದೆ. ಕಳೆದ ಎಂಟು ವರ್ಷಗಳಿಂದ ಈ ನಿಯಮ ಜಾರಿಯಲ್ಲಿದ್ದರೂ, ಅನುಷ್ಠಾನಗೊಂಡಿರಲಿಲ್ಲ, ಆದರೆ ವೀಕ್ಷಕರ ಹಿತದೃಷ್ಟಿ ಕಾಯುವ ದೃಷ್ಟಿಯಿಂದ TRAI ತನ್ನ ನಿಲುವನ್ನು ಧೃಡಗೊಳಿಸಿದೆ.

- **ಹಾಕಿ ಇಂಡಿಯಾ ಆಯ್ಕೆ ಸಮಿತಿ ಅಧ್ಯಕ್ಷರಾಗಿ "ಗೋವಿಂದ"**: ಒಲಂಪಿಯನ್ ಬಿ.ಪಿ.ಗೋವಿಂದ ಅವರನ್ನು 9 ಜನ ಸದಸ್ಯರನ್ನು ಹೊಂದಿರುವ ಹಾಕಿ ಇಂಡಿಯಾ ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಸಮಿತಿಯೂ ಜುಲೈ 1 ರಿಂದ ಮುಂದಿನ ಒಂದು ವರ್ಷಗಳ ಕಾಲ ಕಾರ್ಯ ನಿರ್ವಹಿಸಲಿದ್ದು, ಹೊಸ ಪ್ರತಿಭೆಗಳನ್ನು ಆಯ್ಕೆಮಾಡಲಿದೆ. ಗೋವಿಂದ ರವರು 1972 ಮತ್ತು 1976 ರಲ್ಲಿ ನಡೆದ ಒಲಂಪಿಕ್ಸ್ ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 1973 ಮತ್ತು 1975 ರಲ್ಲಿ ನಡೆದ ವಿಶ್ವಕಪ್ ಮತ್ತು 1970, 1974 ಮತ್ತು 1978 ರಲ್ಲಿ ನಡೆದ ಮೂರು ಏಷ್ಯನ್ ಗೇಮ್ ನಲ್ಲೂ ಅವರು ಭಾಗವಹಿಸಿದ್ದರು.

- **ರಾಜ್ಯ ವಿಧಾನಸಭೆಯ ನೂತನ ಸ್ಪೀಕರ್ ಆಗಿ "ಕಾಗೋಡು ತಿಮ್ಮಪ್ಪ":** ರಾಜ್ಯ ವಿಧಾನಸಭೆಯ ನೂತನ ಸ್ಪೀಕರ್ ಆಗಿ ಹಿರಿಯ ಕಾಂಗ್ರೆಸಿಗ ಕಾಗೋಡು ತಿಮ್ಮಪ್ಪರವರು ಅವಿರೋಧವಾಗಿ ಆಯ್ಕೆಯಾದರು. ಸಾಗರ ವಿಧಾನಸಭೆ ಕ್ಷೇತ್ರದಿಂದ ಆಯ್ಕೆಯಾಗಿರುವ ಅವರು ಹದಿನಾಲ್ಕನೇ ವಿಧಾನಸಭೆಯ 19 ನೇ ವಿಧಾನಸಭಾಧ್ಯಕ್ಷರಾಗಿದ್ದಾರೆ.

- **ಘಾಜಿಯಾಬಾದ್ ನಲ್ಲಿ "ಕೇಂದ್ರ ತನಿಖಾ ತರಭೇತಿ ಶಾಲೆ":** ಆಂತರಿಕ ಭದ್ರತಾ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಸಲುವಾಗಿ ಕೇಂದ್ರ ಗೃಹ ಸಚಿವಾಲಯವೂ "ಕೇಂದ್ರಿಯ ತನಿಖಾ ತರಭೇತಿ ಶಾಲೆ (Central Detective Training School)" ನ್ನು ತೆರೆಯಲು ನಿರ್ಧರಿಸಿದೆ. ಘಾಜಿಯಾಬಾದ್ ನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಈ ತರಭೇತಿಯ ಶಾಲೆಯ ನಿರ್ಮಾಣಕ್ಕೆ ಕೇಂದ್ರ ಗೃಹ ಸಚಿವಾಲಯ 95 ಕೋಟಿಯನ್ನು ವ್ಯಯಿಸಲಿದೆ. ದಕ್ಷಿಣ ಏಷ್ಯಾದಲ್ಲೇ ಇಂತಹ ಸಂಸ್ಥೆ ಭಾರತದಲ್ಲಿ ಮೊದಲು ಸ್ಥಾಪನೆಯಾಗುತ್ತಿದ್ದು, ತನಿಖಾ ತಂತ್ರಗಳ ಬಗ್ಗೆ ತರಭೇತಿ ನೀಡುವುದು, ಡಿಜಿಟಲ್ ಸಾಕ್ಷಿಯನ್ನು ಸಂಗ್ರಹಿಸುವುದು, ನ್ಯಾಯತಮ್ಯ ನಿಪುಣತೆಯನ್ನು ಸುಧಾರಿಸುವ ಕೌಶಲ್ಯ ತರಭೇತಿಯನ್ನು ಇಲ್ಲಿ ನೀಡಲಾಗುವುದು.

- **T20 ಕ್ರಿಕೆಟ್ ನಲ್ಲಿ 4000 ರನ್ ಗಡಿ ದಾಟಿದ ಸುರೇಶ್ ರೈನಾ:** T20 ಕ್ರಿಕೆಟ್ ಪಂದ್ಯಗಳಲ್ಲಿ 4000 ರನ್ ಗಡಿದ ಭಾರತದ ಪ್ರಥಮ ಆಟಗಾರ ಎಂಬ ಹಿರಿಮೆಗೆ ಸುರೇಶ್ ರೈನಾ ಪಾತ್ರರಾದರು. ಐಪಿಎಲ್ ಆರನೇ ಆವೃತ್ತಿಯಲ್ಲಿ ಮುಂಬೈ ತಂಡದ ವಿರುದ್ದ 82 ರನ್ ಗಳಿಸುವ ಮೂಲಕ ರೈನಾ ಈ ಸಾಧನೆಗೈದರು. 195 ಪಂದ್ಯಗಳಲ್ಲಿ 36.50 ಸರಾಸರಿ ಮೂಲಕ 5548 ರನ್ ಗಳಿಸಿರುವ "ಬ್ರಾಡ್ ಹಾಡ್ಜ್" ರವರು T20 ಪಂದ್ಯಗಳಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ಆಟಗಾರ ಎನಿಸಿದ್ದಾರೆ. 145 ಪಂದ್ಯಗಳಲ್ಲಿ 5512 ರನ್ ಗಳಿಸಿರುವ "ಕ್ರಿಸ್ ಗೇಲ್" ಎರಡನೇ ಅತಿ ಹೆಚ್ಚು ರನ್ ಗಳಿಸಿರುವ ಆಟಗಾರ.

- **ದೇವಾನಂದ್ ಶರ್ಮಾ:** ಆಸ್ಟ್ರೇಲಿಯಾದ ಇಸ್ರೇಲ್ ನ ರಾಯಭಾರಿಯಾಗಿ ಭಾರತೀಯ ಆಸ್ಟ್ರೇಲಿಯನ್ ರಾಜತಾಂತ್ರಿಕ 37 ರ ಹರೆಯದ ದೇವಾನಂದ ಶರ್ಮಾ ಅವರನ್ನು ನೇಮಕಮಾಡಲಾಗಿದೆ. ಈ ಮೂಲಕ ಶರ್ಮಾ ಅವರು ಆಸ್ಟ್ರೇಲಿಯಾದ ಅತ್ಯಂತ ಕಿರಿಯ ವಯಸ್ಸಿನ ರಾಯಭಾರಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. "ದೇವ್ ಶರ್ಮ" ಎಂದೇ ಖ್ಯಾತರಾಗಿರುವ ಇವರು

ಆಸ್ಟ್ರೇಲಿಯಾದ ಎರಡನೇ ಭಾರತೀಯ ಮೂಲದ ರಾಜತಾಂತ್ರಿಕರಾಗಿದ್ದಾರೆ. ಪ್ರಸ್ತುತ ಪೀಟರ್ ವರ್ಗೀಸ್ ರವರು ಭಾರತದಲ್ಲಿ ಆಸ್ಟ್ರೇಲಿಯಾದ ರಾಯಭಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರು ಕೆನ್ಯಾ ಮೂಲದ ಮಲಯಾಳಿ ದಂಪತಿ ಪುತ್ರನಾಗಿದ್ದಾರೆ.

- **ನ್ಯಾಯಮೂರ್ತಿ ಕೌಲ್: ಪಂಜಾಬ್ ಮತ್ತು ಹರಿಯಾಣ ಮುಖ್ಯನ್ಯಾಯಾಧೀಶರು:** ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನ ಮುಖ್ಯನ್ಯಾಯಾಧೀಶರಾಗಿ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ರವರನ್ನು ರಾಷ್ಟ್ರಪತಿಗಳು ನೇಮಕ ಮಾಡಿದ್ದಾರೆ. 54 ವರ್ಷದ ಕೌಲ್ ರವರು ದೆಹಲಿ ಹೈಕೋರ್ಟ್ ನಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದರು.

- **ಬಾಲ್ಕೊ ಸಿಇಓ ಆಗಿ ರಮೇಶ್ ನಯರ್**: ಭಾರತ್ ಅಲ್ಯೂಮಿನಿಯಂ ಕಂಪನಿ (ಬಾಲ್ಕೊ)ಯ ನೂತನ ಸಿಇಓ ಆಗಿ ರಮೇಶ್ ನಯರ್ ರವರನ್ನು ನೇಮಿಸಲಾಗಿದೆ. ರಮೇಶ್ ಅವರು ಗುಂಜನ್ ಗುಪ್ತಾ ರವರಿಂದ ತೆರವಾಗಿದ್ದ ಸ್ಥಾನವನ್ನು ತುಂಬಲಿದ್ದಾರೆ. ಲೋಹ ಉದ್ಯಮದಲ್ಲಿ ರಮೇಶ್ ರವರು 20 ವರ್ಷಗಳ ಅನುಭವವನ್ನು ಹೊಂದಿದ್ದಾರೆ.

- **"ಲೈಡಿಯಾ ಸೆಕೆರ (Lydia Nsekera)" FIFA ಕಾರ್ಯಕಾರಿ ಸಮಿತಿಗೆ ನೇಮಕಗೊಂಡ ಮೊದಲ ಮಹಿಳೆ:** ಬುರುಂಡಿಯ "ಲೈಡಿಯಾ ಸೆಕೆರ" ರವರು ಫಿಪಾ (Federation Internaationale de Football Association (FIFA)) ಕಾರ್ಯಕಾರಿ ಸಮಿತಿಗೆ ಆಯ್ಕೆಯಾದ ಮೊದಲ ಮಹಿಳಾ ಸದಸ್ಯೆ ಎಂಬ ಹಿರಿಮೆಗೆ ಪಾತ್ರರಾದರು. ಮಾರಿಷಸ್ ನಲ್ಲಿ ನಡೆದ FIFA ಕಾಂಗ್ರೆಸ್ ಸಭೆಯಲ್ಲಿ "ಲೈಡಿಯಾ" ರವರನ್ನು ನಾಲ್ಕು ವರ್ಷಗಳ ಪೂರ್ಣ ಅವಧಿಗೆ ಸದಸ್ಯೆಯಾಗಿ ಆಯ್ಕೆಮಾಡಲಾಯಿತು. ಆಸ್ಟ್ರೇಲಿಯಾದ "ಮೊಯಾ ಡೊಡ್ (Moya Dodd)" ಮತ್ತು ಟರ್ಕಿಯ "ಸೋನಿಯಾ ಬೇನ್" ರವರು ಒಂದು ವರ್ಷದ ಅವಧಿಗೆ ನೇಮಕಗೊಂಡ ಇತರೆ ಮಹಿಳಾ ಸದಸ್ಯರು. FIFA ಕಾರ್ಯಕಾರಿ ಸಮಿತಿ 24 ಸದಸ್ಯರನ್ನು ಒಳಗೊಂಡಿದೆ.

- **"ರಾಘವ್ ಜೊನೆಜ" ಎವೆರೆಸ್ಟ್ ಏರಿದ ಅತಿ ಕಿರಿಯ**: 15 ವರ್ಷ ವಯಸ್ಸಿನ "ರಾಘವ್ ಜೊನೆಜ" ಎವರೆಸ್ಟ್ ಏರಿದ ಅತಿ ಕಿರಿಯ ಭಾರತೀಯ ಎಂಬ ಹಿರಿಮೆಗೆ ಪಾತ್ರರಾದರು. ಈ ಮೂಲಕ ಮಣಿಪುರದ "ನಮಿರ್ಪಕಂ ಚಿಂಗ್ಕೆಗಂಬ" (Nameirkpam Chingkheinganba)" ಹೆಸರಿನ ಬಾಲಕ ಮಾಡಿದ್ದ ದಾಖಲೆಯನ್ನು "ರಾಘವ್ ಜೊನೆಜ" ಅಳಿಸಿ ಹಾಕಿದರು. ನಮಿರ್ಪಕಂ ರವರು 16 ವರ್ಷ 7 ತಿಂಗಳು ವಯಸ್ಸಿನವರಾಗಿದ್ದಾಗ ಎವರೆಸ್ಟ್ ಏರುವ ಮೂಲಕ ಈ ಸಾಧನೆ ಮಾಡಿದ ಕಿರಿಯ ಭಾರತೀಯ ಎನಿಸಿದ್ದರು.

- **ದೇಶದ ಮೊದಲ ಸಮುದ್ರ ವಿಮಾನ (Sea Plane)ಕ್ಕೆ ಕೇರಳದಲ್ಲಿ ಚಾಲನೆ**: ದೇಶದ ಮೊದಲ ಸಮುದ್ರ ವಿಮಾನಕ್ಕೆ ಕೇರಳದಲ್ಲಿ ಚಾಲನೆ ನೀಡಲಾಯಿತು. ಆರು ಆಸನವನ್ನು ಒಳಗೊಂಡಿರುವ "Cessna H" ಹೆಸರಿನ ವಿಮಾನಕ್ಕೆ ಕೇರಳದ ಮುಖ್ಯಮಂತ್ರಿ ಒಮನ್ ಚಾಂಡಿ ರವರು ಚಾಲನೆ ನೀಡಿದರು. ಕಣ್ಣು ಸೆಳೆಯುವ ಕೇರಳದ ರಮಣೀಯ ಹಿನ್ನೀರಿನ ಪ್ರದೇಶಗಳನ್ನು ಈ ವಿಮಾನದ ಮೂಲಕ ಪ್ರದಕ್ಷಿಣೆ ಹಾಕಬಹುದು. ಆದರೆ ಕೇರಳ ಪ್ರವಾಸೋದ್ಯಮದ ಈ ವಿನೂತನ ಪ್ರಯತ್ನಕ್ಕೆ ಸ್ಥಳೀಯ ಮಿನುಗಾರರು ವಿರೋಧ ವ್ಯಕ್ತಪಡಿಸಿದ್ದಾರೆ.

- **ಆಂಧ್ರಪ್ರದೇಶ್ ಮಹಿಳಾ ಆಯೋಗದ ಅಧ್ಯಕ್ಷೆಯಾಗಿ "ವೆಂಕಟರತ್ನಂ"**: ಆಂಧ್ರಪ್ರದೇಶದ ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿ ಅವರು ಆಂಧ್ರಪ್ರದೇಶ ಮಹಿಳಾ ಆಯೋಗವನ್ನು ಪುನರ್ ಸ್ಥಾಪಿಸಿದ್ದು, ಮಾಜಿ ಸಚಿವೆ "ತ್ರಿಪುರಣ ವೆಂಕಟರತ್ನಂ" ರವರನ್ನು

ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಪರುಚುರಿ ಜಮುನಾ, ಸುನೀತಾ ಕೃಷ್ಣನ್, ತೋಟಿ ಮಲ್ಲೇಶ್ವರಿ, ಮುಕುಲ ಕಸ್ತೂರಿ ಮತ್ತು ಎಲ್. ಫಿರೋಜ್ ಬೇಗಂ ರವರುಗಳನ್ನು ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಕಾನೂನು ಪದವಿಧರೆ ಆಗಿರುವ ವೆಂಕಟರತ್ನಂ ಅವರು 1983 ರಲ್ಲಿ ಟಿಡಿಪಿ MLA ಆಗಿ ಆಯ್ಕೆಯಾಗಿ, ಎನ್ ಭಾಸ್ಕರ್ ರಾವ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಚಿವೆಯಾಗಿ ಕಾರ್ಯನಿರ್ವಹಿಸಿದ್ದರು.

- **ಭಾರತದ ಆಹಾರ ಧಾನ್ಯ ಉತ್ಪಾದನೆಯಲ್ಲಿ ಶೇ 30 ರಷ್ಟು ಹೆಚ್ಚಳ**: ಕಳೆದ 9 ವರ್ಷಗಳಲ್ಲಿ ದೇಶದ ಆಹಾರಧಾನ್ಯ ಉತ್ಪಾದನೆಯಲ್ಲಿ ಶೇ 30 ರಷ್ಟು ಹೆಚ್ಚಳ ಕಂಡಿದ್ದು, ಗಣನೀಯ ಸಾಧನೆ ಮಾಡಿದೆ. 2004-05 ರಲ್ಲಿ 198.36 ಮಿಲಿಯನ್ ಟನ್ ಗಳಷ್ಟಿದ್ದ ಉತ್ಪಾದನೆ 2012-13 ರಲ್ಲಿ 259 ಮಿಲಿಯನ್ ಟನ್ ಗೆ ಏರಿಕೆಯಾಗಿದೆ. ಭಾರತ ಸರ್ಕಾರ ಜಾರಿಗೊಳಿಸಿರುವ "ರಾಷ್ಟ್ರೀಯ ಕೃಷಿ ವಿಕಾಸ್ ಯೋಜನಾ", "ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ"ಯಂತಹ ಪ್ರಮುಖ ಯೋಜನೆಗಳಿಂದ ಈ ಅದ್ಭುತ ಯಶಸ್ಸು ಸಾಧಿಸಲಾಗಿದೆ.

- **ಪೋಲಿಯೋ ನಿಯಂತ್ರಣಕ್ಕೆ ಭಾರತದಿಂದ ಸಲಹೆ ಪಡೆದ ಪಾಕ್:** ಭಾರತದಲ್ಲಿ ಸತತ ಮೂರನೇ ವರ್ಷ ಪೋಲಿಯೋ ಪ್ರಕರಣಗಳು ಪತ್ತೆಯಾಗದೇ "ಪೋಲಿಯೋ ಮುಕ್ತ ರಾಷ್ಟ್ರ"ವೆನಿಸಲು ಸಜ್ಜಾಗಿರುವುದನ್ನು ಅರಿತ ಪಾಕಿಸ್ತಾನ ಪೋಲಿಯೋ ಲಸಿಕೆ ಬಳಕೆಯ ಬಗ್ಗೆ ಭಾರತದಿಂದ ಸಲಹೆ ಪಡೆಯಲು ನಿರ್ಧರಿಸಿದೆ. ಈ ಸಂಬಂಧ ಪಾಕಿಸ್ತಾನದ ತಜ್ಞರ ತಂಡವೊಂದು ಬಿಹಾರ ಮತ್ತು ಉತ್ತರಪ್ರದೇಶದಲ್ಲಿ ಅಧ್ಯಯನ ನಡೆಸಿ ಸಲಹೆಗಳನ್ನು ಸ್ವೀಕರಿಸಿದೆ. ಕಳೆದ ಕೆಲವು ವರ್ಷಗಳ ಹಿಂದೆ ಬಿಹಾರ ಮತ್ತು ಉತ್ತರಪ್ರದೇಶ ಪೋಲಿಯೋ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿದ್ದವು. ಆದರೆ ಮೂರು ವರ್ಷಗಳಿಂದ ದೇಶದಾದ್ಯಂತ ಒಂದೇ ಒಂದು ಪೋಲಿಯೋ ಪ್ರಕರಣಗಳು ಪತ್ತೆಯಾಗಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪೋಲಿಯೋ ಪ್ರಕರಣಗಳಿಂದ ಹೆಚ್ಚಾಗಿ ಭಾದಿತವಾಗಿರುವ ಮೂರು ರಾಷ್ಟ್ರಗಳೆಂದರೆ ಪಾಕಿಸ್ತಾನ, ಆಫ್ಘಾನಿಸ್ತಾನ್ ಮತ್ತು ನೈಜೀರಿಯಾ.

- **ಧೋನಿಗೆ ಐಸಿಸಿ ಶೀಲ್ಡ್ ಪ್ರದಾನ:** ಏಕದಿನ ಪಂದ್ಯದಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿರುವ ಭಾರತದ ಸಾಧನೆಗಾಗಿ ನಾಯಕ ಮಹೇಂದ್ರ ಸಿಂಗ್ ಧೋನಿ ರವರಿಗೆ ಐಸಿಸಿ ಶೀಲ್ಡ್ ಪ್ರದಾನ ಮಾಡಲಾಯಿತು. ಐಸಿಸಿ ಅಧ್ಯಕ್ಷ ಡೇವಿಡ್ ಮಾರ್ಗನ್ ರವರು ಧೋನಿಗೆ ಬೆಳ್ಳಿ ಟ್ರೋಫಿ ಹಾಗೂ 175,000 ಡಾಲರ್ ಚೆಕ್ ವಿತರಿಸಿದರು. 2013 ರ ಏಪ್ರಿಲ್ 1 ಕ್ಕೆ ಅನ್ವಯವಾಗುವ ರೀತಿಯಲ್ಲಿ ವಿಶ್ವದ ಅಗ್ರಮಾನ್ಯ ಏಕದಿನ ತಂಡ ಎಂಬ ಖ್ಯಾತಿಗೆ ಭಾರತ ತಂಡ ಪಾತ್ರವಾಗಿತ್ತು. ಪ್ರಸ್ತುತ ವಿಶ್ವ ಏಕದಿನ ಶ್ರೇಣಿಯಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಂತರದ ಸ್ಥಾನದಲ್ಲಿವೆ.

- **2017 ರ ವೇಳೆಗೆ ಭಾರತದಲ್ಲಿ 348 ಮಿಲಿಯನ್ ಅಂತರ್ಜಾಲ ಬಳಕೆದಾರರು:** ದೇಶದಲ್ಲಿ ಅಂತರ್ಜಾಲ ಬಳಕೆದಾರರ ಸಂಖ್ಯೆ ವೇಗವಾಗಿ ಬೆಳೆಯುತ್ತಿದ್ದು, 2017 ರ ವೇಳೆಗೆ 348 ಮಿಲಿಯನ್ ಜನರು ಭಾರತದಲ್ಲಿ ಅಂತರ್ಜಾಲ ಬಳಸಲಿದ್ದಾರೆ ಎಂದು ಸಮೀಕ್ಷೆಯಿಂದ ತಿಳಿದುಬಂದಿದೆ. ನೆಟ್ ವರ್ಕಿಂಗ್ ದಿಗ್ಗಜ "ಸಿಸ್ಕೊ(Cisco)" ಹೊರತಂದಿರುವ "'ವಿಷುಯಲ್ಸ್ ನೆಟ್ ವರ್ಕಿಂಗ್ ಇಂಡೆಕ್ಸ್"' ಮುನ್ನೋಟದಂತೆ 2012 ರಲ್ಲಿ 393 ಪೆಟಾಬೈಟ್ ಇದ್ದ ಇಂಟರ್ ನೆಟ್ ಟ್ರಾಫಿಕ್ 2017 ರ ವೇಳೆಗೆ ಭಾರತದ 2.5 ಎಕ್ಸಾಬೈಟ್ ಏರಿಕೆಯಾಗಲಿದೆ. ಹಾಗೂ 2012 ರಲ್ಲಿ 138 ಮಿಲಿಯನ್ ಜನರು ಅಂತರ್ಜಾಲ ಬಳಸುತ್ತಿದ್ದು, 2017 ರ ವೇಳೆಗೆ 348 ಮಿಲಿಯನ್ ಜನರು ಅಂತರ್ಜಾಲ ಬಳಸಲಿದ್ದಾರೆ ಎಂದು ತಿಳಿಸಿದೆ.

- **DRDO ಮುಖ್ಯ ನಿಯಂತ್ರಕರಾಗಿ ವಿ.ಜಿ.ಶೇಖರನ್:** ಅಗ್ನಿ ದೂರಗಾಮಿ ಕ್ಷಿಪಣಿಯ ಪ್ರಮುಖ ವಿನ್ಯಾಸಗಾರರಲ್ಲಿ ಒಬ್ಬರೆನಿಸಿರುವ ವಿ.ಜಿ.ಶೇಖರನ್ ಅವರನ್ನು DRDO ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯ ನಿಯಂತ್ರಕ (Chief Controller)ರಾಗಿ ನೇಮಕ ಮಾಡಲಾಗಿದೆ. 1984 ರಲ್ಲಿ DRDO ಗೆ ಸೇರಿದ ಶೇಖರನ್ ರವರು ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮ ಸೇರಿದಂತೆ ಘನ ಇಂಧನ ಆಧಾರಿತ ರಾಕೆಟ್ ಮೋಟಾರ್ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

- **ಜೂನ್ 5 ವಿಶ್ವ ಪರಿಸರ ದಿನ**: ಪ್ರತಿ ವರ್ಷ ಜೂನ್ 5 ನ್ನು ವಿಶ್ವ ಪರಿಸರ ದಿನವೆಂದು ಆಚರಿಸಲಾಗುತ್ತಿದೆ. 1972 ರಿಂದ ಜೂನ್ 5 ರಂದು ಪರಿಸರ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಪರಿಸರ ಸಂರಕ್ಷಣೆ ಕುರಿತಾದ ಕಾರ್ಯಕ್ರಮಗಳನ್ನು ಈ ದಿನದಂದು ಹಮ್ಮಿಕೊಳ್ಳುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗುವಂತೆ ಸಮುದಾಯವನ್ನು ಉತ್ತೇಜಿಸಲಾಗುವುದು. "Think.Eat.Save" ಇದು ಈ ವರ್ಷದ ಪರಿಸರ ದಿನದ ಥೀಮ್. ಅನಗತ್ಯವಾಗಿ ಪೋಲು ಮಾಡಲಾಗುತ್ತಿರುವ ಆಹಾರದ ಬಗ್ಗೆ ಕಾಳಜಿ ಮೂಡಿಸುವುದು ಇದರ ಉದ್ದೇಶ. FAO ಪ್ರಕಾರ ಪ್ರತಿ ವರ್ಷ 1.3 ಬಿಲಿಯನ್ ಟನ್ ನಷ್ಟು ಆಹಾರವನ್ನು ವಿಶ್ವದಾದ್ಯಂತ ಹಾಳು ಮಾಡಲಾಗುತ್ತಿದೆ. ಇದೇ ವೇಳೆ ಪ್ರತಿ 7 ಜನರಲ್ಲಿ ಒಬ್ಬರು ಹಸಿವೆಯಿಂದ ಬಳಲುತ್ತಿದ್ದಾರೆ. ಹಾಗೂ ಐದು ವರ್ಷಕ್ಕಿಂತ ಕಡಿಮೆ ಇರುವ 20,000 ಕ್ಕೂ ಹೆಚ್ಚು ಮಕ್ಕಳು ಹಸಿವೆಯಿಂದ ಸಾವನ್ನಪ್ಪುತ್ತಿದ್ದಾರೆ.

- **ದೆಹಲಿಯಲ್ಲಿ ಆಂತರಿಕ ಭದ್ರತೆ ಕುರಿತಾದ ಮುಖ್ಯಮಂತ್ರಿಗಳ ಸಮ್ಮೇಳನ**:ರಾಜಧಾನಿ ನವದೆಹಲಿಯಲ್ಲಿ ಆಂತರಿಕ ಭದ್ರತೆ ಕುರಿತಾದ ಒಂದು ದಿನದ ಮುಖ್ಯಮಂತ್ರಿಗಳ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಪೊಲೀಸ್ ವ್ಯವಸ್ಥೆ ಸುಧಾರಣೆ, ನಕ್ಸಲ್ ಮತ್ತು ಮಾವೋವಾದಿಗಳನ್ನು ಹತ್ತಿಕ್ಕುವುದು, ರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ಕೇಂದ್ರ ಸ್ಥಾಪನೆ ಹಾಗೂ ಮಹಿಳಾ ಮತ್ತು ಮಕ್ಕಳ ರಕ್ಷಣೆ ಸೇರಿದಂತೆ ಒಟ್ಟಾರೆಯಾಗಿ ಆಂತರಿಕ ಭದ್ರತೆಯನ್ನು ಬಲಪಡಿಸುವ ಅಂಶಗಳ ಬಗ್ಗೆ ಚರ್ಚಿಸಲಾಯಿತು.

- **ಶೀಘ್ರದಲ್ಲಿ ರಾಜಸ್ತಾನದ ಎರಡು ವಿಮಾನ ನಿಲ್ದಾಣಗಳು ಕಾರ್ಯರಂಭ:** ರಾಜಸ್ತಾನದ "ಜೈಸಲ್ಮೇರ್" ಮತ್ತು "ಬಿಕನೇರ್" ನಲ್ಲಿ ಸ್ಥಾಪಿಸಲಾಗುತ್ತಿರುವ ವಿಮಾನ ನಿಲ್ದಾಣಗಳ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಆಗಸ್ಟ್ ವೇಳೆಗೆ ನಾಗರಿಕ ಸೇವೆಗೆ ಮುಕ್ತವಾಗಲಿದೆ ಎಂದು "ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ" ದ ಅಧ್ಯಕ್ಷ ವಿ.ಪಿ.ಅಗರವಾಲ್ ಹೇಳಿದ್ದಾರೆ.

- **ಅಮೆರಿಕಾದ ಹಿರಿಯ ಸೆನೆಟರ್ "ಫ್ರಾಂಕ್ ಲಟೆನ್ ಬರ್ಗ್ (Frank Lautenberg)" ನಿಧನ:** ಅಮೆರಿಕಾದ ಅತ್ಯಂತ ಹಿರಿಯ ಸೆನೆಟರ್ ಎನಿಸಿದ್ದ "ಫ್ರಾಂಕ್ ಲಟೆನ್ ಬರ್ಗ್" ನಿಧನರಾದರು. 89 ವರ್ಷ ವಯಸ್ಸಿನ ಲಟೆನ್ ಬರ್ಗ್ ನ್ಯೂಮೋನಿಯಾದಿಂದ ಬಳಲುತ್ತಿದ್ದರು. 1982 ರಲ್ಲಿ ಮೊದಲ ಬಾರಿಗೆ ಸೆನೆಟ್ ಗೆ ಪದಾರ್ಪಣೆ ಮಾಡಿದ ಅವರು ಮೂರು ದಶಕಗಳ ಸೆನೆಟರ್ ಆಗಿ ಸೇವೆ ಸಲ್ಲಿಸಿದ್ದರು. ಅಮೆರಿಕಾದ ವಿಮಾನಗಳಲ್ಲಿ ಧೂಮಪಾನ ನಿಷೇಧ ಕಾನೂನು ಜಾರಿ ಹಾಗೂ ಅಮೆರಿಕಾದ 50 ರಾಜ್ಯಗಳಲ್ಲಿ ಮದ್ಯಪಾನ ಸೇವನೆ ವಯಸ್ಸಿನ ಮಿತಿಯನ್ನು 21ಕ್ಕೆ ಹೆಚ್ಚಿಸುವಲ್ಲಿ ಅವರು ಪ್ರಮುಖ ರೂವಾರಿ ಎನಿಸಿದ್ದರು.

- **ಭಾರತ ಸ್ವರ್ಧಾತ್ಮಕ ಆಯೋಗ (CCI) ಮತ್ತು ಆಸ್ಟ್ರೇಲಿಯಾ ಸ್ವರ್ಧಾತ್ಮಕ ಮತ್ತು ಗ್ರಾಹಕ ಆಯೋಗ ನಡುವೆ ಒಡಂಬಡಿಕೆಗೆ ಸಹಿ:** ಭಾರತ ಸ್ವರ್ಧಾತ್ಮಕ ಆಯೋಗದ ಮುಖ್ಯಸ್ಥ "ಅಶೋಕ್ ಚಾವ್ಲಾ" ಮತ್ತು ಆಸ್ಟ್ರೇಲಿಯಾ ಸ್ವರ್ಧಾತ್ಮಕ ಮತ್ತು ಗ್ರಾಹಕ ಆಯೋಗದ

ಮುಖ್ಯಸ್ಥ "ರೊಡ್ ಸಿಮ್ಸ್" ರವರು ಸ್ಪರ್ಧಾತ್ಮಕ ವಲಯದಲ್ಲಿ ಉಭಯ ದೇಶಗಳ ನಡುವೆ ಪರಸ್ಪರ ಸಹಕಾರ ವೃದ್ಧಿಸುವ ಒಡಂಬಡಿಕೆಗೆ ಸಹಿ ಹಾಕಿದರು.

- **ಚೆಕ್ ಬೌನ್ಸ್ ಪ್ರಕರಣವನ್ನು ಕಾನೂನು ಅಪರಾಧದಿಂದ ಹೊರಗಿಡಲು ಚಿಂತನೆ:** ಸರ್ಕಾರ ಶೀಘ್ರದಲ್ಲಿ "ನೆಗೋಶಿಯೆಬಲ್ ಇನ್ ಸ್ಟ್ರುಮೆಂಟ್ ಕಾಯಿದೆ (Negotiable Instrument Act)" ಗೆ ತಿದ್ದುಪಡಿ ತರಲು ತೀರ್ಮಾನಿಸಿದ್ದು, ಚೆಕ್ ಬೌನ್ಸ್ ಪ್ರಕರಣದಲ್ಲಿ ವ್ಯಕ್ತಿಯನ್ನು ಕೋರ್ಟ್ ಗೆ ಕಟ್ಟಗಟ್ಟೆಯಲ್ಲಿ ನಿಲ್ಲಿಸಿದೆ ಲೋಕಾ ಆದಾಲತ್ ಅಥವಾ ರಾಜಿ ಸಂಧಾನಗಳ ಮೂಲಕ ಬಗೆಹರಿಸಲು ಚಿಂತನೆ ನಡೆಸಿದೆ. ಅಂಕಿ ಅಂಶಗಳ ಪ್ರಕಾರ ಶೇ 30 ರಷ್ಟು ಚೆಕ್ ಬೌನ್ಸ್ ಅಥವಾ ಅದಕ್ಕೆ ಸಂಬಂಧಿಸಿದ ಪ್ರಕರಣಗಳು ಇತ್ಯಾರ್ಥವಾಗದೇ ಉಳಿದಿವೆ. ಈ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಸಲಹೆ ನೀಡುವಂತೆ ರಚಿಸಲಾಗಿದ್ದ "ಸಚಿವರ ಸಮಿತಿ"ಯೂ ತನ್ನ ವರದಿಯಲ್ಲಿ ಚೆಕ್ ಬೌನ್ಸ್ ಪ್ರಕರಣವನ್ನು ಕಾನೂನು ಅಪರಾಧದಿಂದ ಹೊರಗಿಡುವಂತೆ ಶಿಫಾರಸ್ಸು ಮಾಡಿದೆ.

- **ಧಾರಾವಾಡ ಮತ್ತು ಗುಲ್ಬರ್ಗ ಸಂಚಾರಿ ಪೀಠಗಳಿಗೆ ಕಾಯಂ ಸ್ಥಾನ:** ಧಾರವಾಡ ಮತ್ತು ಗುಲ್ಬರ್ಗದಲ್ಲಿ ಐದು ವರ್ಷದ ಹಿಂದೆ ಆರಂಭವಾದ ಹೈಕೋರ್ಟ್ ಸಂಚಾರಿ ಪೀಠಗಳನ್ನು ಕಾಯಂ ಪೀಠಗಳಾಗಿ ಪರಿವರ್ತಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ. ಧಾರವಾಡ ಹೈಕೋರ್ಟ್ ಪೀಠವು ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕರ್ನಾಟಕ ಹಾಗೂ ಕೊಪ್ಪಳ ಜಿಲ್ಲೆಗಳ ವ್ಯಾಪ್ತಿಯ ಪ್ರಕರಣಗಳ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಿದೆ. ಗುಲ್ಬರ್ಗ ಪೀಠವೂ ರಾಯಚೂರು, ಬೀದರ್, ವಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆ ವ್ಯಾಪ್ತಿಯ ಪ್ರಕರಣಗಳ ವಿಚಾರಣೆ ನಡೆಸಲಿದೆ. 2008, ಜುಲೈ 4 ರಂದು ಧಾರಾವಾಡ ಮತ್ತು ಗುಲ್ಬರ್ಗದಲ್ಲಿ ಹೈಕೋರ್ಟ್ ಸಂಚಾರಿ ಪೀಠಗಳನ್ನು ಸ್ಥಾಪಿಸಲಾಗಿತ್ತು. ಇದೇ ವೇಳೆ ಬೆಂಗಳೂರು ವಿಮಾನ ನಿಲ್ದಾಣದ ಸಮೀಪ "ಮಾಹಿತಿ ತಂತ್ರಜ್ಞಾನ ಹೂಡಿಕೆ ವಲಯ" ಸ್ಥಾಪಿಸಲು ಸಂಪುಟ ಒಪ್ಪಿಗೆ ಸೂಚಿಸಿದೆ.

- **ಬಿಂದೇಶ್ವರ್ ಪಾಠಕ್ ಗೆ ಫ್ರಾನ್ಸ್ ಪ್ರಶಸ್ತಿ:** ಸುಲಭ್ ಶೌಚಾಲಯದ ಪರಿಕಲ್ಪನೆಗಾರ ಹಾಗೂ ಪರಿಸರವಾದಿ ಬಿಂದೇಶ್ವರ್ ಪಾಠಕ್ ಗೆ ಫ್ರಾನ್ಸ್ ನ "ಲೆಂಜೆಂಡ್ ಆಫ್ ಪ್ಲಾನೆಟ್" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಬಿಂದೇಶ್ವರ್ ರವರು ಸ್ಥಾಪಿಸಿರುವ "ಸುಲಭ್ ಇಂಟರ್ ನ್ಯಾಷನಲ್" ಸಂಘಟನೆ ಭಾರತದಲ್ಲಿ ಬಡವರಿಗೆ ಕಡಿಮೆ ವೆಚ್ಚದ ಶೌಚಾಲಯಗಳನ್ನು ನಿರ್ಮಿಸಿಕೊಡುವ ಮೂಲಕ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲು ಶ್ರಮಿಸುತ್ತಿದೆ.

- **ಲಡಖ್ ನಲ್ಲಿ ದೇಶದ ಅತಿ ಎತ್ತರದ "ಕೃಷಿ ವಿಜ್ಞಾನ ಕೇಂದ್ರ"**: ಜಮ್ಮು ಮತ್ತು ಕಾಶ್ಮೀರದ ಲಡಖ್ ನ "ಯೋಮ(Nyoma)"ದಲ್ಲಿ ದೇಶದ ಅತಿ ಎತ್ತರದ "ಕೃಷಿ ವಿಜ್ಞಾನ ಕೇಂದ್ರ (KVK)"ವನ್ನು ಸ್ಥಾಪಿಸಲಾಗಿದೆ. ಸಮುದ್ರ ಮಟ್ಟದಿಂದ 14000 ಅಡಿ ಎತ್ತರದಲ್ಲಿ ಸ್ಥಾಪಿಸಲಾಗಿರುವ ಕೇಂದ್ರದಿಂದ ಈ ಪ್ರದೇಶದ ಸುತ್ತಮುತ್ತ ಪಶ್ಮೀನ ಮೇಕೆಯನ್ನು ಸಾಕುವ ಅಲೆಮಾರಿಗಳಿಗೆ ಅನುಕೂಲವಾಗಲಿದೆ. ಅಷ್ಟೇ ಅಲ್ಲದೇ ಮೇವು ಅಭಿವೃದ್ಧಿ, ಮಹಿಳೆಯರಿಗೆ ತರಬೇತಿ ಹಾಗೂ ಇತರೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ನೆರವಾಗಲಿದೆ.

- **ಅಟಲ್ ಬಿಹಾರಿ ವಾಜಪೇಯಿ ಹಿಂದಿ ವಿವಿ ಗೆ ಶಂಕುಸ್ಥಾಪನೆ**: ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಮಧ್ಯಪ್ರದೇಶದ ಭೂಪಾಲ್ ನಲ್ಲಿ "ಅಟಲ್ ಬಿಹಾರಿ ವಾಜಪೇಯಿ ಹಿಂದಿ ವಿಶ್ವವಿದ್ಯಾಲ"ಯಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಸರ್ಕಾರ ಮತ್ತು ಜನರ ನಡುವೆ ಸಮನ್ವಯ ಸಾಧಿಸಲು ಭಾಷೆ ಅತ್ಯಂತ ಪರಿಣಾಮಕಾರಿ ಎಂದರು.

- **IPL ಸ್ಪಾಟ್ ಫಿಕ್ಸಿಂಗ್ ವರದಿ ಸಲ್ಲಿಕೆ:** ಐಪಿಎಲ್ ಆರನೇ ಆವೃತ್ತಿಯಲ್ಲಿ ನಡೆದಿದೆ ಎನ್ನಲಾದ ಸ್ಪಾಟ್ ಫಿಕ್ಸಿಂಗ್ ಹಗರಣದ ತನಿಖೆಗೆ ನಿವೃತ್ತ ಪೊಲೀಸ್ ಅಧಿಕಾರಿ "ಆರ್.ಎನ್ ಸವನಿ (R N Sawani)" ಒಳಗೊಂಡ ಏಕ ಸದಸ್ಯ ಸಮಿತಿಯು ತನ್ನ ವರದಿಯನ್ನು BCCI ಗೆ ಸಲ್ಲಿಸಿದೆ. ಸವನಿ ಅವರು 2000 ದಲ್ಲಿ ನಡೆದಿದ್ದ ಮ್ಯಾಚ್ ಫಿಕ್ಸಿಂಗ್ ಹಗರಣದ ತನಿಖೆಯನ್ನು ಯಶಸ್ವಿಯಾಗಿ ನಡೆಸಿದ್ದರು.

- **ರಾಘವನ್ ಪಾಕಿಸ್ತಾನ ನೂತನ ರಾಯಭಾರಿ:** ಭಾರತದ ಸಿಂಗಾಪುರದ ರಾಯಭಾರಿ ರಾಘವನ್ ರವರನ್ನು ಪಾಕಿಸ್ತಾನದ ರಾಯಭಾರಿಯನ್ನಾಗಿ ನೇಮಕ ಮಾಡಲಾಗಿದೆ. 1982 IFS ಬ್ಯಾಚ್ ನವರಾದ ರಾಘವನ್ ರವರು 2003-07 ರ ತನಕ ಭಾರತದ ಪಾಕಿಸ್ತಾನ ಡೆಪ್ಯೂಟಿ ಹೈಕಮೀಷನರ್ ಆಗಿ ಸೇವೆಸಲ್ಲಿಸಿದ್ದರು. ಪ್ರಸ್ತುತ ಭಾರತದ ಪಾಕಿಸ್ತಾನ ರಾಯಭಾರಿಯಾಗಿ 4 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಶರತ್ ಶಬರವಾಲ್ ರವರ ಸ್ಥಾನವನ್ನು ರಾಘವನ್ ತುಂಬಲಿದ್ದಾರೆ.

- **"ಫೋರ್ಬ್" ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಕಂಪನಿಗಳ ಪಟ್ಟಿಯಲ್ಲಿ "ಲಿಂಕ್ಡ್ ಇನ್" ನಂ 1:** ಫೋರ್ಬ್ಸ್ ಪತ್ರಿಕೆ ಹೊರತಂದಿರುವ ಅಮೆರಿಕಾದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ 25 ಕಂಪನಿಗಳ ಪಟ್ಟಿಯಲ್ಲಿ ವ್ಯವಹಾರ ನೆಟ್ ವರ್ಕ್ ತಾಣ "ಲಿಂಕ್ಡ್ ಇನ್" ನಂ 1 ಸ್ಥಾನವನ್ನು ಪಡೆದುಕೊಂಡಿದೆ. ವಿಶ್ವದ ಪ್ರಸಿದ್ಧ ಸಾಮಾಜಿಕ ತಾಣ "ಫೇಸ್ ಬುಕ್" ಎರಡನೇ ಸ್ಥಾನದಲ್ಲಿ ಮತ್ತು ಆಪಲ್ ಸಂಸ್ಥೆ ಮೂರನೇ ಸ್ಥಾನದಲ್ಲಿದೆ. ಭಾರತದಲ್ಲಿ ಅತಿ ಹೆಚ್ಚು ಕಾರ್ಯನಿರತವಾಗಿರುವ ಸಂಸ್ಥೆಗಳ ಪೈಕಿ "ಕೊಗ್ನಿಜೆಂಟ್ (Cognizant)" ಮಾತ್ರ ಪಟ್ಟಿಯಲ್ಲಿ ಸ್ಥಾನಪಡೆಯಲು ಶಕ್ತವಾಗಿದ್ದು, 12 ನೇ ಸ್ಥಾನದಲ್ಲಿದೆ. ಅಮೆರಿಕಾದ ಮೂಲದ "ಕೊಗ್ನಿಜೆಂಟ್" ಸಂಸ್ಥೆ ಜಾಗತಿಕ ಮಟ್ಟದ ವ್ಯವಹಾರದಲ್ಲಿ ಶೇ 75 ರಷ್ಟನ್ನು ಭಾರತದಲ್ಲಿ ಹೊಂದಿದೆ.

- **ಗೋಮುಖ್-ಉತ್ತರಕಾಶಿ ಸೂಕ್ಷ್ಮ ಪರಿಸರ ವಲಯ ಘೋಷಣೆಗೆ ವಿರೋಧ**: ಉತ್ತರಖಂಡದ "ಗೋಮುಖ್-ಉತ್ತರಕಾಶಿ" 100 ಕಿ.ಮೀ ವಲಯವನ್ನು ಸೂಕ್ಷ್ಮ ಪರಿಸರ ವಲಯವೆಂದು ಕೇಂದ್ರ ಸರ್ಕಾರ ಘೋಷಿಸಿರುವುದನ್ನು ಉತ್ತರಖಂಡ್ ಮುಖ್ಯಮಂತ್ರಿ ವಿಜಯ್ ಬಹುಗುಣ ರವರು ವಿರೋಧಿಸಿದ್ದಾರೆ. ಕೇಂದ್ರ ಸರ್ಕಾರ ಕೈಗೊಂಡಿರುವ ದಿಢೀರ್ ನಿರ್ಧಾರಿಂದ ಈ ಭಾಗದಲ್ಲಿ ಕೈಗೊಳ್ಳಲು ನಿರ್ಧರಿಸಿರುವ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ದಕ್ಕೆ ಉಂಟಾಗಲಿದೆ ಎಂದು ಅವರು ಹೇಳಿದ್ದಾರೆ.

- **ಇಟಾನಗರದಲ್ಲಿ ಮೊದಲ ಮಹಿಳಾ ಪೊಲೀಸ್ ಠಾಣೆ:** ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯವನ್ನು ಸಮರ್ಥವಾಗಿ ನಿಭಾಯಿಸಲು ಅರುಣಾಚಲ ಪ್ರದೇಶದ ಇಟಾನಗರದಲ್ಲಿ ದೇಶದ ಮೊದಲ ಮಹಿಳಾ ಪೊಲೀಸ್ ಠಾಣೆಯನ್ನು ಆರಂಭಿಸಲಾಗಿದೆ. ರಾಜ್ಯದಲ್ಲಿ ಮಹಿಳಾ ಪೊಲೀಸ್ ಠಾಣೆಯನ್ನು ನಿರ್ಮಿಸುವ ಮಹತ್ವದ ನಿರ್ಣಯವನ್ನು ಅರುಣಾಚಲ ಪ್ರದೇಶ ವಿಧಾನಸಭೆಯಲ್ಲಿ ಇತ್ತೀಚೆಗೆ ಕೈಗೊಳ್ಳಲಾಗಿತ್ತು.

- **ನಾಲ್ಕು ವರ್ಷದ ಪದವಿಗೆ ಸಲಹಾ ಸಮಿತಿ ರಚನೆ:** ದೆಹಲಿ ವಿಶ್ವವಿದ್ಯಾಲಯ ಜಾರಿಗೊಳಿಸಲು ಉದ್ದೇಶಿಸಿರುವ ನಾಲ್ಕು ವರ್ಷದ ಪದವಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ "ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ)ಯ ಸದಸ್ಯರಾಗಿರುವ ಮತ್ತು CSIR ನ ಮಾಜಿ ನಿರ್ದೇಶಕರಾದ "ಎಸ್.ಕೆ.ಜೋಶಿ" ನೇತೃತ್ವದ ಸಮಿತಿಯನ್ನು ಯುಜಿಸಿ ರಚಿಸಿದೆ. ದೆಹಲಿ ವಿವಿಯ ಉದ್ದೇಶಿತ ನಾಲ್ಕು ವರ್ಷದ ಪದವಿಗೆ ಈಗಾಗಲೇ ವ್ಯಾಪಕ ಪ್ರತಿಭಟನೆ ವ್ಯಕ್ತವಾಗಿದೆ.

- **ಜೂನ್ 8: "ವಿಶ್ವ ಸಾಗರ ದಿನ (World Ocean Day)":** ವಿಶ್ವ ಸಾಗರ ದಿನವನ್ನು ಪ್ರತಿ ವರ್ಷ ಜೂನ್ 8 ರಂದು ಆಚರಿಸಲಾಗುತ್ತದೆ. 1992 ರಲ್ಲಿ ರಿಯೋ ಡಿ ಜೆನ್ನೈರೆಯಲ್ಲಿ ನಡೆದ "ಈರ್ಥ್ ಸಮ್ಮಿಟ್" ನಲ್ಲಿ ಕೆನಡಾ ಜೂನ್ 8 ನ್ನು ಸಾಗರ ದಿನವೆಂದು ಆಚರಿಸುವ ಪ್ರಸ್ತಾವನೆಯನ್ನು ಮುಂದಿಟ್ಟಿತು. ಅಂದಿನಿಂದ ಈ ದಿನವನ್ನು ವಿಶ್ವ ಸಾಗರ ದಿನವನ್ನಾಗಿ ಆಚರಿಸಲಾಗುತ್ತಿದೆ. 2008 ರಲ್ಲಿ ವಿಶ್ವಸಂಸ್ಥೆ ಈ ದಿನವನ್ನು "ವಿಶ್ವ ಸಾಗರ ದಿನ" ವೆಂದು ಅಧಿಕೃತವಾಗಿ ಘೋಷಿಸಿತು. "ಟುಗೆದರ್ ವಿ ಹ್ಯಾವ್ ದ ಪವರ್ ಟು ಪ್ರೊಟೆಕ್ಟ್ ದಿ ಒಶಿಯನ್ (Together We have the power to protect ocean)" ಇದು ಈ ವರ್ಷದ ಥೀಮ್.

- **ಜೆಟ್ ಏರವೇಸ್ CEO "ನಿಕೋಲಸ್ ಕರ್ದಸಿಸ್ (Nikos Kardassis)" ರಾಜೀನಾಮೆ:** ಜೆಟ್ ಏರ್ ವೇಸ್ ನ ಕಾರ್ಯನಿರ್ವಾಹಣಾಧಿಕಾರಿ "ನಿಕೋಲಸ್ ಕರ್ದಸಿಸ್" ರವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವುದಾಗಿ ಸಂಸ್ಥೆ ತಿಳಿಸಿದೆ. ನಿಕೋಲಸ್ ರವರು ಕಳೆದ ಐದು ವರ್ಷಗಳಿಂದ ಸಂಸ್ಥೆಯ ಸಿಇಓ ಆಗಿ ಸೇವೆ ಸಲ್ಲಿಸುತ್ತಿದ್ದರು. ಜೆಟ್ ಏರ್ ವೇಸ್ ನ ಮುಖ್ಯ ಆಡಳಿತಾಧಿಕಾರಿ (COO) "ಹಮೀದ್ ಅಲಿ" ಅವರನ್ನು ಸಂಸ್ಥೆಯ ಹಂಗಾಮಿ CEO ಆಗಿ ನೇಮಕಮಾಡಲಾಗಿದೆ.

- **ಫ್ರಾನ್ಸ್ ನ ಮಾಜಿ ಪ್ರಧಾನಿ "ಪೈರಿ ಮುರ್ರೆ" ನಿಧನ**: ಫ್ರಾನ್ಸ್ ನ ಮಾಜಿ ಪ್ರಧಾನಿ "ಪೈರಿ ಮುರ್ರೆ" ರವರು ಅನಾರೋಗ್ಯದ ಕಾರಣ ನಿಧನರಾದರು. ಮುರ್ರೆ 1981 ರಿಂದ 1984 ರ ತನಕ ಫ್ರಾನ್ಸ್ ನ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದರು. ಫ್ರಾನ್ಸ್ ನಲ್ಲಿ ಮೂಲಭೂತ ಸಾಮಾಜಿಕ ಸುಧಾರಣೆ ತಂದು ಸಾಮಾನ್ಯ ಜನರ ಜೀವನವನ್ನು ಉತ್ತಮಗೊಳಿಸುವಲ್ಲಿ ಮುರ್ರೆ ಯಶಸ್ವಿಯಾಗಿದ್ದರು.

- **ಸ್ಕಾಟೀಷ್ ಕಾದಂಬರಿಕಾರ "ಇಯಾನ್ ಬ್ಯಾಂಕ್ಸ್ (Iain Banks)**": ಸ್ಕಾಟೀಷ್ ಪ್ರಸಿದ್ಧ ಲೇಖಕ "ಇಯಾನ್ ಬ್ಯಾಂಕ್ಸ್" ನಿಧನರಾದರು. 59 ವರ್ಷ ವಯಸ್ಸಿನ ಅವರು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದರು. ಅವರ "ದಿ ವಾಸ್ಪ್ ಪ್ಯಾಕ್ಟರಿ ದಿ ಕ್ರೌಡ್ ರೋಡ್ (The Wasp Factory and The Crowd Road)" ಕಾದಂಬರಿ ಅಪಾರ ಜನಮನ್ನಣೆ ಗಳಿಸಿತ್ತು. ಇಯಾನ್ ಅವರ ಕೊನೆಯ ಪುಸ್ತಕ "ದಿ ಕ್ವಾರಿ (The Quarry)" ಪ್ರಕಟಣೆಗೆ ಸಿದ್ದಗೊಂಡು ಕೊನೆಯ ಹಂತದಲ್ಲಿತ್ತು.

- **ಉತ್ತರಖಂಡ್ NGO ಗೆ ಫ್ರೆಂಚ್ ಪ್ರಶಸ್ತಿ**: ಮಾನವ ಹಕ್ಕು ರಕ್ಷಣೆಗೆ ಅಪಾರ ಸೇವೆ ಸಲ್ಲಿಸಿರುವ ಉತ್ತರಖಂಡ್ ನ "ಸೆಂಟರ್ ಫಾರ್ ಹಿಮಾಲಯನ್ ಎನ್ವಿರನ್ ಮೆಂಟ್ ಅಸೋಸಿಯೇಷನ್ (Centre for Himalayan Environment Association (CHEA))" ಎಂಬ NGO ಗೆ ಫ್ರಾನ್ಸ್ ನ "Special Mention of the 2012 Human Rights" ಪ್ರಶಸ್ತಿಯನ್ನು ನೀಡಲಾಗಿದೆ. ಉತ್ತರಖಂಡ್ ನ ನೈನಿತಾಲ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಂಸ್ಥೆಯು ಮಹಿಳಾ ಸಬಲೀಕರಣ ಮತ್ತು ಗ್ರಾಮೀಣ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳನ್ನು ಕಾಪಾಡುವಲ್ಲಿ ತನ್ನದೇ ಆದ ಸೇವೆ ಸಲ್ಲಿಸಿದೆ.

- **ಕರ್ನಾಟಿಕ್ ಸಂಗೀತಾ ಗಾಯಕಿ ರಂಜನಿ ಹೆಬ್ಬಾರ್ ಗುರುಪ್ರಸಾದ್ ನಿಧನ**: ಕರ್ನಾಟಕ ಸಂಗೀತಾ ಗಾಯಕಿ "ರಂಜನಿ ಹೆಬ್ಬಾರ್ ಗುರುಪ್ರಸಾದ್" ರವರು ಕ್ಯಾನ್ಸರ್ ಜತೆ ಸುದೀರ್ಘ ಹೋರಾಟದ ನಂತರ ನಿಧನರಾದರು. ಕರ್ನಾಟಕ ಸಂಗೀತಾವನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದ ಅವರು ಅನೇಕ ಸಮಾರಂಭಗಳಲ್ಲಿ ಗಾನಸುಧೆಯನ್ನು ಹರಿಸಿದ್ದರು. ಅನೇಕ ಪ್ರಶಸ್ತಿಗಳನ್ನು ಅವರು ಪಡೆದಿದ್ದರು.

- **ಮೊಬೈಲ್ ನಲ್ಲಿ ರೈಲ್ವೆ ಮುಂಗಡ ಟಿಕೆಟ್ ಬುಕ್ಕಿಂಗ್ ಸೇವೆ:** ಎಸ್ಎಂಎಸ್ ಮೂಲಕ ರೈಲ್ವೆ ಮುಂಗಡ ಟಿಕೆಟ್ ಕಾಯ್ದಿರಿಸುವ ವಿಧಾನವನ್ನು ಜಾರಿಗೆ ತರಲು ಭಾರತೀಯ ರೈಲ್ವೆ ನಿರ್ಧರಿಸಿದೆ. ಹೀಗಾಗಿ ಜುಲೈ 1 ರಿಂದ ಎಸ್ಎಂಎಸ್ ಮೂಲಕವೇ ಪ್ರಯಾಣಿಕರು ರೈಲ್ವೆ ಟಿಕೆಟ್ ಗಳನ್ನು ಕಾಯ್ದಿರಿಸಬಹುದಾಗಿದೆ. ಈ ಸೇವೆಯನ್ನು ಬಳಸಿಕೊಳ್ಳಲು ಗ್ರಾಹಕರು ಮೊದಲು ತಮ್ಮ ಮೊಬೈಲ್ ನಂಬರ್ ಅನ್ನು IRCTC ಯಲ್ಲಿ ಮತ್ತು ಒಂದು ಬ್ಯಾಂಕ್ ನಲ್ಲಿ ನೊಂದಾಯಿಸಬೇಕು. ಬಳಿಕ ಬ್ಯಾಂಕ್ ಗ್ರಾಹಕರಿಗೆ ಎಂಎಂಐಡಿ (Mobile Money Identifier) ಮತ್ತು ಪಾಸ್ ವರ್ಡ್ ನೀಡುತ್ತದೆ. ಇದಾದ ಬಳಿಕ ಗ್ರಾಹಕರು ಮೊಬೈಲ್ ನಲ್ಲಿ ರೈಲಿನ ನಂಬರ್, ತೆರಳಬೇಕಾದ ಸ್ಥಳ, ಪ್ರಯಾಣದ ದಿನಾಂಕ ಇತ್ಯಾದಿ ವಿವರಗಳನ್ನು ಎಸ್ಎಂಎಸ್ ಮೂಲಕ ನಿಗದಿತ ಸಂಖ್ಯೆಯೊಂದಕ್ಕೆ ಕಳುಹಿಸಬೇಕು. ಟಿಕೆಟ್ ಲಭ್ಯವಿದ್ದರೆ ತಕ್ಷಣವೇ ಗ್ರಾಹಕರಿಗೆ ಟ್ರಾನ್ಸಾಕ್ಷನ್ ಐಡಿ ರವಾನೆಯಾಗುತ್ತದೆ. ಬಳಿಕ ಗ್ರಾಹಕರು ಮತ್ತೊಂದು ಎಸ್ಎಂಎಸ್ ಮೂಲಕ ಟ್ರಾನ್ಸಾಕ್ಷನ್ ಐಡಿ, ಎಂಎಂಐಡಿ ಹಾಗೂ ಪಾಸ್ ವರ್ಡ್ ರವಾಸಿದರೆ ಸಾಕು ಟಿಕೆಟ್ ಬುಕ್ ಆದಂತೆ. ಒಂದೇ ಎಸ್ಎಮ್ಎಸ್ ನಲ್ಲಿ ಆರು ಟಿಕೆಟ್ ಗಳನ್ನು ಬುಕ್ ಮಾಡಬಹುದಾಗಿದೆ.

- **ವಿ.ಸಿ.ಶುಕ್ಲಾ ವಿಧಿವಶ:** ಛತ್ತೀಸ್ ಗಢದಲ್ಲಿ ಮೇ 26,2013 ರಂದು ಕಾಂಗ್ರೆಸ್ಸಿಗರ ಮೇಲೆ ನಡೆದಿದ್ದ ನಕ್ಸಲ್ ದಾಳಿ ವೇಳೆ ತೀವ್ರವಾಗಿ ಗಾಯಗೊಂಡಿದ್ದ ಮಧ್ಯಪ್ರದೇಶ ಮೊದಲ ಮುಖ್ಯಮಂತ್ರಿ ಹಾಗೂ ಕೇಂದ್ರದ ಮಾಜಿ ಸಚಿವ ವಿ.ಸಿ.ಶುಕ್ಲಾ ವಿಧಿವಶರಾದರು. 1957 ರಲ್ಲಿ ಲೋಕಸಭೆ ಪ್ರವೇಶಿಸಿದ ಅವರು, ಒಟ್ಟು ಒಂಬತ್ತು ಬಾರಿ ಸಂಸತ್ತು ಪ್ರವೇಶಿಸಿದ್ದರು.

- **ರಾಜ್ಯ ಟಿಟಿ ಅಧ್ಯಕ್ಷರಾಗಿ ದಿನೇಶ್ ಗುಂಡೂರಾವ್:** ಕರ್ನಾಟಕ ಟೇಬಲ್ ಟೆನ್ನಿಸ್ ಸಂಘದ ಅಧ್ಯಕ್ಷರಾಗಿ ಸಚಿವ ದಿನೇಶ್ ಗುಂಡೂರಾವ್, ಪೋಷಕರಾಗಿ ಉದ್ಯಮಿ ಡಾ.ಪಿ.ದಯಾನಂದ ಪೈ ಹಾಗೂ ಮುಖ್ಯಸ್ಥರಾಗಿ ನಿವೃತ್ತ ಐಎಎಸ್ ಅಧಿಕಾರಿ ಜಿ.ಅಲೆಕ್ಸಾಂಡರ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

- **ಸೆಬಾಸ್ಟಿಯನ್ ವೆಟ್ಟಾಲ್ ಗೆ ಕೆನಡಾ ಗ್ರ್ಯಾನ್ ಪ್ರಿ ಫಾರ್ಮೂಲಾ ಒನ್:** ರೆಡ್ ಬುಲ್ ತಂಡದ ಸೆಬಾಸ್ಟಿಯನ್ ವೆಟ್ಟಾಲ್ ಕೆನಡಾ ಗ್ರ್ಯಾನ್ ಪ್ರಿ ಫಾರ್ಮೂಲಾ ಒನ್ ರೇಸ್ ನ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. "ಪೋಲ್ ಪೊಸಿಷನ್' ನಿಂದ ಸ್ಪರ್ಧೆಯನ್ನು ಆರಂಭಿಸಿದ ಈ ಚಾಲಕ ಕೊನೆಯ ಸುತ್ತಿನವರೆಗೂ ಮುನ್ನಡೆಯನ್ನು ಕಾಪಾಡಿಕೊಳ್ಳಲು ಯಶಸ್ವಿಯಾದರು. ಫೆರಾರಿ ತಂಡದ ಫೆರ್ನಾಂಡೊ ಅಲೊನ್ಸೊ ಮತ್ತು ಲೂಯಿಸ್ ಹ್ಯಾಮಿಲ್ಟನ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನವನ್ನು ಪಡೆದುಕೊಂಡರು.

- **ಭಾರತ ಮೂಲದ ಪ್ರಕಾಶ್ ಪಟೇಲ್ ಗೆ ಪ್ರಶಸ್ತಿ:** ನ್ಯೂಜಿಲ್ಯಾಂಡ್ ನ "ದಿ ಸರ್ಜಿಯಾಂಟ್ ಗ್ಯಾಲರಿ" ನೀಡುವ ಪ್ರಶಸ್ತಿಗೆ ಭಾರತ ಮೂಲದ ಪ್ರಕಾಶ್ ಪಟೇಲ್ ಆಯ್ಕೆಯಾಗಿದ್ದಾರೆ. ನ್ಯೂಜಿಲ್ಯಾಂಡ್ ನಲ್ಲಿ ವಾಂಗನುವಾಯಿಯಲ್ಲಿ ನೆಲೆಸಿರುವ ಪ್ರಕಾಶ್ ತಾವು ಬಿಡಿಸಿದ ಅಸ್ಟ್ರೋನಾಟ್ ಎಂಬ ಚಿತ್ರಕ್ಕೆ ಈ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

- **ಜೂನ್ 12, ಬಾಲ ಕಾರ್ಮಿಕ ವಿರೋಧಿ ದಿನ:** ಜೂನ್ 12 ರಂದು ಬಾಲ ಕಾರ್ಮಿಕ ವಿರೋಧಿ ದಿನವೆಂದು ಆಚರಿಸಲಾಗುತ್ತದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಈ ದಿನವನ್ನು 2002 ಬಾಲ ಕಾರ್ಮಿಕ ವಿರೋಧಿ ದಿನವೆಂದು ಆಚರಿಸುತ್ತಿದೆ. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ದುಡಿಯುವ ಮಕ್ಕಳನ್ನು ಬಾಲ ಕಾರ್ಮಿಕರು ಎನ್ನಲಾಗುತ್ತದೆ.

- **<u>ಮಹಿಳೆಯರ ಮೇಲೆ ದೌರ್ಜನ್ಯ ಪಶ್ಚಿಮ ಬಂಗಾಳ ನಂ.1:</u>** "ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೊ" ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ಮಹಿಳೆಯರ ಮೇಲೆ ಹೆಚ್ಚು ದೌರ್ಜನ್ಯ ನಡೆಯುತ್ತಿರುವ ರಾಜ್ಯಗಳ ಪೈಕಿ ಪಶ್ಚಿಮ ಬಂಗಾಳ ಪ್ರಥಮ ಸ್ಥಾನದಲ್ಲಿದೆ. ಸುಮಾರು 30,942 ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಪಶ್ಚಿಮ ಬಂಗಾಳದಲ್ಲಿ ದಾಖಲಾಗಿದ್ದು, ದೇಶದಲ್ಲೇ ಅತ್ಯಂತ ಹೆಚ್ಚು ಎನ್ನಲಾಗಿದೆ. ಮಹಿಳೆಯರಿಗೆ ಅಸುರಕ್ಷಿತ ನಗರಗಳ ಪೈಕಿ ದೆಹಲಿ ಮೊದಲ ಸ್ಥಾನದಲ್ಲಿದ್ದರೆ, ಬೆಂಗಳೂರು ಎರಡನೇ ಸ್ಥಾನ ಮತ್ತು ಕೊಲ್ಕತ್ತಾ ಮೂರನೇ ಸ್ಥಾನದಲ್ಲಿದೆ.

- **<u>ಜುಲೈ 1 ರಿಂದ ಉಚಿತ ಅಪಘಾತ ಚಿಕಿತ್ಸೆ ಯೋಜನೆಗೆ ಜಾರಿ:</u>** ದೇಶದ ಅತ್ಯಂತ ಅಪಾಯಕಾರಿ ಮತ್ತು ಅತಿ ಹೆಚ್ಚು ವಾಹನ ದಟ್ಟಣೆಯಿಂದ ಕೂಡಿರುವ "ದೆಹಲಿ-ಗುರಂಗಾವ್-ಜೈಪುರ" ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಗಳಲ್ಲಿ ಗಾಯಗೊಂಡವರಿಗೆ ಉಚಿತವಾಗಿ ನಗದು ರಹಿತ ಚಿಕಿತ್ಸೆ ನೀಡುವ ಬಹು ನಿರೀಕ್ಷಿತ ಯೋಜನೆಗೆ ಜುಲೈ 1 ರಿಂದ ಚಾಲನೆ ನೀಡಲಾಗುವುದು. ಅಪಘಾತದಲ್ಲಿ ಗಾಯಗೊಂಡವರಿಗೆ ಕೇವಲ ಆರು ಏಳು ನಿಮಿಷದೊಳಗೆ ಚಿಕಿತ್ಸೆ ನೀಡಿ ಪ್ರಾಣಪಾಯದಿಂದ ಪಾರು ಮಾಡುವುದು ಇದರ ಮುಖ್ಯ ಉದ್ದೇಶ. ಇದಕ್ಕಾಗಿ ಸರ್ಕಾರ ಅಗತ್ಯವಿರುವಷ್ಟು ಅಂಬುಲೆನ್ಸ್ ಗಳನ್ನು ಸೂಕ್ತ ಸ್ಥಳಗಳಲ್ಲಿ ನಿಯೋಜಿಸಲಿದೆ. ಅಪಘಾತದಲ್ಲಿ ಗಾಯಗೊಂಡವರಿಗೆ ಚಿಕಿತ್ಸೆಗೆ ಸರ್ಕಾರ ರೂ 30,000 ದವರೆಗೂ ಭರಿಸಲಿದೆ.

- **<u>ಮೈಸೂರಿಗೆ ಅಖಿಲೇಶ್ ಯಾದವ್:</u>** ಉತ್ತರ ಪ್ರದೇಶ ಮುಖ್ಯಮಂತ್ರಿಗಳಲಾದ "ಅಖಿಲೇಶ್ ಯಾದವ್ ರವರು ಇದೇ ಶುಕ್ರವಾರದಂದು ಮೈಸೂರಿಗೆ ಭೇಟಿ ನೀಡಲಿದ್ದಾರೆ. ಯಾದವ್ "ಜಯಚಾಮರಾಜೇಂದ್ರ ಕಾಲೇಜ್ ಆಫ್ ಎಂಜನಿಯರಿಂಗ್" ನಲ್ಲಿ ಪರಿಸರ ಎಂಜನಿಯರಿಂಗ್ ವಿಭಾಗದಲ್ಲಿ ಪದವಿ ಮುಗಿಸಿದ್ದರು.

- **<u>ಕಿರಣ್ ಬೇಡಿ ಗೆ "ನೊಮುರಾ (Nomura)" ಪ್ರಶಸ್ತಿ:</u>** ಮಾಜಿ ಐಪಿಎಸ್ ಅಧಿಕಾರಿ ಕಿರಣ್ ಬೇಡಿ ಅವರಿಗೆ ನೊಮುರಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಜನಪರ ಸೇವೆಗೆ ಕಿರಣ್ ಬೇಡಿ ಅವರು ತಮ್ಮನ್ನೇ ಅರ್ಪಿಸಿಕೊಂಡಿರುವುದನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಜಪಾನ್ ನ ನೊಮುರಾ ಸಮೂಹ ಸಂಸ್ಥೆ ವತಿಯಿಂದ ಕೊಡಲಾಗುವ ಈ ಪ್ರಶಸ್ತಿಯು $10,000 ನಗದನ್ನು ಒಳಗೊಂಡಿದೆ. ಈ ಪ್ರಶಸ್ತಿಯ ಹಣವನ್ನು ಜೈಲಿನಲ್ಲಿ ಬಂಧಿತರಾಗಿರುವ ಮಕ್ಕಳ ಶಿಕ್ಷಣಕ್ಕೆ ನೀಡುವುದಾಗಿ ಕಿರಣ್ ಬೇಡಿ ತಿಳಿಸಿದ್ದಾರೆ.

- **<u>ದೇಶದ ಎರಡನೇ ಅತಿ ಉದ್ದವಾದ "ಫ್ಲೈ ಒವರ್ (Fly over)" ಉದ್ಘಾಟನೆ:</u>** ದೇಶದ ಎರಡನೇ ಅತಿ ಉದ್ದವಾದ "ಫ್ಲೈ ಒವರ್" ನ್ನು ಮುಂಬೈನಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಪೃಥ್ವಿರಾಜ್ ಚೌಹಣ್ ರವರು ಉದ್ಘಾಟಿಸಿದರು. ಮುಂಬೈ ನಗರದಲ್ಲಿ ತಲೆಯೆತ್ತಿರುವ ಈ 17 ಕಿ.ಮೀ ಉದ್ದವಿರುವ ಈ ಫ್ಲೇ ಒವರ್ ದೇಶದ ಅತಿ ದೊಡ್ಡ ಫ್ಲೈ ಒವರ್ ಎನಿಸಿಕೊಂಡಿದೆ. ಸದ್ಯ 14 ಕಿ.ಮೀ ಉದ್ದ ಮಾತ್ರವಿರುವ ಇದನ್ನು ಸುಮಾರು 850 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಸೌತ್ ಮುಂಬೈ ಮತ್ತು ಘಾಟ್ಕೊಪರ್ ನಡುವೆ ಸಂಪರ್ಕ ಕಲ್ಪಿಸಲಿದೆ. ಉಳಿದ ಮೂರು ಕಿ.ಮೀ ದೂರವನ್ನು ವರ್ಷದ ಅಂತ್ಯದಲ್ಲಿ ನಿರ್ಮಿಸಲಾಗುವುದು. ಹೈದ್ರಾಬಾದ್ ನಲ್ಲಿ ನಿರ್ಮಿಸಲಾಗಿರುವ 11 ಕಿ.ಮೀ ಉದ್ದದ "ಫ್ಲೈ ಒವರ್" ಇದುವರೆಗೂ ದೇಶದ ಉದ್ದವಾದ ಫ್ಲೈ ಒವರ್ ಎನಿಸಿತ್ತು.

- **<u>20 ನೇ ಕಾನೂನು ಆಯೋಗಕ್ಕೆ ಸದಸ್ಯರ ನೇಮಕ</u>**: ಶ್ರೇಷ್ಠ ಕಾನೂನು ತಜ್ಞ ನರೈನ್ ಮಣಿ ಮತ್ತು ಅಸ್ಸಾಂ ನ ನ್ಯಾಷನಲ್ ಲಾ ಸ್ಕೂಲ್ ಮತ್ತು ಜುಡಿಷಿಯಲ್ ಅಕಾಡೆಮಿಯ ಡೈರೆಕ್ಟರ್ ಜನರಲ್ ಆದ ಡಾ.ಗುರ್ಜೀತ್ ಸಿಂಗ್ ರವರನ್ನು 20 ನೇ ಕಾನೂನು

ಆಯೋಗದ ಅರೆಕಾಲಿಕ ಸದಸ್ಯರನ್ನಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಇದೇ ವೇಳೆ ದೆಹಲಿ ಹೈಕೋರ್ಟ್ ನ ನಿವೃತ್ತ ನ್ಯಾಯಾಧೀಶೆ ಉಷಾ ಮೆಹ್ರಾ ರವರನ್ನು ಪೂರ್ಣ ಸದಸ್ಯರನ್ನಾಗಿ ನೇಮಕಮಾಡಲಾಗಿದೆ. 20 ನೇ ಕಾನೂನು ಆಯೋಗವನ್ನು ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ಡಿ.ಕೆ.ಜೈನ್ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. 20 ನೇ ಕಾನೂನು ಆಯೋಗದ ಅವಧಿಯು 01.09.2012 ರಿಂದ 31.08.2015 ರವರೆಗೆ ಮೂರು ವರ್ಷಗಳ ಕಾಲ ಅಸ್ಥಿತ್ವದಲ್ಲಿ ಇರಲಿದೆ.

- **CCI ಗೆ ಗುಪ್ತಾ ರಾಜೀನಾಮೆ**: ಭಾರತೀಯ ಸ್ಪರ್ಧಾತ್ಮಕ ಆಯೋಗ (Competition Commission of India)ದ ಸದಸ್ಯತ್ವಕ್ಕೆ ಹೆಚ್.ಸಿ.ಗುಪ್ತಾ ರಾಜೀನಾಮೆ ನೀಡಿದ್ದಾರೆ. ಗುಪ್ತಾ 2006 ರಿಂದ 2009 ರ ವರೆಗೆ ಕಲ್ಲಿದ್ದಲು ಕಾರ್ಯದರ್ಶಿಯಾಗಿದ್ದರು. ಈ ಅವಧಿಯಲ್ಲಿ ಕಲ್ಲಿದ್ದಲು ಹಂಚಿಕೆಗೆ ಸಂಬಂಧಿಸಿದಂತೆ ಅವ್ಯವಹಾರ ಹಗರಣದಲ್ಲಿ ಗುಪ್ತಾರ ಹೆಸರು ಕೇಳಿ ಬಂದಿತ್ತು. ಈ ಹಿನ್ನಲೆಯಲ್ಲಿ CBI ಯನ್ನು ಗುಪ್ತಾ ಅವರನ್ನು ವಿಚಾರಣೆ ಒಳಪಡಿಸಲು ಕೋರಿ ಸಲ್ಲಿಸಿದ್ದ ಮನವಿಗೆ ಕೇಂದ್ರ ವಾಣಿಜ್ಯ ವ್ಯವಹಾರ ಸಚಿವಾಲಯ ಒಪ್ಪಿಗೆ ಸೂಚಿಸಿದ ಕಾರಣ ಗುಪ್ತಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

- **ಬಿಎಸ್ಎನ್ಎಲ್ ಟೆಲಿಗ್ರಾಂ ಸೇವೆಗೆ ವಿದಾಯ**: ಸುಮಾರು 160 ವರ್ಷಗಳ ಕಾಲ ಜನರಿಗೆ ಸೇವೆ ಒದಗಿಸಿದ್ದ ಬಿಎಸ್ಎನ್ಎಲ್ ಟೆಲಿಗ್ರಾಂ ವ್ಯವಸ್ಥೆಯನ್ನು ಜುಲೈ 15 ರಿಂದ ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ. ಆತ್ಯಾಧುನಿಕ ಸೌಲಭ್ಯಗಳಾದ ಸ್ಮಾರ್ಟ್ ಫೋನ್, ಎಸ್ಎಂಎಸ್ ಮತ್ತು ಇ-ಮೇಲ್ ಗಳಿಂದ ಕ್ಷಣದಲ್ಲಿ ಮಾಹಿತಿ ರವಾಸಿಬಹುದಾಗಿರುವ ಕಾರಣ ಟೆಲಿಗ್ರಾಂ ವ್ಯವಸ್ಥೆ ತನ್ನ ಸ್ಥಾನಮಾನವನ್ನು ಕಳೆದುಕೊಂಡಿರುವ ಕಾರಣ ಈ ನಿರ್ಧಾರ ಕೈಗೊಳ್ಳಲಾಗಿದೆ.

- **C-17 ವಿಮಾನ ಹಸ್ತಾಂತರ**: ಯುದ್ಧ ಸಲಕರಣೆಗಳನ್ನು ಸಾಗಿಸುವ ಅತ್ಯಾಧುನಿಕ "ಸಿ-17 ಗ್ಲೋಬ್ ಮಾಸ್ಟರ್-3" ವಿಮಾನವನ್ನು ಬೋಯಿಂಗ್ ಕಂಪನಿ ಭಾರತಕ್ಕೆ ಹಸ್ತಾಂತರಿಸಿದೆ. ಪ್ರಸ್ತಕ ವರ್ಷ ಇನ್ನು ನಾಲ್ಕು ಮತ್ತು 2014 ರಲ್ಲಿ ಐದು ಸಿ-17 ವಿಮಾನಗಳನ್ನು ಹಸ್ತಾಂತರಿಸಲಿದೆ.

- **"ಹಿಮಾಲಯನ್ ವಂಡರ್" ದೇಶದ ಮೊದಲ ಮುಳ್ಳಿಲ್ಲದ ಗುಲಾಬಿ**: ಇನ್ನು ಹೂವು ಮುಳ್ಳು ಜೋಡಿಯಾಗಿ ಬಾಳುವ ಕಾಲ ಹೋಯಿತು. ಏಕೆಂದರೆ ಮುಳ್ಳಿಲ್ಲದ ಗುಲಾಬಿ ಹೂ ಗಿಡವನ್ನು ಅಭಿವೃದ್ದಿಪಡಿಸುವಲ್ಲಿ ಭಾರತ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. "ಇನ್ ಸ್ಟಿಟ್ಯೂಟ್ ಆಫ್ ಹಿಮಾಲಯನ್ ಬಯೋರಿಸೋರ್ಸ್ ಟೆಕ್ನಾಲಜಿ (IHBT)" ಯ ಮಾರ್ಕೇಂಡ್ ಸಿಂಗ್ ನೇತೃತ್ವದ ವಿಜ್ಞಾನಿಗಳ ತಂಡ ದೇಶದ ಮೊದಲ ಮುಳ್ಳಿಲ್ಲದ ಗುಲಾಬಿ ಹೂ ಗಿಡವನ್ನು ಅಭಿವೃದ್ದಿಪಡಿಸಿದೆ. ಈ ಗಿಡಕ್ಕೆ "ಹಿಮಾಲಯನ್ ವಂಡರ್" ಎಂದು ಹೆಸರಿಡಲಾಗಿದ್ದು, ಇದರ ಹೂ ಗಾಢ ಕೆಂಪು ಬಣ್ಣದಿಂದ ಕೂಡಿದೆ ಎಂದಿದ್ದಾರೆ ವಿಜ್ಞಾನಿಗಳು. ನೆದರ್ ಲ್ಯಾಂಡ್ ವಿಜ್ಞಾನಿಗಳು ಅಭಿವೃದ್ದಿಪಡಿಸಿದ್ದ "ಗ್ರಾಂಡ್ ಗಲ" ತಳಿ ಮುಳ್ಳಿಲ್ಲದ ಗುಲಾಬಿ ಗಿಡ ಎಂದು ಹೆಸರಾಗಿತ್ತು. ವಿಜ್ಞಾನಿಗಳ ಪ್ರಕಾರ "ಹಿಮಾಲಯನ್ ವಂಡರ್" ನೆದರ್ ಲ್ಯಾಂಡ್ ನ "ಗ್ರಾಂಡ್ ಗಲ" ಗಿಂತಲೂ ಭಿನ್ನವಾಗಿದೆ. ಗ್ರಾಂಡ್ ಗಲ ಹೂ ಕೆಲವೇ ದಿನಗಳಲ್ಲಿ ಮುದುಡಿ ಹೋಗುತ್ತದೆ ಆದರೆ ಹಿಮಾಲಯನ್ ವಂಡರ್ ಏಳು ದಿನಗಳ ಕಾಲ ತಾಜಾತನದಿಂದ ಕೂಡಿರುತ್ತದೆ ಮತ್ತು ಈ ಹೂವಿನ ಬುಡ ಭಾಗ ಸಹ ದಪ್ಪನಾಗಿದೆ ಎಂದಿದ್ದಾರೆ.

- **ಜೂನ್ -14: ವಿಶ್ವ ರಕ್ತದಾನಿಗಳ ದಿನ:** ಪ್ರತಿ ವರ್ಷ ಜೂನ್ 14 ನ್ನು ವಿಶ್ವ ರಕ್ತದಾನಿಗಳ ದಿನವೆಂದು ಆಚರಿಸಲಾಗುತ್ತದೆ. ರಕ್ತದಾನ ಶ್ರೇಷ್ಠ ದಾನವಾಗಿದ್ದು, ಜೀವ ಉಳಿಸುವಲ್ಲಿ ರಕ್ತದಾನದ ಮಹತ್ವವನ್ನು ಸಾರುವ ಮೂಲಕ ಸ್ವಪ್ರೇರಿತವಾಗಿ ರಕ್ತದಾನಕ್ಕೆ ಮುಂದಾಗಲು ಜನತೆಗೆ ಕರೆ ನೀಡುವುದು ಈ ದಿನದ ಮುಖ್ಯ ಉದ್ದೇಶ. **"Give the Gift of Life:Donate blood"** ಇದು ಈ ವರ್ಷದ ಥೀಮ್.

- **ಬಿಸ್ಲೆಟ್ ಡೈಮಂಡ್ ಲೀಗ್ ನಲ್ಲಿ ಗೆದ್ದ ಬೋಲ್ಟ್:** ಜಮೈಕಾದ ಒಲಂಪಿಕ್ಸ್ ಚಾಂಪಿಯನ್ ಉಸೇನ್ ಬೋಲ್ಟ್ ಅವರು ಬಿಸ್ಲೆಟ್ ಡೈಮಂಡ್ ಲೀಗ್ ನ 200 ಮೀ ಓಟದಲ್ಲಿ ತಮ್ಮ ಮಿಂಚಿನ ಓಟದಿಂದಾಗಿ ಪ್ರಶಸ್ತಿಯನ್ನು ಗೆದ್ದುಕೊಂಡರು. ಈ ಸಾಧನೆಗೈಯಲು ಅವರು ಕೇವಲ 19.76 ಸೆಕೆಂಡ್ ಗಳನ್ನು ಮಾತ್ರ ತೆಗೆದುಕೊಂಡರು.

- **"ಕಾಂಜಿ ರಾಮ್" ಪಾಕಿಸ್ತಾನ ಸಂಸತ್ತನ್ನು ಪ್ರವೇಶಿಸಿದ ಎರಡನೇ ಹಿಂದೂ:** ಪಂಜಾಬ್ ಮೂಲದ ಕಾಂಜಿರಾಮ್ ಸುಮಾರು 16 ವರ್ಷಗಳ ಪಾಕಿಸ್ತಾನ ಸಂಸತ್ತನ್ನು ಪ್ರವೇಶಿಸಿದ ಎರಡನೇ ಹಿಂದೂ ಎನಿಸಿಕೊಂಡಿದ್ದಾರೆ. 1997 ರಲ್ಲಿ ಸೇತ್ ಭಾರ್ತ ರಾಮ್ ರವರು ಪಾಕಿಸ್ತಾನ ಸಂಸತ್ತನ್ನು ಪ್ರವೇಶಿಸಿದ ಮೊದಲ ಹಿಂದೂ ಎಂಬ ಕೀರ್ತಿಗೆ ಪಾತ್ರರಾಗಿದ್ದರು. ಪಂಜಾಬ್ ಅಸೆಂಬ್ಲಿ ಪ್ರಾಂತ್ಯದಲ್ಲಿ ಮುಸ್ಲಿಂಯೇತರರಿಗೆ ಮೀಸಲಿಡಲಾಗಿದ್ದ ಸ್ಥಾನದಿಂದ ರಾಮ್ ಸಂಸತ್ತಿಗೆ ಆಯ್ಕೆಯಾಗಿದ್ದಾರೆ. ಇತ್ತೀಚೆಗಷ್ಟೇ ಸರ್ದಾರ್ ರಮೇಶ್ ಸಿಂಗ್ ಅರೋರ ಅವರು ಪಾಕ್ ಸಂಸತ್ತಿಗೆ ಆಯ್ಕೆಗೊಂಡ ಮೊದಲ ಸಿಖ್ ಎನಿಸಿದ್ದರು.

- **"ಆಯೇಷಾ ಫಾರೂಕ್" ಪಾಕಿಸ್ತಾನದ ಮೊಲದ ಮಹಿಳಾ ಫೈಲಟ್:** ಆಯೇಷಾ ಫಾರೂಕ್ ಅವರು ಪಾಕಿಸ್ತಾನದ ಏಕೈಕ ಮಹಿಳಾ ಯುದ್ಧ ವಿಮಾನ ಫೈಲಟ್ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಆಯೇಷಾ ಮೂಲತಃ ಪಂಜಾಬ್ ಪ್ರಾಂತ್ಯದ ಬಹವಾಲ್ ಪುರದವರು. ಕಳೆದ ಹತ್ತು ವರ್ಷಗಳಲ್ಲಿ ಪಾಕಿಸ್ತಾನ ವಾಯುಪಡೆಗೆ ಆಯ್ಕೆಯಾದ 19 ಮಹಿಳೆಯರ ಪೈಕಿ ಆಯೇಷಾ ಸಹ ಒಬ್ಬರು. ಆಯೇಷಾ ಅಲ್ಲದೇ ಇನ್ನು ಐದು ಮಹಿಳೆಯರು ಫೈಲಟ್ ಗಳಾಗಿ ನೇಮಕಗೊಂಡಿದ್ದಾರೆ. ಆದರೆ ಅವರೆಲ್ಲರೂ ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆ ಆಗಬೇಕಿದೆ.

- **ಕಿರಿಯರ ವಿಶ್ವಕಪ್ ಫುಟ್ಬಾಲ್ ಬಿಡ್ ಗೆ ಕೇಂದ್ರ ಸರ್ಕಾರ ಅಸ್ತು:** 2017 ರಲ್ಲಿ ನಡೆಯಲಿರುವ ಹದಿನೇಳು ವರ್ಷದೊಳಗಿನವರ ವಿಶ್ವಕಪ್ ಫುಟ್ ಬಾಲ್ ಟೂರ್ನಿಯ ಆತಿಥ್ಯ ವಹಿಸಲು ಬಿಡ್ ಸಲ್ಲಿಸಲಿರುವ ಅಖಿಲ ಭಾರತ ಫುಟ್ ಬಾಲ್ ಒಕ್ಕೂಟದ (AIFF) ಆಸೆಗೆ ಕೇಂದ್ರ ಸರ್ಕಾರ ಹಸಿರು ನಿಶಾನೆ ತೋರಿದೆ. ಒಂದು ವೇಳೆ ಬಿಡ್ ನಲ್ಲಿ ಭಾರತ ಗೆದ್ದರೆ, ಟೂರ್ನಿಯ ಆಯೋಜನೆಗೆ ತಗಲುವ ವೆಚ್ಚವನ್ನು ಫೀಫಾ ಮತ್ತು AIFF ಭರಿಸಲಿವೆ. ಹೆಚ್ಚುವರಿ ಹಣಕಾಸಿನ ನೆರವನ್ನು ನೀಡಲು ಸರ್ಕಾರ ಒಪ್ಪಿಗೆ ಸೂಚಿಸಿದೆ. ಅಲ್ಲದೇ ಕ್ರೀಡಾಂಗಣಗಳನ್ನು ಮೇಲ್ದರ್ಜೆಗೇರಿಸಲು ರೂ.95 ಕೋಟಿಯನ್ನು ಕೇಂದ್ರ ನೇರವಾಗಿ ರಾಜ್ಯಗಳಿಗೆ ನೀಡಲಿದೆ.

- **ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಪೆಟ್ರೋಲ್ ಬಂಕ್ ಗಳಲ್ಲಿ ಶೌಚಾಲಯ ಕಡ್ಡಾಯ**: ರಾಷ್ಟ್ರೀಯ ಹೆದ್ದಾರಿ ಬಳಿ ಇಳಿರುವ ಪೆಟ್ರೋಲ್ ಬಂಕ್ ಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ಶೀಘ್ರವೇ ಆದೇಶ ಹೊರಬೀಳಲಿದೆ. ಈ ಬಗ್ಗೆ ಕೇಂದ್ರ ಹೆದ್ದಾರಿ ಸಚಿವಾಲಯ ಚಿಂತನೆ ನಡೆಸಿದ್ದು, ಪೆಟ್ರೋಲ್ ಬಂಕ್ ಮಾಲೀಕರು ಮತ್ತು ತೈಲ ಕಂಪನಿಗಳ ಜೊತೆ ಒಂದು ಸುತ್ತಿನ ಮಾತುಕತೆ ನಡೆಸಿದ ಬಳಿಕ ನಿರ್ಧಾರವನ್ನು ಅಂತಿಮಗೊಳಿಸಲಿದೆ.

- **"ಲೀ ಚಾಂಗ್ ವೈ" ಗೆ ಮಲೇಷಿಯಾ ಓಪನ್ ಟೈಟಲ್:** ಮಲೇಷಿಯಾದ "ಲೀ ಚಾಂಗ್ ವೈ" ಮಲೇಷಿಯಾ ಸೂಪರ್ ಸಿರೀಸ್ ನ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ವಿಜಯಿಶಾಲಿಯಾದರು. ತಮ್ಮ ಪ್ರತಿಸ್ಪರ್ಧಿ ಜರ್ಮನ್ ನ ಮಾರ್ಕ್ ವೆಬ್ಲರ್ ಅವರನ್ನು 21-15, 21-14 ರಿಂದ ಮಣಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಲೀ ಅವರಿಗೆ ಇದು ಐದನೇ ಪ್ರಶಸ್ತಿ.

- **"ಪಂಜಾ ಸಾಹೀಬ್" ನಗರವನ್ನು ಪವಿತ್ರ ನಗರವೆಂದು ಘೋಷಿಸಲಿರುವ ಪಾಕ್:** ಸಿಖ್ ರ ಪ್ರಮುಖ ಧಾರ್ಮಿಕ ಸ್ಥಳವಾದ "ಪಂಜಾ ಸಾಹೀಬ್" ನಗರವನ್ನು ಪವಿತ್ರ ನಗರ (Holy City) ಎಂದು ಘೋಷಿಸಲು ಪಾಕಿಸ್ತಾನ ಸರ್ಕಾರ ನಿರ್ಧರಿಸಿದೆ. ಭಾರತ-ಪಾಕಿಸ್ತಾನ ಸ್ನೇಹ ಒಕ್ಕೂಟದ ಅಧ್ಯಕ್ಷರಾದ ಪಾಕಿಸ್ತಾನದ ಆರೀಫ್ ಚೌಧರಿ ಅವರು ಪಂಜಾಬ್ ಮುಖ್ಯಮಂತ್ರಿ ಪ್ರಕಾಶ್ ಬಾದಲ್ ಸಿಂಗ್ ನ್ನು ಭೇಟಿಯಾದ ಸಂದರ್ಭದಲ್ಲಿ ಈ ನಿರ್ಧಾರವನ್ನು ವ್ಯಕ್ತಪಡಿಸಿದ್ದಾರೆ. ಸಿಖ್ಖ್ ಧರ್ಮದ ಸಂಸ್ಥಾಪಕ ಗುರು ನಾನಕ್ ಅವರೊಂದಿಗೆ ಗುರುತಿಸಿಕೊಂಡಿರುವ ಈ ನಗರಕ್ಕೆ ವಿಶ್ವದ ನಾನಾಕಡೆಯಿಂದ ಸಿಖ್ಖ್ ಧಾರ್ಮಿಕರು ಆಗಮಿಸುತ್ತಾರೆ.

- **"ಇಶಾ ಸಿಂಗ್" ಮಿಸ್ ನಾರ್ತ್ ಇಂಡಿಯಾ:** ಧರ್ಮಶಾಲ ಮೂಲದ 26 ವರ್ಷ ವಯಸ್ಸಿನ "ಇಶಾ ಸಿಂಗ್" FEM ಮಿಸ್ ನಾರ್ತ್ ಇಂಡಿಯಾ-2013 ಕಿರೀಟವನ್ನು ಮುಡಿಗೇರಿಸಿಕೊಂಡರು. ಜಗ್ಮಿತ್ ಕೌರ್ ಹಾಗೂ ಶ್ವೇತಾ ಸಿಂಗ್ ಕ್ರಮವಾಗಿ ಮೊದಲ ರನ್ನರ್ ಆಪ್ ಮತ್ತು ಎರಡನೇ ರನ್ನರ್ ಆಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು.

- **ಅಕ್ಟೋಬರ್ ನಲ್ಲಿ "ಇಂದ್ರಾ" ಸೇನಾ ಸಮರಭ್ಯಾಸ:** ಭಾರತ ಮತ್ತು ರಷ್ಯಾ ನಡುವಿನ ಸೇನಾ ಸಮರಭ್ಯಾಸ "ಇಂದ್ರಾ (INDRA)"-2013" ಅಕ್ಟೋಬರ್ ನಲ್ಲಿ ರಾಜಸ್ತಾನದ ಮಹಜನ್ ಸಮರ ಭೂಮಿಯಲ್ಲಿ ನಡೆಯಲಿದೆ. ಭಯೋತ್ಪಾದನೆ ನಿಗ್ರಹ ತಂತ್ರ ಮತ್ತು ಮಿಲಿಟರಿ ಕೌಶಲ್ಯ ಅಭಿವೃದ್ದಿ ಸಲುವಾಗಿ ಎರಡು ದೇಶಗಳ ಸೇನಾ ಪಡೆಗಳು ಜಂಟಿಯಾಗಿ ಅಭ್ಯಾಸ ನಡೆಸಲಿವೆ. 2012 ರಲ್ಲಿ ಈ ಸಮರಭ್ಯಾಸವನ್ನು ರಷ್ಯಾದಲ್ಲಿ ಆಯೋಜಿಸಲಾಗಿತ್ತು. ಭಾರತ ಮತ್ತು ರಷ್ಯಾ ನಡುವಿನ "ಇಂದ್ರಾ" ಸಮರಭ್ಯಾಸವನ್ನು 2003 ರಿಂದ ನಡೆಸಲಾಗುತ್ತಿದೆ.

- **ಏರ್ ಏಷ್ಯಾ ಮುಖ್ಯ ಸಲಹೆಗಾರರಾಗಿ "ರತನ್ ಟಾಟ":** ಅಗ್ಗ ದರದ ವಿಮಾನಯಾನ ಸೇವೆ ಒದಗಿಸುತ್ತಿರುವ ಮಲೇಷಿಯಾದ "ಏರ್ ಏಷ್ಯಾ" ಸಂಸ್ಥೆಯು ಭಾರತದಲ್ಲಿ ತನ್ನ ಸೇವೆಯನ್ನು ಆರಂಭಿಸಿದ ಮೇಲೆ "ರತನ್ ಟಾಟಾ"ರವರು ಸಂಸ್ಥೆಯ ಮುಖ್ಯ ಸಲಹೆಗಾರರಾಗಿ ನೇಮಕ ಮಾಡಿಕೊಳ್ಳುವುದಾಗಿ ಸಂಸ್ಥೆಯ ಮುಖ್ಯಸ್ಥ "ಟೋನಿ ಫರ್ನಾಡಿಸ್" ಅವರು ಹೇಳಿದ್ದಾರೆ. ಏರ್ ಏಷ್ಯಾ ಇತ್ತೀಚೆಗಷ್ಟೇ ಸಂಸ್ಥೆಯ ಸಿಇಓ ಆಗಿ ಮಿತ್ತು ಚಾಂಡಿಲ್ಯ ರವರನ್ನು ನೇಮಕ ಮಾಡಿದೆ. ಫರ್ನಾಡಿಸ್, ಟಾಟಾ ಸನ್ಸ್ ಮತ್ತು ಅರುಣ್ ಭಾಟಿಯಾ ಒಡೆತನದ ಟೆಲೆಸ್ಟ್ರಾ ಟ್ರೇಡ್ ಪ್ಲೆಸ್ 49:30:21 ರ ಪಾಲುಗಾರಿಕೆಯಲ್ಲಿ ಜಂಟಿಯಾಗಿ ಭಾರತದಲ್ಲಿ ವಿಮಾನ ಸೇವೆಯನ್ನು ಆರಂಭಿಸಲು ಒಪ್ಪಂದ ಮಾಡಿಕೊಂಡಿವೆ.

- **ಜೂನ್ 15: ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನ:** ಜೂನ್ 15 ನ್ನು ವಿಶ್ವಸಂಸ್ಥೆ "ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನವೆಂದು (World Elder Abuse Awareness Day) ಘೋಷಿಸಿದೆ. ಮಾನಸಿಕವಾಗಿ, ದೈಹಿಕವಾಗಿ ಮತ್ತು ಆರ್ಥಿಕವಾಗಿ ಕಡೆಗಣಿಸಲ್ಪಟ್ಟ ಹಿರಿಯರತ್ತ ವಿಶ್ವದ ಗಮನವನ್ನು ಹರಿಸುವಂತೆ ಮಾಡುವುದು ಈ ದಿನದ ಮುಖ್ಯ ಉದ್ದೇಶ. ಹಿರಿಯರ ಮೇಲಾಗುವ ಹಿಂಸಾಚಾರವನ್ನು ತಡೆಯುವ ಸಲುವಾಗಿ ರಾಷ್ಟ್ರೀಯ, ಸ್ಥಳೀಯ ಮತ್ತು ಖಾಸಗಿ ಸಂಘ ಸಂಸ್ಥೆಗಳು ವಿಚಾರ ವಿನಿಮಯವನ್ನು

ಮಾಡಿಕೊಳ್ಳುವ ಮೂಲಕ ಹಿರಿಯರ ಮೇಲಿನ ದೌರ್ಜನ್ಯವನ್ನು ತಡೆಯಲು ಈ ದಿನ ವೇದಿಕೆಯಾಗಿದೆ. ವಿಶ್ವ ಹಿರಿಯರ ನಿಂದನೆ ಜಾಗೃತಿ ದಿನವನ್ನು ಮೊದಲ ಬಾರಿಗೆ 2012 ರಲ್ಲಿ ವಿಶ್ವಸಂಸ್ಥೆ ಆಯೋಜಿಸಿತ್ತು. ಪ್ರತಿ ವರ್ಷ ಅಕ್ಟೋಬರ್ 1 ರಂದು ಅಂತರರಾಷ್ಟ್ರೀಯ ಹಿರಿಯರ ದಿನವೆಂದು ಸಹ ಆಚರಿಸಲಾಗುತ್ತದೆ.

- **ಸೈಬರ್ ಅಪರಾಧ ಬೆಂಗಳೂರು ನಂ.1:** ಸಿಲಿಕಾನ್ ಸಿಟಿ ಬೆಂಗಳೂರು ಈಗ ಸೈಬರ್ ಕ್ರೈಮ್ ಸಿಟಿ. "ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ" ಬಿಡುಗಡೆಗೊಳಿಸಿರುವ ಅಂಕಿ-ಅಂಶಗಳ ಪ್ರಕಾರ 2012 ರಲ್ಲಿ ದೇಶದ 53 ಪ್ರಮುಖ ನಗರಗಳಲ್ಲಿ ದಾಖಲಾಗಿರುವ ಸೈಬರ್ ಅಪರಾಧ ಪ್ರಕರಣಗಳಲ್ಲಿ ಶೇ 24.4 ರಷ್ಟು ಪ್ರಕರಣಗಳು ಬೆಂಗಳೂರಿನಲ್ಲಿ ದಾಖಲಾಗಿವೆ. ಮಾಹಿತಿ ತಂತ್ರಜ್ಞಾನ ಕಾಯಿದೆಯಡಿ 2012 ರಲ್ಲಿ 342 ಸೈಬರ್ ಅಪರಾಧ ಪ್ರಕರಣಗಳು ಬೆಂಗಳೂರಿನಲ್ಲಿ ದಾಖಲಾಗಿವೆ. 2011 ರಲ್ಲಿ 117 ಪ್ರಕರಣಗಳು ದಾಖಲಾಗಿದ್ದವು. 153 ಪ್ರಕರಣಗಳು ದಾಖಲಾಗುವ ಮೂಲಕ ವಿಶಾಖಪಟ್ಟಣ ಎರಡನೇ ಸ್ಥಾನದಲ್ಲಿದೆ. ರಾಜ್ಯವಾರು ಪಟ್ಟಿಯಲ್ಲಿ ಆಂಧ್ರಪ್ರದೇಶ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕ ನಂತರದ ಸ್ಥಾನದಲ್ಲಿದೆ.

- **ತಮಿಳು ನಟ ಮತ್ತು ನಿರ್ದೇಶಕ ಮಣಿವಣ್ಣನ್ ನಿಧನ**: ತಮಿಳು ಚಿತ್ರರಂಗದ ಪ್ರಸಿದ್ಧ ನಟ ಮತ್ತು ನಿರ್ದೇಶಕ ಮಣಿವಣ್ಣನ್ ಹೃದಯಾಘಾತದಿಂದ ಚೆನ್ನೈನ ತಮ್ಮ ನಿವಾಸದಲ್ಲಿ ನಿಧನರಾದರು. ಸುಮಾರು 50 ಕ್ಕೂ ಹೆಚ್ಚು ಚಿತ್ರಗಳನ್ನು ಅವರು ನಿರ್ದೇಶಿಸಿದ್ದರು. ತಮಿಳಿನ ಖ್ಯಾತ ನಟ, ಸೂಪರ್ ಸ್ಟಾರ್ ರಜನೀಕಾಂತ್ ಚಿತ್ರಗಳು ಸೇರಿದಂತೆ ಇತರರ ಚಿತ್ರಗಳಲ್ಲಿ ಹಾಸ್ಯ ಕಲಾವಿದನಾಗಿ ಅವರು ಅಭಿನಯಿಸಿದ್ದರು.

- **"ನಾರ್ವೆ"ಯ ಮಿಲಿಟರಿಯಲ್ಲಿ ಮಹಿಳೆಯರ ನೇಮಕಕ್ಕೆ ಒಪ್ಪಿಗೆ:** "ಸ್ಟೋರ್ಟಿಂಗ್ (Storting)" ಎಂದು ಕರೆಯಲಾಗುವ ನಾರ್ವೆಯ ಸಂಸತ್ತು ಮಿಲಿಟರಿಯಲ್ಲಿ ಮಹಿಳೆಯರನ್ನು ನೇಮಕ ಮಾಡಿಕೊಳ್ಳುವ ಮಸೂದೆಗೆ ಒಪ್ಪಿಗೆ ನೀಡಿದೆ. ಈ ನಿರ್ಣಯದ ಮೂಲಕ ಪುರುಷರು ಮತ್ತು ಮಹಿಳೆಯರನ್ನು ಮಿಲಿಟರಿಗೆ ನೇಮಕ ಮಾಡಿಕೊಳ್ಳಲು ನಿರ್ಧರಿಸಿರುವ ಮೊದಲ NATO ಮತ್ತು ಮೊದಲ ಯುರೋಪಿಯನ್ ಒಕ್ಕೂಟ ದೇಶವೆಂಬ ಹಿರಿಮೆಗೆ ನಾರ್ವೆ ಪಾತ್ರವಾಗಿದೆ. ಲಿಂಗ ಅಸಮಾನತೆಯನ್ನು ಹೋಗಲಾಡಿಸುವಲ್ಲಿಯೂ ಸಹ ನಾರ್ವೆ ದೇಶ ಮುಂಚೂಣಿಯಲ್ಲಿದೆ. ನಾರ್ವೆಯ ಸಂಸತ್ತಿನ ಅರ್ಧದಷ್ಟು ಸದಸ್ಯರು ಮಹಿಳೆಯರೇ ಆಗಿರುವುದು ಗಮನಾರ್ಹ.

- **ಜೆಟ್ ಏರ್ ವೇಸ್ ನೂತನ ಸಿಇಓ "ಗ್ಯಾರಿ ಕೆನ್ನೆಥ್ ಟೂಮೆ (Gary Kenneth Toomey)":** ವಿಮಾನಯಾನ ಉದ್ದಿಮೆಯಲ್ಲಿ ಅಪಾರ ಅನುಭವ ಹೊಂದಿರುವ "ಗ್ಯಾರಿ ಕೆನ್ನೆಥ್ ಟೂಮೆ" ಅವರನ್ನು ಜೆಟ್ ಏರ್ ವೇಸ್ ಸಿಇಓ ಆಗಿ ನೇಮಕ ಮಾಡಲಾಗಿದೆ. ನಿಕೋಸ್ ಕರ್ದಸೀಸ್ ಇತ್ತೀಚೆಗೆ ರಾಜೀನಾಮೆ ನೀಡಿದ ಕಾರಣ ಈ ಹುದ್ದೆ ತೆರವಾಗಿತ್ತು. 58 ವರ್ಷದ ಟೂಮೆ "ಏರ್ ನ್ಯೂಜಿಲ್ಯಾಂಡ್" ಸಂಸ್ಥೆಯ ಅಧ್ಯಕ್ಷ ಮತ್ತು ಸಿಇಓ ಆಗಿದ್ದವರರು. ಅಲ್ಲದೇ ನ್ಯೂ ಗಿನಿಯಾದ PNG ಏರ್ ಲೈನ್ಸ್ ನ ಸಿಇಓ ಆಗಿಯೂ ಇವರು ಸೇವೆ ಸಲ್ಲಿಸಿದ್ದಾರೆ.

- **ಭಾರತದ ಶಿಲ್ಪಿ ಅನಿಶ್ ಕಪೂರ್ ಗೆ ನೈಟ್ ಹುಡ್ ಪ್ರಶಸ್ತಿ:** ಭಾರತೀಯ ಮೂಲದ ಬ್ರಿಟನ್ ಪ್ರಜೆ ಅನಿಶ್ ಕಪೂರ್ ಅವರಿಗೆ ಬ್ರಿಟನ್ ನ ಪ್ರತಿಷ್ಠಿತಯಾದ "ನೈಟ್ ಹುಡ್" ಪ್ರಶಸ್ತಿ ನೀಡಲಾಗಿದೆ. ದೃಶ್ಯ ಕಲಾ ಮಾಧ್ಯಮಕ್ಕೆ ಕಪೂರ್ ನೀಡಿರುವ ಕೊಡುಗೆಯನ್ನು ಗಮನಿಸಿ ಈ

ಗೌರವಕ್ಕೆ ಆಯ್ಕೆಮಾಡಲಾಗಿದೆ. 59 ವರ್ಷ ವಯಸ್ಸಿನ ಕಪೂರ್ ಅವರು ತಮ್ಮ ದೃಶ್ಯಕಲೆಯನ್ನು ಜಗತ್ತಿನಾದ್ಯಂತ ಪ್ರದರ್ಶಿಸಿ ಅಪಾರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರ ಕಲಾಕೃತಿಗೆ ವಿವಿಧ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ.

- **ಸಿರಿಯಾ ಬಂಡುಕೋರರ ನೆರವಿಗೆ ಅಮೇರಿಕಾ ಸೇನೆ:** ಸಿರಿಯಾದ ಅಧ್ಯಕ್ಷ ಬಷರ್ ಅಲ್ ಅಸಾದ್ ಬೆಂಬಲಿಗರು ಮತ್ತು ಬಂಡುಕೋರರ ನಡುವಣಾ ಸಂಘರ್ಷ ತೀವ್ರಗೊಂಡಿದ್ದು, ಇದೇ ಮೊದಲ ಬಾರಿಗೆ ಅಮೆರಿಕಾ ಬಂಡುಕೋರರ ನೆರವಿಗೆ ತನ್ನ ಸೇನೆಯನ್ನು ಕಳುಹಿಸುವ ಮೂಲಕ ಸಹಾಯಕ್ಕೆ ಮುಂದಾಗಿದೆ. ಬಂಡುಕೋರರ ವಿರುದ್ಧ ರಾಸಾಯನಿಕ ಶಸ್ತಾಸ್ತ್ರಗಳನ್ನು ಪ್ರಯೋಗಿಸುವ ಮೂಲಕ ಅಸಾದ್, ತನ್ನ ಎಚ್ಚರಿಕೆಯನ್ನು ಕಡೆಗಣಿಸಿದ ಹಿನ್ನಲೆಯಲ್ಲಿ ಅಮೆರಿಕಾ ಈ ನಿರ್ಣಯವನ್ನು ಕೈಗೊಂಡಿದೆ. ನಿಷೇಧಿತ ರಾಸಾಯನಿಕ ಶಸ್ತಾಸ್ತ್ರಗಳ ಬಳಕೆಯಿಂದ ಸಿರಿಯಾದಲ್ಲಿ 100-150 ಮಂದಿ ಸಾವನ್ನಪ್ಪಿರುವ ಸುದ್ದಿ ಗುಪ್ತಾ ತನಿಖಾ ದಳಕ್ಕೆ ಲಭಿಸಿದೆ.

- **2014-15 ರಲ್ಲಿ ಭಾರತದ ಜಿಡಿಪಿ ಶೇ 6.7 ವಿಶ್ವಬ್ಯಾಂಕ್:** 2014-15 ರಲ್ಲಿ ಭಾರತದ ಒಟ್ಟಾರೆ ಉತ್ಪಾದನೆಯ ಪ್ರಮಾಣ ಶೇ 6.7 ರಷ್ಟು ಇರಲಿದೆ ಎಂದು ವಿಶ್ವಬ್ಯಾಂಕ್ ತನ್ನ ಆರ್ಥಿಕ ಮುನ್ನೋಟದಲ್ಲಿ ತಿಳಿಸಿದೆ. ರಫ್ತು ಮತ್ತು ಖಾಸಗಿ ಹೂಡಿಕೆ ಪ್ರಮಾಣ 2012 ಕ್ಕೆ ಹೋಲಿಸಿದರೆ ಚೇತರಿಕೆ ಕಂಡಿದ್ದು, ಇದೇ ರೀತಿ ಮುಂದುವರೆದರೆ 2014-15 ರಲ್ಲಿ ಭಾರತದ ಜಿಡಿಪಿ ಪ್ರಮಾಣ ಶೇ 6.7 ರಷ್ಟು ನಿರೀಕ್ಷಿಸಬಹುದು ಎಂದು ವರದಿಯಲ್ಲಿ ಪ್ರಕಟಿಸಿದೆ.

- **"ರುಮ ಚಟರ್ಜಿ" ನಿಧನ :** ಭಾರತ ತಂಡದ ಮಾಜಿ ಸೈಕ್ಲಿಸ್ಟ್ ಮತ್ತು ರಾಷ್ಟ್ರೀಯ ಸೈಕ್ಲಿಂಗ್ ತಂಡದ ಹಾಲಿ ಕೋಚ್ ರುಮಾ ಚಟರ್ಜಿ ಅವರು ನೋಯ್ಡಾ ಮತ್ತು ಗ್ರೇಟರ್ ನೋಯ್ಡಾ ಹೆದ್ದಾರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಕೊನೆಯುಸಿರೆಳೆದರು.

- **ಜಗನ್ನಾಥ ದೇವಾಲಯದಿಂದ FM:** ಭುವನೇಶ್ವರದ ಜಗತ್ ಪ್ರಸಿದ್ಧ "ಶ್ರೀ ಜಗನ್ನಾಥ ದೇವಾಲಯ"ದ ಆಡಳಿತ ಮಂಡಳಿ ತನ್ನದೇ ಆದ FM ಚಾನೆಲ್ ಬಿತ್ತರಿಸಲು ಸಿದ್ಧತೆ ನಡೆಸಿದೆ. ಈ ಉದ್ದೇಶಿತ ಯೋಜನೆಗೆ ಸುಮಾರು ರೂ 4 ಕೋಟಿ ತಗುಲಲಿದ್ದು, ಜಗನ್ನಾಥ ಸ್ವಾಮಿ ಕುರಿತಾದ ಮಾಹಿತಿಯನ್ನು ಬಿತ್ತರಿಸಲಾಗುವುದು.

- **ಜೂನ್ 17: ವಿಶ್ವ ಮರುಭೂಮೀಕರಣ ತಡೆ ದಿನ (World Day to Combat Desertification)":** ಪ್ರತಿ ವರ್ಷ ವಿಶ್ವ ಮರುಭೂಮೀಕರಣ ತಡೆ ದಿನವನ್ನು ಜೂನ್ 17 ರಂದು ಆಚರಿಸಲಾಗುತ್ತದೆ. "ಬರ ಮತ್ತು ನೀರಿನ ಕೊರತೆ"-ಇದು ಈ ವರ್ಷದ "ವಿಶ್ವ ಮರುಭೂಮೀಕರಣ ತಡೆ ದಿನ-2013" ರ ಥೀಮ್.

- **NALCO ದಿಂದ ಎರಡನೇ ಪವನ ವಿದ್ಯುತ್ ಘಟಕ:** ನಾಲ್ಕೊ (ನ್ಯಾಷನಲ್ ಅಲ್ಯೂಮಿನಿಯಂ ಕಂಪನಿ ಲಿಮಿಟೆಡ್) ತನ್ನ ಎರಡನೇ ಪವನ ವಿದ್ಯುತ್ ಘಟಕವನ್ನು ರಾಜಸ್ತಾನದ ಜೈಸಲ್ಮೇರ್ ಜಿಲ್ಲೆಯ ಲುದರ್ವದಲ್ಲಿ ಸ್ಥಾಪಿಸುವುದಾಗಿ ಹೇಳಿದೆ. 47.6 ಮೆಗಾವ್ಯಾಟ್ ಸಾಮರ್ಥ್ಯದ ಈ ಪವನ ವಿದ್ಯುತ್ ಘಟಕವನ್ನು ರೂ 283 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವುದು. ಹಸಿರು ಇಂಧನಕ್ಕೆ ಪ್ರಾಮುಖ್ಯತೆ ನೀಡುವ ಉದ್ದೇಶದಿಂದ ಈ ಮಹತ್ವದ ಯೋಜನೆಯನ್ನು ಕೈಗೊಂಡಿರುವುದಾಗಿ ನಾಲ್ಕೊ ತಿಳಿಸಿದೆ.

- **ಶನಿ ಗ್ರಹದಿಂದ ಭೂಮಿಯ ಫೋಟೊ ತೆಗೆಯಲಿರುವ ನಾಸಾ:** ನಾಸಾದ ಕ್ಯಾಸಿನಿ ಬಾಹ್ಯಕಾಶ ನೌಕೆಯು ಭೂಮಿಯ ಸ್ವಾಭಾವಿಕ ಬಣ್ಣದ ಫೋಟೊವನ್ನು ತೆಗೆಯಲಿರುವುದಾಗಿ ನಾಸಾ ತಿಳಿಸಿದೆ. 1.44 ಬಿಲಿಯನ್ ಕಿಲೋಮೀಟರ್ ದೂರದಿಂದ ತೆಗೆಯಲಿರುವ ಈ ಫೋಟೊದಲ್ಲಿ ಭೂಮಿಯು ಚಿಕ್ಕದಾದ ನೀಲಿ ಉಂಡೆಯಂತೆ ಕಾಣಲಿದ್ದು, ಶನಿ ಗ್ರಹದಿಂದ ತಮ್ಮ ಮನೆಗಳು ಹೇಗೆ ಕಾಣುತ್ತವೆ ಎಂಬುದನ್ನು ಜನರು ನೋಡಲು ಇದೊಂದು ಅದ್ಭುತ ಅವಕಾಶ ಎಂದು ನಾಸಾ ಹೇಳಿದೆ.

- **ರಾಜಸ್ತಾನ ಆಶಾ ಕಾರ್ಯಕರ್ತೆಯರಿಗೆ ಟ್ಯಾಬ್ಲೆಟ್ PC**: ಆಶಾ ಕಾರ್ಯಕರ್ತೆಯರಿಗೆ ಟ್ಯಾಬ್ಲೆಟ್ PC ನೀಡುವ ವಿನೂತನ ಯೋಜನೆಯೊಂದಕ್ಕೆ ರಾಜಸ್ತಾನ ಸರ್ಕಾರ ಚಾಲನೆ ನೀಡಿದೆ. ಈ ಮೂಲಕ ಆಶಾ ಕಾರ್ಯಕರ್ತೆಯರಿಗೆ ಇಂತಹ ಹೈ-ಟೆಕ್ ವ್ಯವಸ್ಥೆ ಕಲ್ಪಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ರಾಜಸ್ತಾನ ಪಾತ್ರವಾಗಿದೆ. ರಾಜಸ್ತಾನ ಆರೋಗ್ಯ ಇಲಾಖೆ ಮತ್ತು UNICEF "ಇ-ಆಶಾ" ಎಂಬ ಪ್ರಾತ್ಯಕ್ಷಿಕ ಯೋಜನೆಯಡಿ ಆಶಾ ಕಾರ್ಯಕರ್ತೆಯರಿಗೆ ಟ್ಯಾಬ್ಲೆಟ್ PC ಗಳನ್ನು ವಿತರಿಸುತ್ತಿದ್ದು, ರಾಜಸ್ತಾನದ ಗಡಿ ಜಿಲ್ಲೆ ಬರ್ಮರ್ ನ ಜಸೋಲ್ ಎಂಬ ಹಳ್ಳಿಯಲ್ಲಿ ಇದಕ್ಕೆ ಇತ್ತೀಚೆಗೆ ಚಾಲನೆ ನೀಡಲಾಯಿತು.

- **ಸಿಂಗಾಪುರ ಕಾಲೇಜಿನ ಮುಖ್ಯಸ್ಥರಾಗಿ ಭಾರತೀಯನ ಆಯ್ಕೆ:** ಸಿಂಗಾಪುರದ "ನನ್ಯಾಂಗ್ ತಾಂತ್ರಿಕ ವಿಶ್ವವಿದ್ಯಾಲಯದ ಬ್ಯುಸಿನಸ್ ಶಾಲೆಯ ಡೀನ್ ಆಗಿ ಭಾರತೀಯ ಮೂಲದ ರವಿಕುಮಾರ್ ಅವರು ನೇಮಕಗೊಂಡಿದ್ದಾರೆ. ಐಐಟಿ ಯಲ್ಲಿ ಮೆಕಾನಿಕಲ್ ಎಂಜನಿಯರಿಂಗ್ ನಲ್ಲಿ ಎಂಜನಿಯರಿಂಗ್ ಪದವಿ ಪಡೆದಿರುವ 61 ವರ್ಷ ವಯಸ್ಸಿನ ರವಿಕುಮಾರ್ ಅವರು ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಮಾರ್ಶಲ್ ಬ್ಯುಸಿನೆಸ್ ಶಾಲೆಯಲ್ಲಿ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು.

- **ಆಕ್ಸಫರ್ಡ್ ಡಿಕ್ಷನರಿಗೆ "ಟ್ವೀಟ್" ಪದ:** ಸಾಮಾಜಿಕ ಜಾಲ ತಾಣವಾಗಿ ಉಪಯೋಗವಾಗುವ ಟ್ವೀಟ್ ಪದ ಆಕ್ಸಫರ್ಡ್ ಡಿಕ್ಷನರಿಗೆ ಸೇರ್ಪಡೆಗೊಂಡಿದೆ. ಟ್ವೀಟ್ ಶಬ್ದವನ್ನು ನಾಮಪದ ಅಥವಾ ಕ್ರಿಯಾಪದವಾಗಿ ಬಳಕೆಯಾಗಿದ್ದು, ಸಾಮಾಜಿಕ ತಾಣಗಳಲ್ಲಿ ಬಳಸುವುದು ಎನ್ನುವ ಅರ್ಥ ನೀಡುತ್ತದೆ. ಈ ಹಿಂದೆ ಟ್ವೀಟ್ ಎನ್ನುವ ಪದ ಹಕ್ಕಿಯ ಕೂಗು ಎನ್ನುವ ಅರ್ಥ ನೀಡುತ್ತಿತ್ತು. ಆಕ್ಸಫರ್ಡ್ ಡಿಕ್ಷನರಿ ನಿಯಮದ ಪ್ರಕಾರ ಒಂದು ಪದ ಆಕ್ಸಫರ್ಡ್ ಡಿಕ್ಷನರಿ ಸೇರ್ಪಡೆಗೊಳ್ಳಬೇಕೆಂದರೆ 10 ವರ್ಷಗಳಿಂದ ಬಳಕೆಯಲ್ಲಿ ಇರಬೇಕು.

- **ಮೈಕಲ್ ಹ್ಯಾಸ್ಟಿಂಗ್ ನಿಧನ:** ಅನೇಕ ಪ್ರಶಸ್ತಿಗಳ ವಿಜೇತ, ನೇರ ಮತ್ತು ದಿಟ್ಟ ವರದಿಯಿಂದ ಪ್ರಸಿದ್ಧರಾಗಿದ್ದ "ಮೈಕಲ್ ಹ್ಯಾಸ್ಟಿಂಗ್" ಅವರು ಕಾರು ಅಪಘಾತದಿಂದ ನಿಧನರಾದರು. ಹ್ಯಾಸ್ಟಿಂಗ್ ಅವರು "ರೋಲಿಂಗ್ ಸ್ಟೋನ್" ಪತ್ರಿಕೆ ವರದಿಗಾರರಾಗಿದ್ದ ವೇಳೆ ಅಮೆರಿಕಾದ ಜನರಲ್ ಸ್ಟೇನ್ಲೆ ಮ್ಯಾಕ್ ಕ್ರಿಸ್ಟಲ್ ಅವರು ಒಬಾಮ ಆಡಳಿತದ ಬಗ್ಗೆ ವ್ಯಂಗ್ಯ ಮಾಡಿದ್ದನ್ನು ಪ್ರಕಟಿಸಿದ್ದರು. ಈ ವರದಿಯಿಂದ ಮ್ಯಾಕ್ ಕ್ರಿಸ್ಟಲ್ ಅವರನ್ನು ಒಬಾಮ ಹುದ್ದೆಯಿಂದ ಕೆಳಗಿಸಿದ್ದರು. ಇಂತಹ ದಿಟ್ಟ ವರದಿಗಾಗಿ ಹ್ಯಾಸ್ಟಿಂಗ್ ಅವರಿಗೆ 2010 ರ ಜಿಯೋರ್ಜ್ ಪೊಕ್ ಪ್ರಶಸ್ತಿಯನ್ನು ನೀಡಲಾಗಿತ್ತು. ಮೈಕಲ್ ವರದಿ ಮಾಡಿದ್ದ ಅನೇಕ ಸುದ್ದಿಗಳಲ್ಲಿ ಪತ್ರಿಕಾ ರಂಗದಲ್ಲಿ ಮಿಂಚುಗಳನ್ನು ಸೃಷ್ಟಿಸಿದ್ದವು.

- **ವಿ.ಕುರಿಯನ್ ಅಧಿಕಾರ ಸ್ವೀಕಾರ:** ರಾಜ್ಯ ಪ್ರಧಾನ ಮಹಾಲೇಖಪಾಲಕರಾಗಿ ವಿ.ಕುರಿಯನ್ ಅಧಿಕಾರ ವಹಿಸಿಕೊಂಡಿದ್ದಾರೆ. ಕುರಿಯನ್ ಅವರು ಈ ಹಿಂದೆ ನ್ಯಾಷನಲ್ ಅಕಾಡೆಮಿ ಆಫ್ ಆಡಿಟ್ ಅಂಡ್ ಅಕೌಂಟ್ಸ್ ನ ಮಹಾನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

- **ಪೆಪ್ಸಿಕೊ ಕಂಪನಿಗೆ "ಆನಂದ್ ಮನು" ರಾಜೀನಾಮೆ:** ಪಾನೀಯ ಮತ್ತು ಕುರುಚಲು ತಿಂಡಿ ದಿಗ್ಗಜ ಪೆಪ್ಸಿಕೊ ಸಂಸ್ಥೆಯ ಭಾರತ ವಲಯದ ಅಧ್ಯಕ್ಷ ಸ್ಥಾನಕ್ಕೆ "ಆನಂದ್ ಮನು" ಅವರು ರಾಜೀನಾಮೆ ನೀಡಿರುವುದಾಗಿ ಸಂಸ್ಥೆ ತಿಳಿಸಿದೆ. ಈ ಕ್ಷಣದಿಂದಲೇ ಆನಂದ್ ಅವರ ಸ್ಥಾನ ತೆರವಾಗಿದ್ದು, ಶೀಘ್ರದಲ್ಲೇ ಅವರ ಸ್ಥಾನಕ್ಕೆ ಸೂಕ್ತ ವ್ಯಕ್ತಿಯನ್ನು ತುಂಬುವುದಾಗಿ ಕಂಪನಿಯ ಮೂಲಗಳು ತಿಳಿಸಿವೆ. 1994 ರಲ್ಲಿ ಪೆಪ್ಸಿಕೊ ಕಂಪನಿಗೆ ಸೇರ್ಪಡೆಗೊಂಡ ಆನಂದ್ ಕಳೆದ 19 ವರ್ಷಗಳಿಂದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. 2011 ರಲ್ಲಿ ಆನಂದ್ ಅವರು ಕಂಪನಿಯ ಭಾರತದ ವಲಯಕ್ಕೆ ಅಧ್ಯಕ್ಷರಾಗಿ ನೇಮಿಸಲಾಗಿತ್ತು.

- **ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಪ್ರಕರಣಗಳು**: ಜಗತ್ತಿನ ಎಲ್ಲೆಡೆ ಮಹಿಳೆಯರ ಮೇಲೆ ದೌರ್ಜನ್ಯ ಪ್ರಕರಣಗಳು ಗಣನೀಯವಾಗಿ ಹೆಚ್ಚಳವಾಗುತ್ತಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ. ವಿಶ್ವದಾದ್ಯಂತ ಪ್ರತಿ ಮೂವರು ಮಹಿಳೆಯರಲ್ಲಿ ಒಬ್ಬರು ಶಾರೀರಿಕವಾಗಿ ಅಥವಾ ಲೈಂಗಿಕವಾಗಿ ಪುರುಷರಿಂದ ದೌರ್ಜನ್ಯಕ್ಕೆ ಒಳಗಾಗುತ್ತಿರುವುದಾಗಿ ವರದಿಯಲ್ಲಿ ಹೇಳಲಾಗಿದೆ. ಅಚ್ಚರಿಯೆಂದರೆ ಶೇ 40 ರಷ್ಟು ದೌರ್ಜನ್ಯ ಪ್ರಕರಣಗಳು ಕೊಲೆಯಿಂದ ಅಂತ್ಯ ಕಾಣುತ್ತಿವೆ ಎನ್ನಲಾಗಿದೆ.

- **"ಮೌಂಟ್ ಎಟ್ನಾ" ವಿಶ್ವ ಪಾರಂಪರಿಕ ತಾಣಕ್ಕೆ ಸೇರ್ಪಡೆ:** ವಿಶ್ವದ ಅತ್ಯಂತ ಕ್ರಿಯಾಶೀಲ ಜ್ವಾಲಾಮುಖಿಗಳಲ್ಲಿ ಒಂದಾದ "ಮೌಂಟ್ ಎಟ್ನಾ"ವನ್ನು ವಿಶ್ವ ಪಾರಂಪರಿಕ ತಾಣಕ್ಕೆ ಸೇರ್ಪಡೆಗೊಳಿಸಲಾಗಿದೆ. ಕಾಂಬೋಡಿಯಾದಲ್ಲಿ ನಡೆದ ಯುನೆಸ್ಕೊ ವಿಶ್ವ ಪಾರಂಪರಿಕ ತಾಣ ಸೇರ್ಪಡೆ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಮೌಂಟ್ ಎಟ್ನಾ ಯುರೋಪ್ ನಲ್ಲೇ ಅತ್ಯಂತ ಕ್ರಿಯಾಶೀಲ ಜ್ವಾಲಾಮುಖಿ.

- **ಜೂನ್ 23: ಅಂತರರಾಷ್ಟ್ರೀಯ ಒಲಂಪಿಕ್ ದಿನ:** ಜೂನ್ 23 ರಂದು ಅಂತರರಾಷ್ಟ್ರೀಯ ಒಲಂಪಿಕ್ ದಿನವೆಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಒಲಂಪಿಕ್ ದಿನವನ್ನು ಚಲಿಸು, ಅರಿವು ಮತ್ತು ಅನ್ವೇಷಿಸು ಎಂಬ ಮೂರು ಪ್ರಮುಖ ಮೂಲಾಂಶಗಳನ್ನು ಆಧಾರವಾಗಿಟ್ಟುಕೊಂಡು ಆಚರಿಸಲಾಗುತ್ತಿದೆ. ಇದರ ಮೂಲ ಉದ್ದೇಶ ಒಲಂಪಿಕ್ ಕುರಿತು ಜಾಗೃತಿ ಮೂಡಿಸುವುದು. 1894 ಜೂನ್ 23 ರಿಂದ ಒಲಂಪಿಕ್ ದಿನವನ್ನು ಆಚರಿಸಲಾಗುತ್ತಿದೆ.

- **ದೇಶದಲ್ಲಿ ಹೊಸದಾದ 133 ಪ್ರಾಣಿ ಪ್ರಬೇಧ ಪತ್ತೆ:** ಹೊಸ ಪ್ರಭೇದಗಳ ಅನ್ವೇಷಣೆ ಕುರಿತಾಗಿ "ಜಿಯೋಜಿಕಲ್ ಸೊಸೈಟಿ ಆಫ್ ಇಂಡಿಯಾ"ದ ಅನಿಮಲ್ ಡಿಸ್ಕವರಿ-2012 ಪುಸ್ತಕವನ್ನು ಇತ್ತೀಚೆಗೆ ಕೇಂದ್ರ ಪರಿಸರ ಮತ್ತು ಅರಣ್ಯ ಖಾತೆ ಸಚಿವೆ ಜಯಂತಿ ನಟರಾಜನ್ ಅವರು ಬಿಡುಗಡೆಗೊಳಿಸಿದರು. ಇದರಂತೆ ಭಾರತದಲ್ಲಿ 133 ಹೊಸದಾದ ಪ್ರಾಣಿ ಪ್ರಬೇಧಗಳನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಇವುಗಳಲ್ಲಿ ಒಂದು ಹೊಸ ಪ್ರಭೇದದ ಪಕ್ಷಿಯು ಸೇರಿದ್ದು, ಇನ್ನು ಹೆಸರಡಿದ ಈ ಪಕ್ಷಿಯನ್ನು ಗ್ರೇಟ್ ನಿಕೋಬರ್ ದ್ವೀಪ ಪ್ರದೇಶದಲ್ಲಿ ಪತ್ತೆಹಚ್ಚಲಾಗಿದೆ. ಜತೆಗೆ ಹೊಸ ಜಾತಿಯ ಮೃದ್ವಂಗಿ, ಮೀನು, ಸರಿಸೃಪಗಳು ಮತ್ತು ಕೀಟಗಳನ್ನು ಸಹ ಈ ಪ್ರಾಣಿ ಪ್ರಭೇದಗಳಲ್ಲಿ ಸೇರಿವೆ.

- **ಕೋಕೊ ಕೋಲಾ ಫೆಸಿಫಿಕ್ ಗ್ರೂಫ್ ಉಪಾಧ್ಯಕ್ಷರಾಗಿ "ಅತುಲ್ ಸಿಂಗ್":** ಕೋಕೊ ಕೋಲಾದ ಭಾರತ ಮತ್ತು ನೈರುತ್ಯ ಏಷ್ಯಾ ಮುಖ್ಯಸ್ಥ "ಅತುಲ್ ಸಿಂಗ್" ಅವರನ್ನು ಕಂಪನಿಯ ಫೆಸಿಫಿಕ್ ಗ್ರೂಪ್ ನ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಇದೇ ಜುಲೈ 1

ರಿಂದ ಅತುಲ್ ಸಿಂಗ್ ಅಧಿಕಾರವಹಿಸಿಕೊಳ್ಳಲಿದ್ದಾರೆ. ಏಪ್ಯಾ ಫೆಸಿಫಿಕ್ ನ 38 ರಾಷ್ಟ್ರಗಳ ಪೈಕಿ 10 ರಾಷ್ಟ್ರಗಳಲ್ಲಿ ಕಂಪನಿಯ ನಿರ್ವಹಣೆಯನ್ನು ಅತುಲ್ ನೋಡಿಕೊಳ್ಳಲಿದ್ದಾರೆ.

- **ಜೂನ್ 20: ವಿಶ್ವ ನಿರಾಶ್ರಿತರ ದಿನ (World Refugee Day):** ವಿಶ್ವ ನಿರಾಶ್ರಿತರ ದಿನವನ್ನು ಜೂನ್ 20 ರಂದು ಆಚರಿಸಲಾಗುತ್ತಿದೆ. ವಿಶ್ವಸಂಸ್ಥೆ ಸಾಮಾನ್ಯ ಸಭೆ 2000 ರಲ್ಲಿ ಕೈಗೊಂಡ ನಿರ್ಣಯದಂತೆ 2001 ರಿಂದ ನಿರಾಶ್ರಿತರ ದಿನದ ಆಚರಣೆಯನ್ನು ವಿಶ್ವದಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ. ಯುದ್ದ, ಸಂಘರ್ಷ, ಆಂತರಿಕ ಗಲಭೆ ಮತ್ತು ಹಿಂಸೆಯಿಂದ ನಿರಾಶ್ರಿತರಾಗಿರುವವರತ್ತ ಸಾರ್ವಜನಿಕರ ಗಮನ ಸೆಳೆಯುವುದು ಈ ದಿನದ ಮುಖ್ಯ ಉದ್ದೇಶ.

- **ಪತ್ರಿಕಾ ಜಾಹೀರಾತು ದರ ಪರಿಶೀಲನೆಗೆ ಸಮಿತಿ**: ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವ ಜಾಹೀರಾತುಗಳ ದರವನ್ನು ಪರಿಶೀಲಿಸುವ ಉದ್ದೇಶದಿಂದ ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವಾಲಯ ಜೆ.ಎಸ್.ಮಾಥುರ್ ನೇತೃತ್ವದ ಸಮಿತಿಯೊಂದನ್ನು ರಚಿಸಿದೆ. ಕೇವಲ ಜಾಹೀರಾತು ದರವಲ್ಲದೇ ಜಾಹೀರಾತನ್ನು ಯಾವ ಮಾನದಂಡಗಳ ಆಧಾರದ ಮೇಲೆ ಪ್ರಕಟಿಸಲಾಗುತ್ತಿದೆ ಎಂಬುದನ್ನು ಸಮಿತಿ ಪರಿಶೀಲಿಸಲಿದೆ. ಮಾಥುರ್ ಅವರು ಕೇಂದ್ರ ಮಾಹಿತಿ ಮತ್ತು ಪ್ರಸರಣ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದಾರೆ.

- **ಜೂನ್ 21: ವಿಶ್ವ ಸಂಗೀತ ದಿನ:** ವಿಶ್ವ ಸಂಗೀತ ದಿನವನ್ನು ಜೂನ್ 21 ರಂದು ವಿಶ್ವದೆಲ್ಲೆಡೆ ಆಚರಿಸಲಾಗುತ್ತದೆ. ಸಂಗೀತದ ಮೂಲಕ ಶಾಂತಿಯನ್ನು ಸಾರುವುದು ಇದರ ಉದ್ದೇಶ. 1982 ರಲ್ಲಿ ಪ್ಯಾರಿಸ್ ನಲ್ಲಿ ಪ್ರಥಮ ಬಾರಿಗೆ ವಿಶ್ವ ಸಂಗೀತ ದಿನವನ್ನು ಆಚರಿಸಲಾಯಿತು.

- **ಮಲೇಷಿಯಾದಲ್ಲಿ ತುರ್ತು ಪರಿಸ್ಥಿತಿ ಘೋಷಣೆ:** ಮಲೇಷಿಯಾದಲ್ಲಿ ವಾಯು ಮಾಲಿನ್ಯ ವಿಕೋಪಕ್ಕೆ ತಿರುಗಿರುವ ಹಿನ್ನಲೆಯಲ್ಲಿ ಮಲೇಷಿಯಾದ ಪ್ರಧಾನಿ ನಜೀಬ್ ರಝಾಕ್ ಮಲೇಷಿಯಾದ ದಕ್ಷಿಣ ರಾಜ್ಯ ಜೊಹೊರ್ ನ ಮೌರ್ ಮತ್ತು ಲೆಡಂಗ್ ನಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ. ಇಂಡೋನೇಷಿಯಾದ ಸುಮಾತ್ರ ದ್ವೀಪ ಪ್ರದೇಶದಲ್ಲಿ ತಾಳೆ ಎಣ್ಣೆ ಬೆಳೆಸುವ ಸಲುವಾಗಿ ಜಾಗವನ್ನು ತೆರೆವುಗೊಳಿಸಲು ಅಕ್ರಮವಾಗಿ ಅರಣ್ಯಕ್ಕೆ ಬೆಂಕಿ ಇಟ್ಟಿರುವುದರಿಂದ ಉಂಟಾದ ದಟ್ಟ ಹೊಗೆ ಮಲೇಷಿಯಾ ಮತ್ತು ಸಿಂಗಾಪುರದಲ್ಲಿ ಆವರಿಸಿಕೊಂಡಿರುವುದು ವಾಯು ಮಾಲಿನ್ಯಕ್ಕೆ ಎಡೆಮಾಡಿಕೊಟ್ಟಿದೆ. ಮಲೇಷಿಯಾದಲ್ಲಿ ವಾಯು ಮಾಲಿನ್ಯ ಸೂಚ್ಯಂಕ 750 ಕ್ಕೆ ಏರಿರುವುದು ಜನತೆಯಲ್ಲಿ ಭೀತಿಯನ್ನು ಹುಟ್ಟುಹಾಕಿದೆ.

- **ವಿಶ್ವದ ಅತ್ಯಂತ ವೇಗದ "ಎಲೆಕ್ಟ್ರಿಕ್ ರೇಸ್" ಕಾರು ಅನಾವರಣ:** ವಿದ್ಯುತ್ ಶಕ್ತಿ ಮೂಲಕ ಚಲಿಸುವ ವಿಶ್ವದ ಅತ್ಯಂತ ವೇಗದ ರೇಸಿಂಗ್ ಕಾರನ್ನು "ನಿಸಾನ್" ಕಂಪನಿ ಇತ್ತೀಚೆಗೆ ಅನಾವರಣಗೊಳಿಸಿತು. ZEOD RC (Zero Emission on Demand Racing Car) ಹೆಸರಿನ ಈ ಕಾರು ಗಂಟೆಗೆ 300 ಕಿ.ಮೀ ವೇಗದಲ್ಲಿ ಚಲಿಸಲಿದೆ. ಲಿಥೀಯಂ ಬ್ಯಾಟರಿ ತಂತ್ರಜ್ಞಾನದಿಂದ ಈ ಕಾರು ಚಲಿಸಲಿದೆ ಎಂದು ಸಂಸ್ಥೆ ತಿಳಿಸಿದೆ.

- **ಕುಣಿಗಲ್ ನಾಗಭೂಷಣ್ ನಿಧನ:** ಕನ್ನಡ ಚಿತ್ರರಂಗದ ಬಹುಮುಖ ಪ್ರತಿಭೆ ಕುಣಿಗಲ್ ನಾಗಭೂಷಣ್ ಅವರು ಹೃದಯಘಾತದಿಂದ ನಿಧನರಾದರು. ಆಶೀರ್ವಾದ, ಬಾಳು ಎಂಬ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದ ನಾಗಭೂಷಣ್ ಅವರು 250 ಕ್ಕೂ ಹೆಚ್ಚು ಚಿತ್ರಗಳಿಗೆ ಸಂಭಾಷಣೆ ಬರೆದಿದ್ದಾರೆ. 500 ಕ್ಕೂ ಅಧಿಕ ಚಿತ್ರಗಳಲ್ಲಿ ನಟಿಸಿದ್ದಾರೆ. ಹಾಸ್ಯ ಚಿತ್ರಗಳಲ್ಲಿ ಹೆಚ್ಚಾಗಿ ನಟಿಸಿದ್ದ ಅವರು ಅಪಾರ ಜನಮನ್ನಣೆ ಗಳಿಸಿದ್ದರು.

- **ಆಸ್ಟ್ರೇಲಿಯಾ ಕ್ರಿಕೆಟ್ ಕೋಚ್ ಆಗಿ "ಡ್ಯಾರೆನ್ ಲೆಹ್ಮನ್ (Darren Lehmann)":** ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಕೋಚ್ ಆಗಿ ಡ್ಯಾರೆನ್ ಲೆಹ್ಮನ್ ಅವರನ್ನು ನೇಮಿಸಲಾಗಿದೆ. ಇತ್ತೀಚೆಗೆ ತೀವ್ರ ಟೀಕೆಗೆ ಒಳಗಾಗಿ ಕೋಚ್ ಹುದ್ದೆಯಿಂದ ನಿರ್ಗಮಿಸಿದ್ದ ದಕ್ಷಿಣಾ ಆಫ್ರಿಕಾದ ಮೈಕೆ ಆರ್ಥರ್ ಸ್ಥಾನವನ್ನು ಲೆಹ್ಮನ್ ತುಂಬಲಿದ್ದಾರೆ.

- **ಪ್ಯಾಲೇಸ್ತೇನ್ ಪ್ರಧಾನಿ ರಾಜೀನಾಮೆ:** ಅಧಿಕಾರ ವಹಿಸಿಕೊಂಡ ಎರಡು ವಾರದಲ್ಲೇ ಪ್ಯಾಲೇಸ್ತೇನಿನ ಪ್ರಧಾನಿ "ರಮಿ ಹಮ್ದಲ್ಲಾ" ರಾಜೀನಾಮೆ ನೀಡಿದ್ದಾರೆ. ಪ್ಯಾಲೇಸ್ತೇನಿನ ಅಧ್ಯಕ್ಷ ಮಹಮ್ಮದ್ ಅಬ್ಬಾಸ್ ಅವರು ರಾಜೀನಾಮೆಯನ್ನು ಅಂಗೀಕರಿಸಿರುವುದಾಗಿ ಅಧಿಕೃತ ಮೂಲಗಳು ಹೇಳಿವೆ. ಮುಂದಿನ ಪ್ರಧಾನಿ ಆಯ್ಕೆಯಾಗುವವರೆಗೂ ರಮಿ ಅವರು ಹಂಗಾಮಿ ಪ್ರಧಾನಿಯಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿದೆ.

- **ರವಿಚಂದ್ರನ್ ಮತ್ತು ಶೃತಿಗೆ NTR ಪ್ರಶಸ್ತಿ:** 2012-13 ನೇ ಸಾಲಿನ NTR ಪ್ರಶಸ್ತಿಗೆ ನಟ ರವಿಚಂದ್ರನ್, ನಟಿ ಶೃತಿ ಅವರು ಆಯ್ಕೆಯಾಗಿದ್ದಾರೆ. ಸಿನಿಮಾ, ಸಾಹಿತ್ಯ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಕರ್ನಾಟಕ ತೆಲುಗು ಅಕಾಡೆಮೆ ವತಿಯಿಂದ ಪ್ರತಿವರ್ಷ NTR ಪ್ರಶಸ್ತಿ ನೀಡಲಾಗುತ್ತದೆ. ಕಳೆದ ಸಾಲಿನಲ್ಲಿ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಹಾಗೂ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅವರಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಲಭಿಸಿತ್ತು. ಇದಕ್ಕೂ ಮುನ್ನ ನಟಿ ಉಮಾಶ್ರೀ ಮತ್ತು ರಂಗಭೂಮಿ ನಟ ಮಾಸ್ಟರ್ ಹಿರಣ್ಣಯ್ಯ ಅವರಿಗೆ ನೀಡಲಾಗಿತ್ತು.

- **ಡಿಕಿ ರಟ್ನಗರ್ (Dicky Rutnagur) ನಿಧನ:** ಪ್ರಖ್ಯಾತ ಕ್ರಿಕೆಟ್ ಬರಹಗಾರ ಮತ್ತು ರೇಡಿಯೋ ನಿರೂಪಕ ಡಿಕಿ ರಟ್ನಗರ್ ಅವರು ಲಂಡನ್ ನಲ್ಲಿ ನಿಧನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಡಿಕಿ ಅವರು "ಇಂಡಿಯನ್ ಕ್ರಿಕೆಟ್-ಫೀಲ್ಡ್ ಅನ್ಯುಲ್" ನ ಸಂಪಾದಕರಾಗಿ ಎಂಟು ವರ್ಷಗಳ ಸೇವೆ ಸಲ್ಲಿಸಿದ್ದರು. "ಟೆಸ್ಟ್ ಕಾಮೆಂಟರಿ (ಇಂಡಿಯಾ v/s ಇಂಗ್ಲೆಂಡ್ 1976-77)" ಮತ್ತು "ಖಾನ್ಸ್ ಅನ್ ಲಿಮಿಟೆಡ್" ಡಿಕಿ ಬರೆದಿದ್ದ ಎರಡು ಪುಸ್ತಕಗಳು.

- **ಬೆರ್ಲುಸ್ಕೋನಿಗೆ 7 ವರ್ಷ ಜೈಲು**: ಅಪ್ರಾಪ್ತ ವಯಸ್ಸಿನವರೊಂದಿಗೆ ಹಾಗೂ ವೇಶ್ಯೆಯರೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿಸಿಕೊಂಡು ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದ ಇಟಲಿಯ ಮಾಜಿ ಪ್ರಧಾನಿ ಸಿಲ್ವಿಯೋ ಬೆರ್ಲುಸ್ಕೋನಿಗೆ ಸ್ಥಳೀಯ ನ್ಯಾಯಾಲಯ 7 ವರ್ಷ ಜೈಲು ಶಿಕ್ಷೆ ವಿಧಿಸಿದೆ.

- **ಭಾರತೀಯರಿಗೆ ವೀಸಾ ಶುಲ್ಕ ಹೊರೆ**: ಬ್ರಿಟನ್ ಗೆ ತೆರಳುವ ಭಾರತೀಯರಿಗೆ ಆಘಾತದ ಸುದ್ದಿಯೊಂದು ಕಾದಿದೆ. ನವೆಂಬರ್ 2013 ರಿಂದ ಬ್ರಿಟನ್ ಗೆ ತೆರಳುವ ಭಾರತೀಯರು 6 ತಿಂಗಳ ಭೇಟಿ ವೀಸಾಗೆ 2.76 ಲಕ್ಷ ಶುಲ್ಕ ಪಾವತಿಸಬೇಕು ಎಂಬ ನಿಯವನ್ನು

ಬ್ರಿಟನ್ ಸರ್ಕಾರ ಜಾರಿಗೆ ತಂದಿದೆ. ಈ ಹೊಸ ನಿಯಮವು ಭಾರತ, ಪಾಕ್, ನೈಜೀರಿಯಾ ಸೇರಿದಂತೆ ಕನಿಷ್ಠ ಆರು ರಾಷ್ಟ್ರಗಳಿಗೆ ಅನ್ವಯವಾಗಲಿದೆ. ಒಂದು ವೇಳೆ ಬ್ರಿಟನ್ ಗೆ ತೆರಳಿದವರು ಅವಧಿ ಮುಕ್ತಾಯದೊಳಗೆ ಸ್ವದೇಶಕ್ಕೆ ತೆರಳದಿದ್ದರೆ ಈ ಹಣ ಸರ್ಕಾರದ ಪಾಲಾಗಲಿದೆ. ಅವಧಿಗಿಂತ ಹೆಚ್ಚಿನ ದಿನಗಳ ಕಾಲ ಉಳಿದುಕೊಂಡು ಸಾರ್ವಜನಿಕ ಸೌಲಭ್ಯವನ್ನು ಪಡೆದುಕೊಳ್ಳುವ ವಲಸೆಗಾರರಿಗೆ ಕಡಿವಾಣ ಹಾಕಲು ಬ್ರಿಟನ್ ಈ ಕ್ರಮ ಕೈಗೊಂಡಿದೆ.

- **ಜೂನ್ 23: "ವಿಶ್ವಸಂಸ್ಥೆ ಸಾರ್ವಜನಿಕ ಸೇವಾ ದಿನ (UN Public Service Day)"**: ವಿಶ್ವಸಂಸ್ಥೆಯ ಸಾಮಾನ್ಯ ಸಭೆ ನಿರ್ಣಯದಂತೆ ಜೂನ್ 23 ರಂದು ವಿಶ್ವಸಂಸ್ಥೆ ಸಾರ್ವಜನಿಕ ಸೇವಾ ದಿನವನ್ನಾಗಿ ಆಚರಿಸಲಾಗುತ್ತದೆ. ಸಮುದಾಯದ ಅಭಿವೃದ್ಧಿಗೆ ಸಾರ್ವಜನಿಕ ಸೇವೆಯ ಮಹತ್ವವನ್ನು ತಿಳಿಸುವುದು ಇದರ ಹಿಂದಿನ ಪ್ರಮುಖ ಉದ್ದೇಶ. "Transformative e-Government and Innovation: Creating a Better Future ಇದು ಈ ವರ್ಷದ ಥೀಮ್.

- **ಉಮ್ಮನ್ ಚಾಂಡಿಗೆ ವಿಶ್ವಸಂಸ್ಥೆ ಪ್ರಶಸ್ತಿ:** ಕೇರಳದ ಮುಖ್ಯಮಂತ್ರಿ ಉಮ್ಮನ್ ಚಾಂಡಿ ಅವರನ್ನು ವಿಶ್ವಸಂಸ್ಥೆಯ ಜಾಗತಿಕ ಸಾರ್ವಜನಿಕ ಸೇವಾ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಬಹರೇನ್ ನಲ್ಲಿ ಜೂನ್ 24 ರಿಂದ 27 ರವರೆಗೆ ನಡೆಯಲಿರುವ ಸಮಾರಂಭದಲ್ಲಿ ವಿಶ್ವ ಸಂಸ್ಥೆಯ ಕಾರ್ಯದರ್ಶಿ ಬಾನ್ ಕಿ ಮೂನ್ ಅವರು ನೀಡಲಿದ್ದಾರೆ. ಸಾರ್ವಜನಿಕ ಸೇವೆಗೆ ಚಾಂಡಿ ನೀಡಿರುವ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ವಿಶ್ವಸಂಸ್ಥೆಯ ಸಾರ್ವಜನಿಕ ಸೇವಾ ದಿನ (ಜೂನ್ 23)ದ ಅಂಗವಾಗಿ ಈ ಪ್ರಶಸ್ತಿಯನ್ನು 2003 ರಿಂದ ಕೊಡಲಾಗುತ್ತಿದೆ.

- **ರಾಜ್ಯದ ಯೋಜನಾ ಗಾತ್ರ 47 ಸಾವಿರ ಕೋಟಿ:** ಕೇಂದ್ರ ಯೋಜನಾ ಆಯೋಗವೂ ಕರ್ನಾಟಕದ 2013-14 ನೇ ಸಾಲಿನ 47 ಸಾವಿರ ಕೋಟಿ ಯೋಜನಾ ಗಾತ್ರಕ್ಕೆ ಒಪ್ಪಿಗೆ ನೀಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 11.8 ರಷ್ಟು ಯೋಜನಾ ಗಾತ್ರ ಏರಿಕೆಯಾಗಿದೆ.

- **ಬಹುಬ್ರಾಂಡ್ ನಲ್ಲಿ ಶೇ 51 ರಷ್ಟು FDI ಗೆ ರಾಜ್ಯ ಒಪ್ಪಿಗೆ:** ಬಹುಬ್ರಾಂಡ್ ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ಶೇ 51 ರಷ್ಟು ವಿದೇಶಿ ನೇರ ಹೂಡಿಕೆಗೆ ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿದೆ. ಈ ಮೂಲಕ ಬಹುಬ್ರಾಂಡ್ ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿದ 11 ರಾಜ್ಯಗಳ ಪಟ್ಟಿಗೆ ಕರ್ನಾಟಕ ಸೇರ್ಪಡೆಗೊಂಡಿದೆ. ಈ ಹಿಂದೆ ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಸೇರಿದಂತೆ 11 ರಾಷ್ಟ್ರಗಳು ಒಪ್ಪಿಗೆ ನೀಡಿದ್ದವು.

- **ಅಂಪೈರ್ ಗಳ ಎಲೈಟ್ ಸಮಿತಿಯಿಂದ "ರವೂಫ್" ಔಟ್**: ಐಪಿಎಲ್ ಸ್ಪಾಟ್ ಫಿಕ್ಸಿಂಗ್ ಹಗರಣದಲ್ಲಿ ಭಾಗಿಯಾಗಿರುವ ಆರೋಪ ಹೊತ್ತಿರುವ ಪಾಕಿಸ್ತಾನದ ಅಂಪೈರ್ "ಅಸಾದ್ ರವೂಫ್" ಅವರನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ ಅಂಪೈರ್ ಗಳ ಎಲೈಟ್ ಸಮಿತಿಯಂದ ಹೊರಗಿಟ್ಟಿದೆ. ಇದೇ ವೇಳೆ ನ್ಯೂಜಿಲ್ಯಾಂಡ್ ನ ಬಿಲಿ ಬೌಡನ್ ಅವರನ್ನು ಸಹ ಕೈಬಿಡಲಾಗಿದೆ. ಈ ಸ್ಥಾನಗಳಿಗೆ ಮಾಜಿ ಕ್ರಿಕೆಟಿಗರಾದ ಇಂಗ್ಲೆಂಡ್ ನ ರಿಚರ್ಡ್ ಕೇಥಿ ಇಲ್ಲಿಂಗ್ ವರ್ಥ್ ಮತ್ತು ಆಸ್ಟ್ರೇಲಿಯಾದ ಪಾಲ್ ರಿಫೆಲ್ ಅವರನ್ನು ಆಯ್ಕೆಮಾಡಲಾಗಿದೆ.

- **ಸುರಕ್ಷಿತವಾಗಿ ಧರೆಗಿಳಿದ ಚೀನಾ ಬಾಹ್ಯಕಾಶಯಾನಿಗಳು**: ಚೀನಾದ ಮೂವರು ಗಗನಯಾತ್ರಿಗಳು 15 ದಿನಗಳ ಬಾಹ್ಯಾಕಾಶ ಪ್ರವಾಸವನ್ನು ಯಶಸ್ವಿಯಾಗಿ ಮುಗಿಸಿ ಸುರಕ್ಷಿತವಾಗಿ ಧರೆಗಿಳಿದರು. ಚೀನಾದ ಬಾಹ್ಯಾಕಾಶ ಇತಿಹಾಸದಲ್ಲಿ ಇದೊಂದು ಹೊಸ ಮೈಲಿಗಲ್ಲು. ಗಗನಯಾತ್ರಿಗಳನ್ನು ಹೊತ್ತು ಸಾಗಿದ್ದ ಶೆನ್ ಝೋವ್-10 ಬಾಹ್ಯಾಕಾಶ ನೌಕೆ ಗೋಬಿ ಮರುಭೂಮಿಯಲ್ಲಿ ಸುರಕ್ಷಿತವಾಗಿ ಇಳಿಯುವ ಮೂಲಕ ಮಹತ್ವದ ಸಂಭ್ರಮಕ್ಕೆ ಸಾಕ್ಷಿಯಾಯಿತು.

- **ಸಾಹಸಿ ನಿಕ್ ವೆಲೆಂಡಾ:** ಅಮೆರಿಕಾದ ಸಾಹಸಿ ನಿಕ್ ವೆಲೆಂಡಾ ಅವರು ಕೇವಲ 23 ನಿಮಿಷಗಳಲ್ಲಿ 426 ಮೀಟರ್ ಆಳದ ಕಡಿದಾದ ಕಾಲುವೆಯನ್ನು ಹಗ್ಗದ ಮೂಲಕ ದಾಟಿ ಸಾಹಸ ಮೆರಿದಿದ್ದಾರೆ. ಪೂರ್ವ ಅರಿಜೋನಾದ ಕೊಲೆರಾಡೊ ನದಿ ಕಣಿವೆಯ ಮೇಲೆ ಅವರು ಈ ಸಾಹಸಗೈದಿದ್ದಾರೆ.

- **ಅಮೃತಾ ಸಿಂಗ್ ಪ್ರಶಸ್ತಿ:** ಪ್ರಧಾನ ಮಂತ್ರಿಯ ಅವರ ಕೊನೆಯ ಪುತ್ರಿ ಅಮೃತಾ ಸಿಂಗ್ ಅವರಿಗೆ ಮಾನವ ಹಕ್ಕುಗಳ ಕಾನೂನು ಕ್ಷೇತ್ರದಲ್ಲಿ ಸಲ್ಲಿಸಿದ್ದ ಸೇವೆಗಾಗಿ ಅಮೆರಿಕಾದ "ಇಂಡಿಯಾ ಅಬ್ರಾಡ್ ಫಾರ್ ಪಬ್ಲಿಕೇಷನ್" ವತಿಯಿಂದ ನೀಡಲಾಗುವ "ವಿಶೇಷ ಸಾಧನೆ ಪ್ರಶಸ್ತಿ (Special Award for Excellence 2012)" ನೀಡಿ ಗೌರವಿಸಲಾಗಿದೆ. ಅಮೃತಾ ಸಿಂಗ್ ಅವರು ನ್ಯೂಯಾರ್ಕ್ ಮೂಲದ "ಓಪನ್ ಸೊಸೈಟಿ ಜಸ್ಟಿಸ್ ಇನಿಷಿಯೇಟಿವ್" ನಲ್ಲಿ ರಾಷ್ಟ್ರೀಯ ಭದ್ರತೆ, ಭಯೋತ್ಪಾದನೆ ನಿಗ್ರಹದ ಹಿರಿಯ ಕಾನೂನು ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

- **"ತ್ಸಾಕಿಯಾ ಎಲ್ಬೆದೋರ್ಗ್ (Tsakia Elbedorg)" ಮಂಗೋಲಿಯಾ ಅಧ್ಯಕ್ಷರಾಗಿ ಎರಡನೇ ಬಾರಿ ಆಯ್ಕೆ:** ಮಂಗೋಲಿಯಾದ ಅಧ್ಯಕ್ಷ "ತ್ಸಾಕಿಯಾ ಎಲ್ಬೆದೋರ್ಗ್" ಅವರು ಎರಡನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎಲ್ಬೆದೋರ್ಗ್ ತಮ್ಮ ಪ್ರತಿಸ್ಪರ್ಧಿಗಳಾದ ಮಂಗೋಲಿಯಾ ಪೀಪಲ್ ಪಾರ್ಟಿಯ "ಬತೆರ್ದಿನ್ ಬದ್ಮನ್ ಯಂಬು" ಹಾಗೂ ಮಂಗೋಲಿಯಾದ ಪೀಪಲ್ ರೆವಲ್ಯೂಷನರಿ ಪಕ್ಷದ ಉದ್ವಲ್ ನತ್ಸಂಗ್ ಅವರ ವಿರುದ್ಧ ಗೆಲುವು ಸಾಧಿಸುವ ಮೂಲಕ ಮತ್ತೆ ನಾಲ್ಕು ವರ್ಷಗಳ ಅವಧಿಗೆ ಆಯ್ಕೆಯಾದರು.

- **"ಐ ಆಮ್ ಲಿಜೆಂಡ್" ಖ್ಯಾತಿಯ ಲೇಖಕ ರಿಚರ್ಡ್ ಮಥೆಸನ್ ನಿಧನ:** ವೈಜ್ಞಾನಿಕ ಕಾದಂಬರಿ ಮತ್ತು ಕಾಲ್ಪನಿಕ ಕಥೆಗಳ ಪ್ರಸಿದ್ದ ಲೇಖಕ "ರಿಚರ್ಡ್ ಮಥೆಸನ್" ಅವರು ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. "ಹೆಲ್ ಹೌಸ್", "ವಾಟ್ ಡ್ರೀಮ್ಸ್ ಮೆ ಕಮ್", "ಐ ಆಮ್ ಲಿಜೆಂಡ್" ಮತ್ತು "ಶ್ರಿಕಿಂಗ್ ಮೆನ್" ಅವರ ಪ್ರಸಿದ್ಧ ಕಾದಂಬರಿಗಳು. ಅವರ ಪ್ರಸಿದ್ದ ಐ ಆಮ್ ಲಿಜೆಂಡ್ ಕಾದಂಬರಿ ಸಿನಿಮಾ ಆಗಿ ನಿರ್ಮಾಣಗೊಂಡಿದೆ.

- **ನ್ಯಾನೋ ಕಾರು ಗಿನ್ನಿಸ್ ದಾಖಲೆ:** ಟಾಟಾ ಮೋಟಾರ್ಸ್ ನ ಸಣ್ಣ ಕಾರು "ನ್ಯಾನೋ" ದೇಶದಾದ್ಯಂತ ಧೀರ್ಘಕಾಲದ ಪ್ರಯಾಣ ಬೆಳೆಸಿ ಗಿನ್ನಿಸ್ ದಾಖಲೆ ಸೇರ್ಪಡೆಗೊಂಡಿದೆ. ಸಂಸ್ಥೆ ಹೇಳುವಂತೆ ನ್ಯಾನೊ ಕಾರು 10 ದಿನಗಳಲ್ಲಿ ಸುಮಾರು 10,218 ಕಿ.ಮೀ ಗಳನ್ನು ದೇಶದಾದ್ಯಂತ ಕ್ರಮಿಸಿದೆ. ಕನ್ಯಾಕುಮಾರಿಯಿಂದ ಆರಂಭಗೊಂಡ ಪ್ರಯಾಣ ದೇಶವನ್ನು ಸುತ್ತುವರಿದು ಬೆಂಗಳೂರಿನಲ್ಲಿ ಕೊನೆಗೊಳ್ಳುವ ಮೂಲಕ ದಾಖಲೆಯನ್ನು ಸೃಷ್ಟಿಸಿದೆ. ಇದುವರೆಗೂ 8,046 ಕಿ.ಮೀ ಧೀರ್ಘಕಾಲದ ಪ್ರಯಾಣ ಗಿನ್ನಿಸ್ ನಲ್ಲಿ ದಾಖಲಾಗಿತ್ತು.

- **ವಾಲ್ ಮಾರ್ಟ್ ಸಂಸ್ಥೆಯ ಭಾರತದ ಮುಖ್ಯಸ್ಥ ರಾಜ್ ಜೈನ್ ರಾಜೀನಾಮೆ:** ಅಮೆರಿಕಾ ಮೂಲದ ವಾಲ್ ಮಾರ್ಟ್ ಸಂಸ್ಥೆಯ ಭಾರತ ವಿಭಾಗದ ಮುಖ್ಯಸ್ಥ ರಾಜ್ ಜೈನ್ ಅವರು ರಾಜೀನಾಮೆ ನೀಡಿರುವುದಾಗಿ ಸಂಸ್ಥೆ ತಿಳಿಸಿದೆ. ರಾಜ್ ಜೈನ್ ಅವರ ಜಾಗಕ್ಕೆ ರಮ್ನಿಕ್ ನರ್ಸೆ ಅವರನ್ನು ಹಂಗಾಮಿ ಮುಖ್ಯಸ್ಥರಾಗಿ ನೇಮಕ ಮಾಡಲಾಗಿದೆ. ಜೈನ್ ಅವರು ಸುಮಾರು ಆರು ವರ್ಷಗಳ ಕಾಲ ಸಂಸ್ಥೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು.

- **ಇಸ್ರೋದ ಮಂಗಳಯಾನಕ್ಕೆ ನಾಸಾ ಸಹಾಯ:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ದ ಬಹು ನಿರೀಕ್ಷಿತ ಮಂಗಳಯಾನಕ್ಕೆ ನಾಸಾ ತಾಂತ್ರಿಕ ನೆರವು ನೀಡಲಿರುವುದಾಗಿ ಇಸ್ರೋ ಹೇಳಿದೆ. ಅಕ್ಟೋಬರ್, 2013 ರಲ್ಲಿ ಮಂಗಳಯಾನವನ್ನು ಕೈಗೊಳ್ಳಲು ಇಸ್ರೋ ಉದ್ದೇಶಿಸಿದ್ದು, ನಾಸಾ ನ್ಯಾವಿಗೇಷನ್ ಮತ್ತು ಟ್ರಾಕಿಂಗ್ ತಾಂತ್ರಿಕ ವ್ಯವಸ್ಥೆಯನ್ನು ಒದಗಿಸಲಿದೆ.

- **ನವೀಕರಿಸಬಹುದಾದ ಇಂಧನ ಸೂಚ್ಯಂಕದಲ್ಲಿ ಕುಸಿತ ಕಂಡ ಭಾರತ:** ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವ ಸೂಚ್ಯಂಕದಲ್ಲಿ ಭಾರತ ಕುಸಿತ ಕಂಡಿದೆ. ಅರ್ನಸ್ಟ್ ಅಂಡ್ ಯಂಗ್ (Earnt and Young) ಕಂಪನಿ ನಡೆಸಿರುವ ಸಮೀಕ್ಷೆಯಲ್ಲಿ "ನವೀಕರಿಸಬಹುದಾದ ಇಂಧನ ಸೂಚ್ಯಂಕದಲ್ಲಿ ಭಾರತ 4 ನೇ ಸ್ಥಾನದಿಂದ 8 ನೇ ಸ್ಥಾನಕ್ಕೆ ಇಳಿದಿದೆ. ವಿದೇಶಿ ಹೂಡಿಕೆದಾರರಿಗೆ ವಿಧಿಸಲಾಗಿರುವ ಕೆಲವು ಕಠಿಣ ಮಾರ್ಪಾಟುಗಳಿಂದ ಭಾರತ ಸೂಚ್ಯಂಕದಲ್ಲಿ ಕುಸಿತ ಕಾಣಲು ಪ್ರಮುಖ ಕಾರಣ.

- **ಭಾರತಿ ಏರ್ ಟೆಲ್ ಗೆ ರೂ 650 ಕೋಟಿ ದಂಡ:** ಕರೆ ನಿಯಮ ಉಲ್ಲಂಘನೆ ಪ್ರಕರಣದಲ್ಲಿ ಭಾರತಿ ಏರ್ ಟೆಲ್ ದೂರಸಂಪರ್ಕ ಕಂಪನಿಗೆ ರೂ 650 ಕೋಟಿ ದಂಡವನ್ನು ವಿಧಿಸಲು ದೂರಸಂಪರ್ಕ ಸಚಿವಾಲಯ ಒಪ್ಪಿದೆ. 2003 ಮತ್ತು 2005 ರಲ್ಲಿ ಭಾರ್ತಿ ಏರ್ ಟೆಲ್ ಸಂಸ್ಥೆ ವಿದೇಶಿ ಮತ್ತು STD ಕರೆಗಳನ್ನು ಸ್ಥಳೀಯ ಕರೆಗಳೆಂದು ತೋರಿಸಿ ವಂಚನೆ ಮಾಡಿತ್ತು. ಈ ಬಗ್ಗೆ 2003 ರಲ್ಲೇ ಸಂಸ್ಥೆಗೆ ಎಚ್ಚರಿಕೆ ನೀಡಿದ್ದರೂ ಸಹ ಸಂಸ್ಥೆ ಆದೇಶವನ್ನು ಪಾಲಿಸಿದ ಕಾರಣ ದಂಡವನ್ನು ವಿಧಿಸಲಾಗಿದೆ.

- **ಮಾಹಿತಿ ಮತ್ತು ಪ್ರಸರಣ ಸಚಿವಾಲಯದ ಕಾರ್ಯದರ್ಶಿಯಾಗಿ "ಭೀಮಲ್ ಜುಲ್ಕ":** ಮಾಹಿತಿ ಮತ್ತು ಪ್ರಸರಣ ಸಚಿವಾಲಯದ ಕಾರ್ಯದರ್ಶಿಯಾದಗಿ ಭೀಮಲ್ ಜುಲ್ಕ ಅವರು ನೇಮಕಗೊಂಡಿದ್ದಾರೆ. ಜುಲ್ಕ ಅವರು 1979 ನೇ ಬ್ಯಾಚ್ ನ ಐಎಎಸ್ ಅಧಿಕಾರಿ. ಹಾಲಿ ಕಾರ್ಯದರ್ಶಿಯಾದ ಉದಯ್ ಕುಮಾರ್ ವರ್ಮಾ ಅವರು ಇದೇ ಜೂನ್ 30, 2013 ರಂದು ನಿವೃತ್ತಿ ಹೊಂದಲಿದ್ದು, ಇವರ ಸ್ಥಾನವನ್ನು ಜುಲ್ಕ ತುಂಬಲಿದ್ದಾರೆ.

- **ಮಧ್ಯಪ್ರದೇಶ ಅಟಲ್ ಜ್ಯೋತಿ ಯೋಜನೆ ಜಾರಿ:** ಮಧ್ಯ ಪ್ರದೇಶದ ಗ್ರಾಮೀಣ ಭಾಗಗಳಿಗೆ ದಿನದ 24 ಗಂಟೆ ವಿದ್ಯುತ್ ಸರಬರಾಜು ಮಾಡುವ "ಅಟಲ್ ಜ್ಯೋತಿ" ಯೋಜನೆಗೆ ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಚೌಹಣ್ ಅವರು ಚಾಲನೆ ನೀಡಿದರು.

- **ಎರಡು ಉಪಗ್ರಹ ನಿರ್ಮಾಣಕ್ಕೆ ಕೇಂದ್ರ ಒಪ್ಪಿಗೆ:** ಮುಂದಿನ ಎರಡು ವರ್ಷಗಳಲ್ಲಿ ಎರಡು ಸಂಪರ್ಕ ಉಪಗ್ರಹಗಳನ್ನು ನಿರ್ಮಿಸಿ, ಹಾರಿಬಿಡುವ ಇಸ್ರೋದ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇತ್ತೀಚೆಗೆ ನಡೆದ ಸಂಪುಟ ಸಭೆಯಲ್ಲಿ ಜಿಸ್ಯಾಟ್ 15 ಮತ್ತು

ಜಿಸ್ಯಾಟ್ 16 ಎಂಬ ಉಪಗ್ರಹಗಳ ನಿರ್ಮಾಣಕ್ಕೆ ಒಪ್ಪಿಗೆ ಸೂಚಿಸಿದೆ. ಇವುಗಳ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಮುಂದಿನ 18 ತಿಂಗಳಲ್ಲಿ ರೂ 839 ಕೋಟಿ ವ್ಯಯಿಸಲಿವೆ.

- **ಕೇಂದ್ರ ಗೃಹ ಕಾರ್ಯದರ್ಶಿಯಾಗಿ ಅನಿಲ್ ಗೋಸ್ವಾಮಿ**: 1978 ನೇ ಬ್ಯಾಚ್ ನ ಐಎಎಸ್ ಅಧಿಕಾರಿಯಾದ ಅನಿಲ್ ಗೋಸ್ವಾಮಿ ಅವರು ಕೇಂದ್ರ ಗೃಹ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಗೃಹ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಆರ್.ಕೆ.ಸಿಂಗ್ ಅವರು ಸೇವೆಯಿಂದ ನಿವೃತಿ ಹೊಂದಿದ ಕಾರಣ ಈ ಸ್ಥಾನ ತೆರವಾಗಿತ್ತು.

- **ಉತ್ತರಾಖಂಡದ 25 ಹಳ್ಳಿಗಳನ್ನು ದತ್ತು ಪಡೆದ ಹರಿಯಾಣ ಸರ್ಕಾರ**: ಇತ್ತೀಚೆಗೆ ಸುರಿದ ಮಹಾಮಾರಿ ಮಳೆಯಿಂದ ತತ್ತರಿಸಿ ಹೋಗಿರುವ ಉತ್ತರಾಖಂಡದ 25 ಹಳ್ಳಿಗಳನ್ನು ಹರಿಯಾಣ ಸರ್ಕಾರ ದತ್ತು ಪಡೆದಿರುವುದಾಗಿ ಹರಿಯಾಣ ಸರ್ಕಾರ ಹೇಳಿದೆ. ಈ 25 ಹಳ್ಳಿಗಳ ಪುನರ್ ಅಭಿವೃದ್ಧಿಗಾಗಿ ಆರ್ಥಿಕ ಸಹಾಯ ಸೇರಿದಂತೆ ಅಗತ್ಯ ಸೇವೆಗಳನ್ನು ಹರಿಯಾಣ ಸರ್ಕಾರ ಒದಗಿಸಲಿದೆ.

- **"ಮುಖೇಶ್ ಹರಿವಾಲ" ಗೆ ಪ್ರಶಸ್ತಿ**: ಭಾರತ ಅಮೆರಿಕಾ ಹೃದಯ ತಜ್ಞ ಡಾ. ಮುಖೇಶ್ ಹರಿವಾಲ ಅವರಿಗೆ ಪ್ರತಿಷ್ಠಿತ "ಇಂಡಿಯನ್ ಹೆಲ್ತ್ ಕೇರ್ ವಿಷನರಿ ಆಫ್ ದಿ ಡಿಕೇಡ್" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.